# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಸೋಮವಾರ, ಫೆಬ್ರವರಿ 10, 2025

ಸಂಪುಟ : 51 ಸಂಚಿಕೆ : 269 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




# 22 ಕೆರೆ ಏತ ನೀರಾವರಿ ಯೋಜನೆ ಗುಣಮಟ್ಟದ ಕಾಮಗಾರಿಗೆ ಕ್ರಮ

## ತರಳಬಾಳು ಹುಣ್ಣಿಮೆಯಲ್ಲಿ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್

ಭರಮಸಾಗರ,ಫೆ. 9- ಆರೋಗ್ಯ ರಾಷ್ಟ್ರದ ಪ್ರಗತಿಗೆ ಅಡಿಪಾಯವಾಗಿದ್ದು, ಕಳೆದ 75 ವರ್ಷಗಳ ಹಿಂದಿನ ಸ್ಥಿತಿಗೆ ಹೋಲಿಕೆ ಮಾಡಿ ನೋಡಿದರೆ ಭಾರತದ ದೇಶ ಆರೋಗ್ಯ ಕ್ಷೇತ್ರದಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ ಎಂದು ನವದೆಹಲಿ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಪಾಸ್‌ಪೋರ್ಟ್ ಅಧಿಕಾರಿ ಡಾ. ಕೆ.ಜೆ. ಶ್ರೀನಿವಾಸ್ ಹೇಳಿದರು.

ಇಲ್ಲಿನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ 6ನೇ ದಿನದ ಕಾರ್ಯಕ್ರಮದಲ್ಲಿ 'ಆರೋಗ್ಯ ಮತ್ತು ಸಮಾಜ' ವಿಷಯ ಕುರಿತು ಮಾತನಾಡಿದರು.

ಭಾರತದಲ್ಲಿ ಆರೋಗ್ಯ ಅಸಮಾನತೆ ಕಾಣುತ್ತೇವೆ. ಆರೋಗ್ಯಕ್ಕಾಗಿ ದುಬಾರಿ ವೆಚ್ಚಗಳನ್ನು ಭರಿಸುವ ವ್ಯವಸ್ಥೆ ನಿರ್ಮಾಣವಾಗಿದೆ. ಸಾಂಕ್ರಾಮಿಕ ರೋಗಗಳು ಗಣನೀಯವಾಗಿ ಕಡಿಮೆಯಾಗುತ್ತಿದ್ದರೂ ಸಹ ಬಿ.ಪಿ., ಮಧುಮೇಹ, ಹೃದಯ ಸ್ತಂಭ, ಹೃದಯ ರಕ್ತನಾಳಕ್ಕೆ ಸಂಬಂಧಿಸಿದ ಸ್ಥೂಲಕಾಯ ರೋಗಗಳು ಹೆಚ್ಚಾಗುತ್ತಿವೆ ಎಂದು ಹೇಳಿದರು. ಅಪೌಷ್ಟಿಕತೆ ಸಾವು ಮತ್ತು ಅಂಗ ವೈಕಲ್ಯಕ್ಕೆ ಕಾರಣಕಾರಿ ಅಂಶಗಳಾಗಿದ್ದು, ಆಹಾರ ಭದ್ರತೆ, ನೈರ್ಮಲ್ಯ, ಶಿಕ್ಷಣದ ಸುಧಾರಣೆ ಮೂಲಕ ಸರಿದೂಗಿಸಬಹುದು. ವಾಯುಮಾಲಿನ್ಯ (2ನೇ ಪುಟಕ್ಕೆ)

## 5 ರಿಂದ 10 ನೇ ತರಗತಿ ಹೆಣ್ಣುಮಕ್ಕಳಿಗೆ ಕ್ಯಾನ್ಸರ್ ನಿರೋಧಕ 'ವ್ಯಾಕ್ಸಿನೇಷನ್'



ಭರಮಸಾಗರ, ಫೆ 9- ಸಿರಿಗೆರೆ ವಿದ್ಯಾಸಂಸ್ಥೆಯಲ್ಲಿ ಓದುತ್ತಿರುವ 5 ರಿಂದ 10 ನೇ ತರಗತಿಯ ಹೆಣ್ಣು ಮಕ್ಕಳಿಗೆ ಈ ಸಂಸ್ಥೆಯ ಹಣದಲ್ಲಿಯೇ ಕ್ಯಾನ್ಸರ್ ನಿರೋಧಕ 'ವ್ಯಾಕ್ಸಿನೇಷನ್' ಹಾಕಿಸುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಘೋಷಿಸಿದರು.

ಇಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ 6ನೇ ದಿನದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಅವರು ಮಾತನಾಡಿದರು.

ಮಹಿಳೆಯರಲ್ಲಿ ಇಷ್ಟೊಂದು (2ನೇ ಪುಟಕ್ಕೆ)

# ಭಾರತ-ಬಾಂಗ್ಲಾದೇಶ ಗಡಿಯಲ್ಲಿ ಉರ್ದು, ಅರೇಬಿಕ್ ಭಾಷೆಯಲ್ಲಿ ಶಂಕಾಸ್ಪದ ಸಂಕೇತ

ಕೊಲ್ಕತಾ, ಫೆ.9 - ತಡರಾತ್ರಿ ವೇಳೆ ಭಾರತ ಮತ್ತು ಬಾಂಗ್ಲಾದೇಶದ ಗಡಿಯಲ್ಲಿ ಬೆಂಗಾಳಿ, ಉರ್ದು ಹಾಗೂ ಅರೇಬಿಕ್ ಭಾಷೆಗಳಲ್ಲಿ ಶಂಕಾಸ್ಪದ ಸಂಕೇತಗಳನ್ನು ನೀಡಲಾಗುತ್ತಿರುವುದನ್ನು ಹವ್ಯಾಸಿ ಹ್ಯಾಮ್ ರೇಡಿಯೋ ಆಪರೇಟರ್‌ಗಳು ಪತ್ತೆ ಮಾಡಿದ್ದಾರೆ

ಎರಡು ತಿಂಗಳಿನಿಂದ ದಕ್ಷಿಣ ಬಂಗಾಳಕ್ಕೆ ಹೊಂದಿಕೊಂಡಿರುವ ಗಡಿಯಲ್ಲಿ ಈ ರೀತಿಯ ಚಟುವಟಿಕೆ ನಡೆಯುತ್ತಿರುವುದು ಕಳವಳಕ್ಕೆ ಕಾರಣವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಬಾಂಗ್ಲಾದೇಶದಲ್ಲಿ ಅಶಾಂತಿ ಹಾಗೂ ಭಾರತ ವಿರೋಧಿ ಹೇಳಿಕೆಗಳು ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಈ ಬೆಳವಣಿಗೆ ಆಗಿದೆ.

ಕಳೆದ ಡಿಸೆಂಬರ್ ವೇಳೆ ಬಂಗಾಳಿ, ಅರೇಬಿಕ್ ಹಾಗೂ ಉರ್ದು ಭಾಷೆಗಳಲ್ಲಿ ಉತ್ತರ 24 ಪರಗಣ ಹಾಗೂ ದಕ್ಷಿಣ 24 ಪರಗಣ ಜಿಲ್ಲೆಗಳ ಹಲವೆಡೆ ಶಂಕಾಸ್ಪದವಾದ ಸಂಕೇತಗಳು ಕಂಡುಬಂದಿವೆ ಎಂದು ದೂರಲಾಗಿದೆ. ಹ್ಯಾಮ್ ರೇಡಿಯೋ ಆಪರೇಟರ್‌ಗಳು ಈ ಬಗ್ಗೆ ಕೇಂದ್ರ ಸಂಪರ್ಕ ಸಚಿವಾಲಯಕ್ಕೆ ಮಾಹಿತಿ ನೀಡಿದ್ದಾರೆ. ಈ ವಿಷಯದ ಬಗ್ಗೆ ಕ್ರಮ ತೆಗೆದುಕೊಳ್ಳಲು ಕೊಲ್ಕೊತ್ತಾದಲ್ಲಿರುವ ಅಂತರರಾಷ್ಟ್ರೀಯ ರೇಡಿಯೋ ನಿಗಾ ಕೇಂದ್ರಕ್ಕೆ ತಿಳಿಸಲಾಗಿದೆ.



### ಹ್ಯಾಮ್ ರೇಡಿಯೋ ಬಳಕೆದಾರರಿಂದ ದೂರು

ಹ್ಯಾಮ್ ರೇಡಿಯೋ ಆಪರೇಟರ್‌ಗಳೂ ಸಹ ಈ ಬಗ್ಗೆ ನಿಗಾ ವಹಿಸಬೇಕು ಹಾಗೂ ಶಂಕಾಸ್ಪದ ಸಂಕೇತಗಳು ಮತ್ತೆ ಕಂಡು ಬಂದರೆ ತಿಳಿಸಬೇಕು ಎಂದು ಸೂಚಿಸಲಾಗಿದೆ.

ಬೆಳಗಿನ ಜಾವ ಒಂದರಿಂದ ಮೂರು ಗಂಟೆ ನಡುವೆ ಬಾಂಗ್ಲಾದೇಶಿ ಶೈಲಿಯ ಬಂಗಾಳಿ ಭಾಷೆ ಹಾಗೂ ಉರ್ದು ಮತ್ತು ಅರೇಬಿಕ್ ಭಾಷೆಗಳ ಸಂಕೇತಗಳು ಕಂಡುಬಂದಿವೆ. ಕೆಲವೊಮ್ಮೆ ನಾವು ಗುರುತಿಸಲು ಸಾಧ್ಯವಾಗದ ಭಾಷೆಗಳಲ್ಲೂ ಸಂಕೇತ ನೀಡಲಾಗಿದೆ. ಈ ಸಂಕೇತ ಕಳಿಸಿದವರು ಯಾರು ಎಂಬುದನ್ನು ಗುರುತಿಸಲು ನಾವು ಸಂಪರ್ಕಿಸಲು ಯತ್ನಿಸಿದಾಗ ಯಾವುದೇ ಉತ್ತರ ದೊರೆತಿಲ್ಲ ಎಂದು ಪಶ್ಚಿಮ ಬಂಗಾಳ ರೇಡಿಯೋ ಕ್ಲಬ್ ಕಾರ್ಯದರ್ಶಿ ಅಂಬರೀಶ್ ನಾಗ್ ಬಿಸ್ವಾಸ್ ಹೇಳಿದ್ದಾರೆ.

ಮಧ್ಯ ಡಿಸೆಂಬರ್ ವೇಳೆ ಉತ್ತರ 24 ಪರಗಣ ಜಿಲ್ಲೆಯ ಸೋಡೆಪುರ್ ಎಂಬಲ್ಲಿನ ರೇಡಿಯೋ ಆಪರೇಟರ್ ಮೊದಲು ಈ ಸಂಕೇತ ಗುರುತಿಸಿದ್ದರು.

ಆರಂಭದಲ್ಲಿ ನಾವು ಇದಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಲಿಲ್ಲ. ಆದರೆ ಇದೇ ರೀತಿಯ ಸಂಕೇತಗಳು ದಕ್ಷಿಣ 24 ಪರಗಣ ಜಿಲ್ಲೆಯಲ್ಲೂ ಕಂಡುಬಂದವು. ಜನವರಿ ಮಧ್ಯಭಾಗದಲ್ಲಿ ಗಂಗಾಸಾಗರ ಮೇಳ ನಡೆಯುವ ವೇಳೆ ಹಲವು ಹ್ಯಾಮ್ ರೇಡಿಯೋ ಆಪರೇಟರ್‌ಗಳು ಶಂಕಾಸ್ಪದ ಸಂಕೇತ ಪತ್ತೆ ಮಾಡಿದ್ದಾರೆ ಎಂದು ಬಿಸ್ವಾಸ್ ಹೇಳಿದ್ದಾರೆ.

ಜಾಗತಿಕವಾಗಿ ಹ್ಯಾಮ್ ರೇಡಿಯೋ ಬಳಕೆದಾರರಲ್ಲಿ ಇರುವ ಪದ್ಧತಿಯ ಪ್ರಕಾರ ಹಾಲಿ ನಡೆಯುತ್ತಿರುವ ಸಂವಾದದ ವೇಳೆ ಮೂರನೇಯವರು ಬಂದಾಗ ತಮ್ಮ ಗುರುತು ತಿಳಿಸಬೇಕು. ಆದರೆ ಈ ಪ್ರಕರಣಗಳಲ್ಲಿ ಗುರುತು ಕೇಳಿದಾಗ (4ನೇ ಪುಟಕ್ಕೆ)

## ಆಮದು ತೆರಿಗೆ ಕಡಿತ : ಚಿನ್ನದ ಕಳ್ಳ ಸಾಗಣೆಯಲ್ಲಿ ಇಳಿಕೆ



ನವದೆಹಲಿ, ಫೆ. 9 - ಕೇಂದ್ರ ಸರ್ಕಾರ ಕಳೆದ ವರ್ಷ ಜುಲೈ ತಿಂಗಳಲ್ಲಿ ಬಂಗಾರದ ಆಮದಿನ ಮೇಲಿನ ತೆರಿಗೆಯನ್ನು ಕಡಿತಗೊಳಿಸಿದ ನಂತರ ಅದರ ಕಳ್ಳ ಸಾಗಣೆ ಗಣನೀಯವಾಗಿ ಕಡಿಮೆಯಾಗಿದೆ ಎಂದು ಕೇಂದ್ರೀಯ ನೇರ ತೆರಿಗೆ ಹಾಗೂ ಸುಂಕ ಮಂಡಳಿಯ ಅಧ್ಯಕ್ಷ ಸಂಜಯ್ ಕುಮಾರ್ ಹೇಳಿದ್ದಾರೆ.

ಕೇಂದ್ರ ಸರ್ಕಾರ ಬಂಗಾರದ ಮೇಲಿನ ತೆರಿಗೆಯನ್ನು ಶೇ. 15ರಿಂದ ಶೇ. 6ಕ್ಕೆ ಇಳಿಕೆ ಮಾಡಿತ್ತು. ಇತ್ತೀಚೆಗೆ ಲಭ್ಯವಿರುವ ಮಾಹಿತಿಯ ಪ್ರಕಾರ ಪ್ರಸಕ್ತ ಹಣಕಾಸು ವರ್ಷದಲ್ಲಿ ಏಪ್ರಿಲ್ - ಜೂನ್ ಅವಧಿಯಲ್ಲಿ ಸುಂಕ ಹಾಗೂ ಡಿಆರ್‌ಐ ಅಧಿಕಾರಿಗಳು 847 ಕೆಜಿ ತೂಕದ ಬಂಗಾರ ವಶಪಡಿಸಿಕೊಂಡಿದ್ದರು. ವಿವಿಧ ವಿಮಾನ ನಿಲ್ದಾಣಗಳಲ್ಲಿ ಈ ಬಂಗಾರ ವಶಪಡಿಸಿಕೊಳ್ಳಲಾಗಿದ್ದು, ಅದರ ಮೌಲ್ಯ 544 ಕೋಟಿ ರೂ. ಆಗಿದೆ. ಅಧಿಕಾರಿಗಳು (4ನೇ ಪುಟಕ್ಕೆ)

## ಛತ್ತೀಸ್‌ಘಡ : 31 ನಕ್ಸಲರು ಹತ



ಬಿಜಾಪುರ್, ಫೆ. 9 - ಛತ್ತೀಸ್‌ಘಡದ ಬಿಜಾಪುರ್ ಜಿಲ್ಲೆಯಲ್ಲಿ ನಡೆಸಲಾದ ಪ್ರಮುಖ ಕಾರ್ಯಾಚರಣೆಯಲ್ಲಿ 31 ನಕ್ಸಲರು ಹತರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ಇಬ್ಬರು ಭದ್ರತಾ ಸಿಬ್ಬಂದಿ ಸಹ ಸಾವನ್ನಪ್ಪಿದ್ದಾರೆ ಹಾಗೂ ಇನ್ನಿಬ್ಬರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

650ಕ್ಕೂ ಹೆಚ್ಚು ಭದ್ರತಾ ಸಿಬ್ಬಂದಿ ಇಂದಿರಾವತಿ ರಾಷ್ಟ್ರೀಯ ಉದ್ಯಾನವನ ಪ್ರದೇಶವನ್ನು ಬೇರೆ ಬೇರೆ ದಿಕ್ಕುಗಳಿಂದ ಸುತ್ತುವರಿದು ಕಾರ್ಯಾಚರಣೆ ನಡೆಸಿದ್ದರು. ಕಾರ್ಯಾ ಚರಣೆಯಲ್ಲಿ 31 ನಕ್ಸಲರು ಅವರ ನೆಲೆಯಲ್ಲಿ ಹತರಾಗಿದ್ದಾರೆ ಎಂದು ಛತ್ತೀಸ್‌ಘಡ ಉಪಮುಖ್ಯಮಂತ್ರಿ ವಿಜಯ ಶರ್ಮ ತಿಳಿಸಿದ್ದಾರೆ.

ಕಾರ್ಯಚರಣೆ ನಂತರ ಹೇಳಿಕೆ ನೀಡಿರುವ ಮುಖ್ಯಮಂತ್ರಿ ವಿಷ್ಣುದೇವ ಸಾಯಿ, ದೇಶ ಹಾಗೂ ರಾಜ್ಯದಲ್ಲಿ ನಕ್ಸಲ್‌ವಾದದ ಅಂತ್ಯ ನಿಶ್ಚಿತವಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ನೇತೃತ್ವದಲ್ಲಿ ಮಾರ್ಚ್ 2026ರ ವೇಳೆಗೆ ರಾಜ್ಯ ನಕ್ಸಲರಿಂದ ಮುಕ್ತವಾಗಲಿದೆ ಎಂದಿದ್ದಾರೆ.

ಈ ವರ್ಷ ಇದುವರೆಗೂ ಛತ್ತೀಸ್‌ಘಡದಲ್ಲಿ ನಡೆಸಲಾದ ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ಒಟ್ಟು 81 ನಕ್ಸಲರು ಹತರಾಗಿದ್ದಾರೆ.

ವಿವಿಧ ಭದ್ರತಾ ಪಡೆಗಳ ಜಂಟಿ ತಂಡ ಇಂದಿರಾವತಿ ರಾಷ್ಟ್ರೀಯ ಉದ್ಯಾನ ಪ್ರದೇಶಕ್ಕೆ ಭಾನುವಾರ ಬೆಳಗ್ಗೆ ತೆರಳಿ (4ನೇ ಪುಟಕ್ಕೆ)

# ಸಂವಿಧಾನದ ಹಕ್ಕು ಪಡೆಯಲು ಸಂಘಟನೆಯಾಗಬೇಕು

## ವಾಲ್ಮೀಕಿ ಜಾತ್ರೋತ್ಸವದಲ್ಲಿ ರಾಜನಹಳ್ಳಿ ಪೀಠದ ಜಗದ್ಗುರು ಶ್ರೀ ಪ್ರಸನ್ನಾನಂದ ಸ್ವಾಮೀಜಿ ಕರೆ

ರಾಜನಹಳ್ಳಿ, ಫೆ.9- ಬೇಡ ನಾಯಕ ಸಮಾಜಕ್ಕೆ ಬಹುದೊಡ್ಡ ಚರಿತ್ರೆ ಇದೆ. ಅಂಬೇಡ್ಕರ್ ಕೊಟ್ಟ ಸಂವಿಧಾನದ ಹಕ್ಕುಗಳನ್ನು ಪಡೆದುಕೊಳ್ಳಲು ಸಂಘಟನೆಯಾಗಬೇಕು ಎಂದು ರಾಜನಹಳ್ಳಿಯ ಜಗದ್ಗುರು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಹೇಳಿದರು.

ಹರಿಹರ ತಾಲ್ಲೂಕು ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ 27ನೇ ವಾರ್ಷಿಕೋತ್ಸವ, ಲಿಂಗೈಕ್ಯ ಜಗದ್ಗುರು ಶ್ರೀ ಪುಣ್ಯಾನಂದಪುರಿ ಸ್ವಾಮೀಜಿಯವರ 18ನೇ ವರ್ಷದ ಪುಣ್ಯಾರಾಧನೆ ಹಾಗೂ ಜಗದ್ಗುರು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿಯವರ 17ನೇ ವರ್ಷದ ಪಟ್ಟಾಧಿಕಾರ ಮಹೋತ್ಸವದ ಅಂಗವಾಗಿ ಜರುಗಿದ ಜನಜಾಗೃತಿ ಜಾತ್ರಾ ಮಹೋತ್ಸವ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಜಾತ್ರೆ ಮೂಲಕ ಜಾಗೃತರಾಗಿದ್ದೇವೆ ಎನ್ನುವುದನ್ನು ಸರ್ಕಾರಕ್ಕೆ ತಿಳಿಸುವುದೇ ಜಾತ್ರೆಯ ಮುಖ್ಯ ಉದ್ದೇಶವಾಗಿದೆ. ರಾಜ್ಯದಲ್ಲಿ ನಕಲಿ ಜಾತಿ ಪ್ರಮಾಣ ಪತ್ರ, ಸುಳ್ಳು ಜಾತಿ ಪ್ರಮಾಣ ಪಡೆದುಕೊಳ್ಳುತ್ತಿದ್ದು, ಸರ್ಕಾರ ತಡೆಯಬೇಕು.



ಬ್ಯಾಕ್‌ಲಾಗ್ ಹುದ್ದೆಗಳನ್ನು ಸರ್ಕಾರ ತುಂಬಿಕೊಳ್ಳಬೇಕು ಎಂಬುದು ನಮ್ಮ ಆಶಯ ವಾಗಿದೆ. ಕಳೆದ 17 ವರ್ಷಗಳಿಂದ ನಾವು ರಾಜ್ಯವನ್ನು ಸುತ್ತಿ ಸಮಾಜವನ್ನು ಸಂಘಟನೆ ಮಾಡುತ್ತಿದ್ದೇವೆ. ಸರ್ಕಾರದ ಶಕ್ತಿಯಾಗಿರುವ ನಮ್ಮ ಸಚಿವರುಗಳು ಅಧಿವೇಶನದಲ್ಲಿ ಮಾತನಾಡಿ, ನಮ್ಮ ಸಮಾಜಕ್ಕೆ ನ್ಯಾಯ ಕೊಡಿಸಬೇಕು ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಗೃಹ ಸಚಿವ ಡಾ.ಜಿ. ಪರಮೇಶ್ವರ್, ಶ್ರೀಗಳು ರಾಜನಹಳ್ಳಿಯಿಂದ ರಾಜಧಾನಿವರೆಗೆ ಪಾದಯಾತ್ರೆ ಮಾಡಿ, ಸುದೀರ್ಘವಾಗಿ ಅಹೋರಾತ್ರಿ ಧರಣಿ ಸತ್ಯಾಗ್ರಹ ಮಾಡಿ, ಸರ್ಕಾರಕ್ಕೆ ಎಚ್ಚರಿಕೆ ನೀಡಿದ ನಂತರ, ಮೀಸಲಾತಿ ಹೆಚ್ಚಳವಾಯಿತು. ಇಡೀ ವಿಶ್ವ ರಾಮಾಯಣ ಒಪ್ಪಿಕೊಂಡಿದೆ. ಶೋಷಿತ ಸಮುದಾಯ ಉತ್ತರದಲ್ಲಿ ಅತ್ಯಂತ ಹಿಂದುಳಿದಿದೆ. ಶಿಕ್ಷಣದ ಮೂಲಕ ಸಮಾಜ ಬದಲಾವಣೆಯಾಗಬೇಕು. ಆ ನಿಟ್ಟಿನಲ್ಲಿ ಮಠ ಉತ್ತಮ ಕೆಲಸ ಮಾಡುತ್ತಿದೆ. ಜಾತಿ ಜನಗಣತಿ ಯಾಗಬೇಕೆಂಬುದು ಎಲ್ಲರ ಆಸೆಯಾಗಿದೆ. ಸರ್ಕಾರಕ್ಕೆ ವರದಿ ಬಂದರೂ ಕೆಲ ವಿಚ್ಛಿದ್ರಕಾರಕ ಶಕ್ತಿಗಳು ತಡೆಯುವ ಕೆಲಸ ಮಾಡುತ್ತಿವೆ. ಆದರೂ ಕೂಡ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಂತಹ ಸಂದರ್ಭ ಬಂದರೂ ಕೂಡ ಜಾತಿ ಜನಗಣತಿ ವರದಿ ಪ್ರಕಟಣೆ ಮಾಡುತ್ತಾರೆ ಎಂದರು.

ಪ್ರತಿವರ್ಷ 58 ಸಾವಿರ ಕೋಟಿ ಹಣ ವ್ಯಯ ಮಾಡಿ, 5 ಗ್ಯಾರಂಟಿಗಳನ್ನು ನಾವು ಪೂರೈಸುತ್ತಿದ್ದೇವೆ. ಸಿದ್ದರಾಮಯ್ಯನವರ ಸರ್ಕಾರ ಕಷ್ಟ - ಸುಖದಲ್ಲಿ (4ನೇ ಪುಟಕ್ಕೆ)

# ಪರಿಸರ ಹಣಕಾಸು ವ್ಯವಸ್ಥೆ ಶೀಘ್ರ ಸಿದ್ಧ

ನವದೆಹಲಿ, ಫೆ.9 - ಸುಸ್ಥಿರ ಪರಿಸರಕ್ಕೆ ಅನುಗುಣವಾಗಿ ಹೂಡಿಕೆಗೆ ಉತ್ತೇಜನ ನೀಡುವ ಪರಿಸರ ಹಣಕಾಸು ವ್ಯವಸ್ಥೆಯು ಆರು ತಿಂಗಳಲ್ಲಿ ಸಿದ್ಧವಾಗಲಿದೆ ಎಂದು ಕೇಂದ್ರ ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ಅಜಯ್ ಸೇಟ್ ತಿಳಿಸಿದ್ದಾರೆ.

ಪರಿಸರ ಹಣಕಾಸು ವ್ಯವಸ್ಥೆಗೆ ಸಂಬಂಧಿಸಿದಂತೆ ಕಾರ್ಯ ನಿರ್ವ ಹಿಸಲಾಗುತ್ತಿದೆ. ಉಕ್ಕು ಸಚಿವಾಲಯವು ಈಗಾಗಲೇ ತನ್ನ ಕಾರ್ಯ ಪೂರ್ಣಗೊಳಿಸಿದೆ. ಅವರು ಈ ಕುರಿತು ವರದಿ ಬಿಡುಗಡೆ ಮಾಡಿ ದ್ದಾರೆ ಎಂದು ಸೇಟ್ ಹೇಳಿದ್ದಾರೆ.

ಆದರೆ ಆರ್ಥಿಕತೆಯ ಎಲ್ಲಾ ವಲಯಗಳಿಗೆ ಸಂಬಂಧಿಸಿದಂತೆ ಸಮಗ್ರ ಪ್ರಕ್ರಿಯೆಯನ್ನು ಕೈಗೊಳ್ಳ ಲಾಗುತ್ತಿದೆ. ಈ ಕುರಿತ ಮಾದರಿ ವರದಿಯನ್ನು ಸಂಬಂಧಿಸಿದವರ ಜೊತೆ ಈಗಾಗಲೇ ಹಂಚಿಕೊಳ್ಳ ಲಾಗಿದ್ದು, ಅವರ ನಿಲುವು ಪಡೆಯ ಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಪ್ರತಿಯೊಂದು ವಲಯಕ್ಕೆ ಪ್ರತ್ಯೇಕ ಸಮಿತಿಯನ್ನು ರಚಿಸಲಾಗಿದೆ. ಮುಂದಿನ ಆರು ತಿಂಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದವರು ತಿಳಿಸಿದ್ದಾರೆ.

ಪರಿಸರ ಹಣಕಾಸು ಕುರಿತ ವ್ಯವಸ್ಥೆಯನ್ನು ರೂಪಿಸಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಅವರು ಬಜೆಟ್ ಮಂಡನೆ ವೇಳೆ ತಿಳಿಸಿದ್ದರು. ಪರಿಸರಕ್ಕೆ ಅನುಗುಣವಾಗಿ ಹೊಂದಿಕೊಳ್ಳುವುದು ಹಾಗೂ ಪರಿಸರದ ಸಮಸ್ಯೆಗಳನ್ನು ನಿವಾರಿಸುವುದಕ್ಕೆ ಅನುಗುಣವಾದ ಪರಿಸರ (4ನೇ ಪುಟಕ್ಕೆ)

## ಸವಿತಾ ಸೊಸೈಟಿ ಚುನಾವಣೆ : ರಂಗಸ್ವಾಮಿ ಗುಂಪಿಗೆ ಜಯ




ದಾವಣಗೆರೆ, ಫೆ. 9 - ನಗರದ ಸವಿತಾ ಕ್ರೆಡಿಟ್ ಆಪರೇಟಿವ್ ಸೊಸೈಟಿ ಆಡಳಿತ ಮಂಡಳಿಗೆ ನಿನ್ನೆ ನಡೆದ ಚುನಾವಣೆಯಲ್ಲಿ ಸಂಘದ ಹಾಲಿ ಅಧ್ಯಕ್ಷರೂ ಆದ ವಕೀಲ ಎನ್. ರಂಗಸ್ವಾಮಿ ನೇತೃತ್ವದ ಗುಂಪಿಗೆ ಭರ್ಜರಿ ಜಯ ಲಭಿಸಿದೆ.

ಎನ್. ರಂಗಸ್ವಾಮಿ, ಜಿ.ಸಿ.ಶ್ರೀನಿವಾಸ್, ಸಿ.ರಾಮಾಂಜನೇಯ, ಜೆ.ಮಂಜುನಾಥ್, ಎನ್. ಗೋವಿಂದರಾಜ್ ಅವರುಗಳು ಮತ್ತೊಂದು ಅವಧಿಗೆ ಪುನರಾಯ್ಕೆಯಾಗಿದ್ದು, ಇದೇ ತಂಡದಿಂದ ಪ್ರಥಮ ಬಾರಿಗೆ ಸ್ಪರ್ಧೆ ಮಾಡಿದ್ದ ಎಮ್. ಗಂಗಾಧರ್, ಜಿ.ಟಿ.ಮಂಜುನಾಥ್, ಜಿ.ಆರ್. ಪಾಂಡುರಂಗ ವಿಠ್ಠಲ ಜಯ ಗಳಿಸಿದ್ದಾರೆ.

ಮಹಿಳಾ ನಿರ್ದೇಶಕರಾಗಿ ಶ್ರೀಮತಿ ಸಂಜೀವಮ್ಮ, ಶ್ರೀಮತಿ ಸುವರ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.


|| ಕೊಡದಗುಡ್ಡ ಶ್ರೀ ವೀರಭದ್ರೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಶ್ರೀ ಯಜಮಾನ್ ಮೋತಿ ಪಂಚಾಕ್ಷರಪ್ಪ ದಾವಣಗೆರೆ ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 06.02.2025ನೇ ಗುರುವಾರ ಬೆಳಿಗ್ಗೆ 6.15 ಕ್ಕೆ ನನ್ನ ಧರ್ಮಪತ್ನಿಯಾದ

**ಶ್ರೀಮತಿ ವೈ. ಮೋತಿ ಶಶಿಮುಖಿ**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆ'ಯನ್ನು**

ದಿನಾಂಕ : 10.02.2025ನೇ ಸೋಮವಾರ ಮಧ್ಯಾಹ್ನ 12.30ಕ್ಕೆ ಶ್ರೀ ಸದ್ಯೋಜಾತ ಶಿವಾಚಾರ್ಯ ನಿಕೇತನ, ಎಂ.ಸಿ.ಸಿ. ಬಿ ಬ್ಲಾಕ್, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು : ಶ್ರೀ ಯಜಮಾನ್ ಮೋತಿ ಪಂಚಾಕ್ಷರಪ್ಪ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಯಜಮಾನ್ ಮೋತಿ ವಂಶಸ್ಥರು, ಪಲ್ಲಾಗಟ್ಟೆ ವಂಶಸ್ಥರು ಹಾಗೂ ಬಂಧು-ಮಿತ್ರರು.

ವಿ.ಸೂ. : ವಿಶೇಷ ಆಹ್ವಾನ ಪತ್ರಿಕೆ ತಲುಪದೇ ಇರುವವರು, ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



## ಪ್ರಥಮ ವರ್ಷದ ಪುಣ್ಯಸ್ಮರಣೆ




**ಲಿಂ|| ಶ್ರೀ ಕಿತ್ತೂರು ಜಯಣ್ಣನವರು**

ನಿಧನ : 01.03.2024

ಜಗಳೂರು ತಾಲ್ಲೂಕು ಉದ್ದಗಟ್ಟ ಗ್ರಾಮದ, ವೀರಶೈವ ಸಮಾಜದ ಹಿರಿಯ ಮುಖಂಡರೂ, ದಾವಣಗೆರೆಯ ಹೆಸರಾಂತ ವರ್ತಕರೂ, ಸಮಾಜ ಸೇವಕರೂ ಆಗಿದ್ದ

**ಶ್ರೀ ಕಿತ್ತೂರು ಜಯಣ್ಣ** ಅವರ

'ಪ್ರಥಮ ವರ್ಷದ ಪುಣ್ಯಸ್ಮರಣೆ'ಯನ್ನು

ದಿನಾಂಕ : 10.02.2025ರ ಸೋಮವಾರ ಬೆಳಿಗ್ಗೆ 10.00 ಗಂಟೆಗೆ ಕೆ.ಜೆ. ಕಾಂಪ್ಲೆಕ್ಸ್, ನಿಜಲಿಂಗಪ್ಪ ಬಡಾವಣೆ, ಬಕ್ಕೇಶ್ವರ ಕಲ್ಯಾಣ ಮಂಟಪದ ಹತ್ತಿರ,

ಷ|| ಬ್ರ|| ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳು, ಕಣ್ವಕುಪ್ಪೆ ಗವಿಮಠ, ಜಗಳೂರು ತಾ.

ಇವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

♦ ಶ್ವೇತಾ ಕೆ.ಜೆ. ಶಶಿಕುಮಾರ ♦ ಸುಧಾ ಕೆ.ಜೆ. ಚಂದ್ರಶೇಖರಗೌಡ
♦ ಹಾಲಪ್ಪ, ನಿವೃತ್ತ ಪೊಲೀಸ್ ಅಧಿಕಾರಿ

ಮೊ. : 96630 69951, 94484 39662

# ಜಾತಿ ಗಣತಿ ಮಾಡದೇ ಕಾಲಹರಣ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರ

ರಾಜನಹಳ್ಳಿ, ಫೆ.9- ಕಾಂಗ್ರೆಸ್ ಸರ್ಕಾರ ಜಾತಿ ಗಣತಿ ಮಾಡದೇ ವಿನಾಕಾರಣ ಕಾಲ ಹರಣ ಮಾಡುತ್ತಿದೆ ಎಂದು ಮಾಜಿ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಹರಿಹರ ತಾಲ್ಲೂಕಿನ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ 27ನೇ ವಾರ್ಷಿಕೋತ್ಸವ, ಲಿಂಗೈಕ್ಯ ಜಗದ್ಗುರು ಶ್ರೀ ಪುಣ್ಯಾನಂದಪುರಿ ಮಹಾ ಸ್ವಾಮೀಜಿಯವರ 18ನೇ ವರ್ಷದ ಪುಣ್ಯಾರಾಧನೆ ಹಾಗೂ ಜಗದ್ಗುರು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಮಹಾಸ್ವಾಮೀಜಿಯವರ 17ನೇ ವರ್ಷದ ಪಟ್ಟಾಧಿಕಾರ ಮಹೋತ್ಸವದ ಅಂಗವಾಗಿ ಜರುಗಿದ ಜನಜಾಗೃತಿ ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.



ವಾಲ್ಮೀಕಿ ಜಾತ್ರೋತ್ಸವದಲ್ಲಿ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ತರಾಟೆ

ವಾಲ್ಮೀಕಿ ವಿಶ್ವ ಕಂಡ ಶ್ರೇಷ್ಠ ಕವಿ. ಜಗತ್ತಿನ ಹತ್ತು ಶ್ರೇಷ್ಠ ಗ್ರಂಥಗಳಲ್ಲಿ ವಾಲ್ಮೀಕಿ ರಾಮಾಯಣ ಪ್ರಮುಖವಾಗಿದೆ. ರಾಮಾಯಣ ಧರ್ಮ ನೀತಿಯ ಮಹಾನ್ ಗ್ರಂಥ. ರಾಮ ರಾಜ್ಯದಲ್ಲಿ ಸಮಾನತೆ ಆಡಳಿತ ಜೊತೆಗೆ ಸಮೃದ್ಧ ಆಡಳಿತ ನೀಡಿದ ಹೆಗ್ಗಳಿಕೆ ಇದೆ. ಮೀಸಲಾತಿ ಹೆಚ್ಚಳಕ್ಕೆ ಶ್ರೀಗಳು ಸುದೀರ್ಘ ಹೋರಾಟ ಮಾಡಿ, ಮೀಸಲಾತಿ ಹೆಚ್ಚಳ ಮಾಡುವಂತೆ ನಮ್ಮ ಮೇಲೆ ಒತ್ತಡ ಹಾಕಿದರು. ಮಹರ್ಷಿ ವಾಲ್ಮೀಕಿಯವರ ಪ್ರೇರಣೆಯಂತೆ ಮೀಸಲಾತಿ ಹೆಚ್ಚಿಸಲಾಯಿತು. ಜಾತಿ ಗಣತಿ ಬಗ್ಗೆ ನಮ್ಮ ಸರ್ಕಾರದಲ್ಲಿ ಪ್ರಸ್ತಾಪ ಮಾಡಲಾಗಿತ್ತು.

ಈ ಸಮಾಜದವರು ಶಿಕ್ಷಣವಂತರಾಗಿ ನಿಮ್ಮ ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳಬೇಕು. ಮೀಸಲಾತಿ ಹೆಚ್ಚಳದಿಂದ ವೈದ್ಯಕೀಯ, ಇಂಜಿನಿಯರಿಂಗ್ ಸ್ಥಾನಗಳು ಸಿಗುತ್ತವೆ. ಈ ವಾಲ್ಮೀಕಿ ನಿಗಮದಲ್ಲಿ ಹಗರಣ ಆಗಿದ್ದು, ನೀವು ಸಾಮಾಜಿಕ ನ್ಯಾಯವನ್ನು ಹೇಗೆ ಕೊಡುತ್ತೀರಿ ? ಎಂದು ಕಾಂಗ್ರೆಸ್ ಸರ್ಕಾರಕ್ಕೆ ಚಾಟಿ ಏಟು ಬೀಸಿದರು.

ಮಾಜಿ ಸಚಿವ ಬಸವನಗೌಡ ಪಾಟೀಲ್ ಯತ್ನಾಳ್ ಮಾತನಾಡಿ, ವಾಲ್ಮೀಕಿ ನಾಯಕ ಸಮಾಜದವರು ಮುಂದಿನ ದಿನಗಳಲ್ಲಿ ಈ ರಾಜ್ಯದ ಮುಖ್ಯ ಮಂತ್ರಿಯಾಗಲಿ, ಅವರಿಗೆ ನಮ್ಮ ಸಹಕಾರ ಯಾವತ್ತು ಇದೆ ಎಂದರು.

ಸಚಿವ ಶಿವರಾಜ್ ತಂಗಡಗಿ, ರಾಜ್ಯದಲ್ಲಿ ಪರಿಶಿಷ್ಟ ಜಾತಿ - ಪಂಗಡವರು ಒಂದಾಗ ಬೇಕು. ಆ ನಿಟ್ಟಿನಲ್ಲಿ ರಾಜನಹಳ್ಳಿ ಶ್ರೀಗಳು ಮೀಸಲಾತಿಯನ್ನು ಎಸ್.ಸಿ ಮತ್ತು ಎಸ್.ಟಿ ಯವರಿಗೆ ಹೆಚ್ಚಳ ಮಾಡುವ ಮೂಲಕ ಸರ್ವ ಜನಾಂಗದ ಶ್ರೀಗಳಾಗಿದ್ದಾರೆ ಎಂದರು.

ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ, ಮಾಜಿ ಸಚಿವರಾದ ಬಿ.ಸಿ.ಪಾಟೀಲ್, ಮುರುಗೇಶ್ ನಿರಾಣಿ, ಮಾಜಿ ಶಾಸಕ ಎಸ್.ವಿ. ರಾಮಚಂದ್ರಪ್ಪ, ಬಿಜೆಪಿ ಎಸ್.ಟಿ. ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರ ಹನುಮಂತು, ಮಾಜಿ ಶಾಸಕ ರಾಜುಗೌಡ, ವಾಗ್ಮಿ ನಿಖೇತ ರಾಜ್ ಮೌರ್ಯ ಮಾತನಾಡಿದರು.


ಮಹರ್ಷಿ ವಾಲ್ಮೀಕಿ ಜಾತ್ರೆಯ ಅಧ್ಯಕ್ಷರೂ ಜಗಳೂರು ಶಾಸಕ ಬಿ. ದೇವೇಂದ್ರಪ್ಪ ಚಿಕ್ಕಮ್ಮನಹಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಇದೇ ವೇಳೆ ಹರ್ತಿಕೋಟೆ ವೀರೇಂದ್ರ ಸಿಂಹ ಅವರಿಗೆ 'ವಾಲ್ಮೀಕಿ ರತ್ನ' ಪ್ರಶಸ್ತಿ ಹಾಗೂ ಚಲನಚಿತ್ರ ನಟ ಶಶಿಕುಮಾರ್ ಅವರಿಗೆ 'ಮದಕರಿ ನಾಯಕ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ರಾಜನಹಳ್ಳಿಯ ಜಗದ್ಗುರು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಹಾಗೂ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು.

ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ, ಮಾಜಿ ಸಂಸದ ಬಿ.ವಿ.ನಾಯಕ, ಶಾಸಕ ಬಿ.ಪಿ. ಹರೀಶ್, ಹಡಗಲಿ ಶಾಸಕರಾದ ಕೃಷ್ಣನಾಯ್ಕ, ರಾಣೇಬೆನ್ನೂರು ಶಾಸಕ ಪ್ರಕಾಶ ಕೋಳಿವಾಡ, ಚಳ್ಳಕೆರೆ ಶಾಸಕ ರಘುಮೂರ್ತಿ, ಹಾನಗಲ್ ಶಾಸಕ ಶ್ರೀನಿವಾಸ ಮಾನೆ, ಸುರಪುರ ಶಾಸಕ ರಾಜಾವೇಣು ಗೋಪಾಲ ನಾಯಕ, ಶಿರಹಟ್ಟಿ ಶಾಸಕ ಚಂದ್ರು ಲಮಾಣಿ, ಮಾಜಿ ಶಾಸಕರಾದ ಹೆಚ್.ಪಿ.ರಾಜೇಶ್, ಅರುಣ್ ಕುಮಾರ್ ಪೂಜಾರ್, ಮಹರ್ಷಿ ವಾಲ್ಮೀಕಿ ಜಾತ್ರೆಯ ರಾಜ್ಯ ಸಂಚಾಲಕ ಶ್ರೀನಿವಾಸ ದಾಸಕರಿಯಪ್ಪ, ಧರ್ಮದರ್ಶಿಗಳಾದ ಶಾಂತಲಾ ರಾಜಣ್ಣ, ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾದ ರಾಜ್ಯ ಅಧ್ಯಕ್ಷ ಜಿ.ಟಿ.ಚಂದ್ರಶೇಖರಪ್ಪ, ಧರ್ಮದರ್ಶಿ ದಾವಣಗೆರೆ ಬಡಗಿ ವೀರಣ್ಣ, ಚನ್ನಗಿರಿ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಹೊದಿಗೆರೆ ರಮೇಶ್, ಮುಖಂಡರಾದ ಕೆ.ಪಿ. ಪಾಲಯ್ಯ, ಯೋಗೇಶ್ ಬಾಬು ಸೇರಿದಂತೆ ಇತರರು ಇದ್ದರು.

## ನಾಡಿದ್ದು ಹರಿಹರೇಶ್ವರ ಸ್ವಾಮಿ ಬ್ರಹ್ಮರಥೋತ್ಸವ



ಹರಿಹರ ಕ್ಷೇತ್ರ ಪಾಲಕ ಹರಿಹರೇಶ್ವರ ಸ್ವಾಮಿಯ ಬ್ರಹ್ಮರಥೋತ್ಸವವು ನಾಡಿದ್ದು ದಿನಾಂಕ 12ಕ್ಕೆ ಜರುಗಲಿದ್ದು, ರಥೋತ್ಸವ ನಿಮಿತ್ಯ ಈಗಾಗಲೇ ವಿವಿಧ ಪೂಜಾ ಪದ್ಧತಿಗಳು ಆರಂಭವಾಗಿವೆ.

ಇಂದಿನಿಂದ ಇದೇ ದಿನಾಂಕ 13ರ ವರೆಗೆ ಕ್ಷೇತ್ರದ ಪರಂಪರೆಯ ಪ್ರಕಾರ ಪೂಜೆಗಳು ನಡೆಯಲಿದ್ದು, ನಾಡಿದ್ದು ದಿನಾಂಕ 12ರ ಬುಧವಾರ ಬೆಳಗ್ಗೆ 10.25ಕ್ಕೆ ಮೇಷ ಲಗ್ನದಲ್ಲಿ ಸ್ವಾಮಿಯ ಬ್ರಹ್ಮರಥೋತ್ಸವ ನಡೆಯುತ್ತದೆ.

ಇಂದು ಸಾಯಂಕಾಲ ಪಂಚೋಪ ಚಾರ ಪೂಜಾ, ಬಲಿದಾನ 'ಅಶ್ವೋತ್ಸವ' ನಡೆಯಲಿದೆ. ರಾತ್ರಿ 8.35ಕ್ಕೆ 'ಹರಿಹರೇಶ್ವರ ಸ್ವಾಮಿಯ ಕಲ್ಯಾಣೋತ್ಸವ' ಮಂತ್ರ ಪುಷ್ಪ, ಮಹಾಮಂಗಳಾರತಿ ನಡೆಯಲಿದೆ.

ನಾಳೆ ಮಂಗಳವಾರ ಸಂಜೆ 'ಗಜೋತ್ಸವ' ನಡೆಯಲಿದೆ. ದಿನಾಂಕ 13ರ ಗುರುವಾರ ಗಣಪತಿ ಪೂಜಾ, ರುದ್ರಾಭಿಷೇಕ, ಕಂಕಣ ವಿಸರ್ಜನೆ, ಧ್ವಜಾ ವಿಸರ್ಜನೆ, ಅವಭೃತ ಸ್ನಾನಗಳೊಂದಿಗೆ ಉತ್ಸವಾದಿಗಳು ಪೂರ್ಣಗೊಳ್ಳಲಿವೆ. ಅದೇ ದಿನ ಸಂಜೆ 6ಕ್ಕೆ ನಟರಾಜ ನಾಟ್ಯ ಕೇಂದ್ರದ ಕಲಾವಿದರಿಂದ 'ಭರತ ನಾಟ್ಯ ಕಾರ್ಯಕ್ರಮ' ಹರಿಹರದ ಶ್ರೀನಿಧಿ ಅವರಿಂದ 'ವೀಣಾ ವಾದನ' ನಡೆಯಲಿದೆ.

## ನಗರದಲ್ಲಿ ಅಪರಿಚಿತ ವ್ಯಕ್ತಿಯ ಸಾವು

ದಾವಣಗೆರೆ, ಫೆ. 9 - ನಗರದ ರೈಲ್ವೆ ನಿಲ್ದಾಣದ ಪ್ಲಾಟ್ ಫಾರಂ - 02ರಲ್ಲಿ ಸುಮಾರು 50 ವರ್ಷದ ಅಪರಿಚಿತ ವ್ಯಕ್ತಿ ಅಸ್ವಸ್ಥಗೊಂಡು ಚಿಗಟೇರಿ ಜಿಲ್ಲಾಸ್ಪತ್ರೆಗೆ ಚಿಕಿತ್ಸೆಗೆ ದಾಖಲಾಗಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾನೆ.

ಮೈಕಟ್ಟಿನ ದುಂಡು ಮುಖದ ಬಿಳಿ ಮಿಶ್ರಿತ ಕಪ್ಪು ಕೂದಲು, ಬಿಳಿ ಮತ್ತು ಕಪ್ಪು ಬಣ್ಣದ ಮೀಸೆ ಮತ್ತು ಗಡ್ಡವನ್ನು ಬಿಟ್ಟಿರುತ್ತಾನೆ. ಸಂಬಂಧಪಟ್ಟವರು ಸಂಪರ್ಕಿಸಿ : 08192 259643, ಮೊ. 9480802123.

## ಹೊನ್ನಾಳಿ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಮನೋಜ ವಾಲಜ್ಜಿ



ಹೊನ್ನಾಳಿ, ಫೆ. 9 - ಸೋಲು-ಗೆಲುವು ಪಕ್ಷದ ಆಂತರಿಕವಾಗಿದ್ದು, ಇದನ್ನೆಲ್ಲಾ ಬದಿಗಿರಿಸಿ ಕಾಂಗ್ರೆಸ್ ಪಕ್ಷ ಬಲಪಡಿಸಲು ನೂತನ ಪದಾಧಿಕಾರಿಗಳೊಂದಿಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಾಗಿ ನೂತನ ತಾಲ್ಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಮನೋಜ ವಾಲಜ್ಜಿ ಹೇಳಿದರು.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ನೂತನವಾಗಿ ಆಯ್ಕೆಗೊಂಡ ಪದಾಧಿಕಾರಿಗಳ ಸಭೆಯನ್ನುದ್ದೇಶಿಸಿ ಮಾತನಾಡಿ, ಆಗಸ್ಟ್ ತಿಂಗಳು ಆನ್‌ಲೈನ್‌ನಲ್ಲಿ ನಡೆದ ಚುನಾವಣೆಯಲ್ಲಿ ನೂತನ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ 10,396 ಮತಗಳನ್ನು ಪಡೆದು ತಾವು ಆಯ್ಕೆಯಾಗಿರುವುದಾಗಿ ತಿಳಿಸಿದರು.

ಗಣೇಶ ಮದಕರಿ 2500 ಮತಗಳಿಂದ ಉಪಾಧ್ಯಕ್ಷರಾಗಿ, ಶ್ರೀಧರ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

ಯುವ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಬಾಹುಬಲಿ 14,000 ಮತಗಳನ್ನು ಪಡೆದು ಆಯ್ಕೆಯಾಗಿದ್ದು, ಹೆಚ್.ಎ ರಂಜಿತ 4000 ಮತಗಳನ್ನು ಪಡೆದು ರಾಜ್ಯ ಕಾರ್ಯದರ್ಶಿಯಾಗಿದ್ದಾರೆ.

ಹೊನ್ನಾಳಿ ಬ್ಲಾಕ್ ಅಧ್ಯಕ್ಷ ಬಿ.ಆರ್. ವಿಜಯ ಕತ್ತಿಗೆ 4314 ಮತಗಳನ್ನು ಪಡೆದು ಅಧ್ಯಕ್ಷರಾಗಿ, ಸಾಸ್ವೇಹಳ್ಳಿ ಬ್ಲಾಕ್ ಅಧ್ಯಕ್ಷರಾಗಿ ಎಂ. ಸಚ್ಚಿನ್ 5647 ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಪ್ರಶಾಂತ ಬಣ್ಣಜ್ಜಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಜಿ. ಪ್ರಕಾಶ್ ಸೇರಿದಂತೆ ಆಯ್ಕೆಗೊಂಡ ಪದಾಧಿಕಾರಿಗಳು, ಯುವ ಘಟಕದ ಮುಖಂಡರು ಉಪಸ್ಥಿತರಿದ್ದರು.

# 22 ಕೆರೆ ಏತ ನೀರಾವರಿ ಯೋಜನೆ ಗುಣಮಟ್ಟದ ಕಾಮಗಾರಿಗೆ ಕ್ರಮ

(1ನೇ ಪುಟದಿಂದ) ಭಾರತದ ಸಾವು, ಅಂಗವೈಕಲ್ಯ ಕಾರಣವಾಗುವ ಅಪಾಯಕಾರಿ ಅಂಶವಾಗಿದೆ ಎಂದರು.

ಭಾರತ ಇತರೆ ದೇಶಗಳಿಗಿಂತ ವೈದ್ಯಕೀಯ ಸಂಶೋಧನೆಗಳಿಗಿಂತ ಮುಂದುವರೆದಿದೆ. ಅನೇಕ ಪೋಲಿಯೋದಂತಹ ಮಾರಕ ರೋಗಗಳನ್ನು ನಿರ್ಮೂಲನೆ ಮಾಡುವಲ್ಲಿ ಯಶಸ್ವಿಯಾಗಿದೆ ಎಂದು ಹೇಳಿದರು.

ಜಾಗತೀಕರಣದ ಜಗತ್ತಿನಲ್ಲಿ ಆರೋಗ್ಯ ರಕ್ಷಣೆ ಒಂದು ದೇಶದ ಗಡಿಗೆ ಸೀಮಿತವಾಗಿಲ್ಲ. ಆರೋಗ್ಯ ಸೇವೆಯ ಗುಣಮಟ್ಟದ ಸುಧಾರಣೆ ಬಂದಿದೆ. ವಿದೇಶ ಸಹಯೋಗಗಳು ವೈದ್ಯಕೀಯ ಸಂಶೋಧನೆಯಲ್ಲಿ ನಿರ್ಣಯಕ ಪಾತ್ರ ವಹಿಸಿವೆ. ವಿದೇಶಗಳ ಅನೇಕ ಆರೋಗ್ಯ ಸೇವೆಗಳ ಒಪ್ಪಂದದಿಂದ ಭಾರತಕ್ಕೆ ಹೆಚ್ಚು ಪ್ರಯೋಜನಗಳಾಗಿವೆ ಎಂದರು.

2000 ನೇ ಇಸವಿ ನಂತರದಲ್ಲಿ ಜಗತ್ತಿನಲ್ಲಿ ಭಾರತವು ಜಾಗತಿಕ ಆರೋಗ್ಯ ವ್ಯವಸ್ಥೆಯ ನಾಯಕನಾಗಿ, ನಾವೀನ್ಯಕಾರಿ ದೇಶವಾಗಿ ಹೊರಹೊಮ್ಮಿದೆ. ಜಾಗತಿಕ ಆರೋಗ್ಯಕ್ಕೆ ಭಾರತ ಗಮನಾರ್ಹ ಕೊಡುಗೆ ನೀಡಿದೆ. ವಿದೇಶದ ಸಾಮಾನ್ಯ ನಾಗರಿಕನಿಗೂ ಭಾರತದ ಬಗ್ಗೆ ಅಪಾರ ಗೌರವಿದೆ. ಆರೋಗ್ಯ ಕ್ಷೇತ್ರ ಸುಧಾರಣೆಗೆ ಕೇವಲ ಸರ್ಕಾರ, ಖಾಸಗಿ ಸಂಸ್ಥೆಗಳ ಜೊತೆಗೆ, ಸಾರ್ವಜನಿಕರ ಸಹಭಾಗಿತ್ವ ಅತ್ಯಂತ ಪ್ರಮುಖವಾಗಿ ಬೇಕಾಗಿದೆ. ಬಲಿಷ್ಠ ಭಾರತದ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ ಎಂದು ಹೇಳಿದರು.

ಲೋಕಸಭಾ ಸದಸ್ಯರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, ತರಳಬಾಳು ಜಗದ್ಗುರುಗಳು ಕೆರೆಗಳಿಗೆ ನೀರು ತುಂಬಿಸುವ ಮೂಲಕ ರೈತರ ಬದುಕು ಹಸನಾಗಿಸುವ ಮೂಲಕ ಆಧುನಿಕ ಭಗೀರಥ ಎಂಬ ಪ್ರಶಂಸೆಗೆ ಪಾತ್ರರಾಗಿದ್ದಾರೆ. ತಮ್ಮ ಸದ್ಧರ್ಮ ನ್ಯಾಯಪೀಠದ ಮೂಲಕ ಸಾರ್ವಜನಿಕರಿಗೆ ನ್ಯಾಯ ದೊರಕಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

22 ಕೆರೆಗಳ ಏತ ನೀರಾವರಿ ಯೋಜನೆ ಕೆಲವು ತಾಂತ್ರಿಕ ತೊಂದರೆಗಳಿಂದ ಪರಿಪೂರ್ಣವಾಗಿರುವುದಿಲ್ಲ. ಇದಕ್ಕೆ ಕಳಪೆ ಕಾಮಗಾರಿ ಕಾರಣವಾಗಿದ್ದು, ಈ ಬಗ್ಗೆ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರೊಟ್ಟಿಗೆ ಚರ್ಚಿಸಿದ್ದು, ಗುಣಮಟ್ಟದ ಪೈಪ್‌ಲೈನ್ ಕಾಮಗಾರಿಯನ್ನು ಶೀಘ್ರವೇ ಕೈಗೊಳ್ಳಲು ಕ್ರಮ ಜರುಗಿಸಲಾಗುವುದು. ಇದರಂತೆ ಭದ್ರಾ ಅಚ್ಚುಕಟ್ಟು ಪ್ರದೇಶದ ಕೊನೆ ಭಾಗದ ರೈತರಿಗೆ ನೀರು ತಲುಪುತ್ತಿಲ್ಲ ಎಂಬ ಕೂಗು ಕೇಳಿಬರುತ್ತಿದ್ದು, ಇದಕ್ಕೂ ಕೂಡ ಸೂಕ್ತ ಪರಿಹಾರ ಕಂಡುಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಗಮನ ಸೆಳೆಯುವುದಾಗಿ ತಿಳಿಸಿದರು.

ದೈಹಿಕ, ಮಾನಸಿಕ, ಸಾಮಾಜಿಕ, ಧಾರ್ಮಿಕ ಆರೋಗ್ಯ ಸದೃಢವಾಗಿದ್ದರೆ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ. ಪ್ರತಿಯೊಬ್ಬರೂ ಸಹ ನಿತ್ಯ ಧ್ಯಾನ, ಯೋಗ, ನಡಿಗೆಯಲ್ಲಿ ಪಾಲ್ಗೊಂಡು ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಮುಂದಾಗುವಂತೆ ಕರೆ ನೀಡಿದರು.

9 ರಿಂದ 14 ವರ್ಷ ವಯೋಮಾನದ ಹೆಣ್ಣು ಮಕ್ಕಳಿಗೆ ಯಾವುದೇ ಕ್ಯಾನ್ಸರ್‌ನಂತಹ ಕಾಯಿಲೆಗಳು ಬಾರದಂತೆ ಅವರು ಕಡಿಮೆ ದರದಲ್ಲಿ 'ವ್ಯಾಕ್ಸಿನೇಷನ್' ಹಾಕಿಸುವ ಪ್ರಕ್ರಿಯೆಯನ್ನು ಎಸ್.ಎಸ್. ಕೇರ್ ಟ್ರಸ್ಟ್ ವತಿಯಿಂದ ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು.

ಹಾಸನ ವೈದ್ಯಕೀಯ ಕಾಲೇಜಿನ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾದ ಡಾ. ಬಿ.ಎಸ್. ಗಿರಿಜಾ ಅವರು ಗರ್ಭಕಂಠ ಸೇರಿದಂತೆ ಇತರೆ ಕ್ಯಾನ್ಸರ್ ಕಾಯಿಲೆಗಳ ಬಗ್ಗೆ ಅರಿವು ಮೂಡಿಸುವ ಜೊತೆಗೆ ಅವುಗಳಿಗೆ ಚಿಕಿತ್ಸಾ ವಿಧಾನಗಳ ಮಾಹಿತಿ ನೀಡಿದರು.

ದಾವಣಗೆರೆ ನೇತ್ರ ತಜ್ಞ ಡಾ. ಜಿ. ಸುನೀಲ್ ಅವರು ದೃಷ್ಟಿ ದೋಷ, ದೀರ್ಘ ಕಾಲ ಕಂಪ್ಯೂಟರ್, ಮೊಬೈಲ್ ಬಳಕೆಯಿಂದ ಆಗುವ ದುಷ್ಪರಿಣಾಮ ಕುರಿತು ಮಾತನಾಡಿದರು.

ಬೆಂಗಳೂರು ಆಸ್ಟರ್ ಆಸ್ಪತ್ರೆ ಮುಖ್ಯಸ್ಥರು ಮತ್ತು ಕನ್ಸಲ್ಟೆಂಟ್ ಡಾ. ಪಿ. ಎನ್. ಪಾಟೀಲ್, ಹಾಸನ ಜನಪ್ರಿಯ ಆಸ್ಪತ್ರೆಯ ಡಾ. ಅಬ್ದುಲ್ ಬಷೀರ್ ಆರೋಗ್ಯ ವಿಷಯ ಕುರಿತು ಉಪನ್ಯಾಸ ನೀಡಿದರು. ಹಾಸ್ಯ ಕಲಾವಿದ ಕೋಗಳಿ ಕೊಟ್ರೇಶ್ ತಮ್ಮ ಹಾಸ್ಯ ಪ್ರಸಂಗಗಳ ಮೂಲಕ ಸಹೃದಯರನ್ನು ರಂಜಿಸಿದರು.

ವಿವಿಧ ಶಾಲಾ ವಿದ್ಯಾರ್ಥಿಗಳು ಮತ್ತು ಕಲಾವಿದರಿಂದ ವಚನಗೀತೆ, ಭರತನಾಟ್ಯ, ಯೋಗ ಪ್ರದರ್ಶನ ನಡೆದವು. ದ್ಯಾಮಣ್ಣ ಕೋಗುಂಡೆ ಸ್ವಾಗತಿಸಿದರು. ಮಹಾಂತೇಶ ವಂದಿಸಿದರು.

## ಹೆಣ್ಣುಮಕ್ಕಳಿಗೆ ಕ್ಯಾನ್ಸರ್ ನಿರೋಧಕ 'ವ್ಯಾಕ್ಸಿನೇಷನ್'

(1ನೇ ಪುಟದಿಂದ) ಬಗೆಯ ಕ್ಯಾನ್ಸರ್ ಗಳಿದ್ದು, ಆರೋಗ್ಯಕ್ಕೆ ಮಾರಕವಾಗಿವೆ ಎಂಬ ಅರಿವಿರಲಿಲ್ಲ. ಇವತ್ತಿನ ಉಪನ್ಯಾಸಕರು ತಿಳಿಸಿರುವಂತೆ ವಿವಿಧ ಬಗೆಯ ಕ್ಯಾನ್ಸರ್ ರೋಗಗಳನ್ನು ತಡೆಗಟ್ಟುವ ಸಲುವಾಗಿ ಮುಂಜಾಗ್ರತಾ ಕ್ರಮವಾಗಿ ನಮ್ಮ ಸಂಸ್ಥೆಯಿಂದಲೇ 'ವ್ಯಾಕ್ಸಿನೇಶನ್' ಹಾಕಿಸುವ ತೀರ್ಮಾನ ಕೈಗೊಂಡಿರುವುದಾಗಿ ತಿಳಿಸಿದರು.

ನಮಗೆ ಹಣದ ಚಿಂತೆಯಿಲ್ಲ. ಉದಾರ ದಾನಿಗಳಿದ್ದಾರೆ. ಒಳ್ಳೆಯ ಕಾರ್ಯಗಳಿಗೆ ದೇಣಿಗೆ ನೀಡಲು ಮುನ್ನುಗ್ಗಿ ಬರುತ್ತಾರೆ. ಇದಕ್ಕೆ ತರಳಬಾಳು ಹುಣ್ಣಿಮೆ ಮಹೋತ್ಸವ ಸಾಕ್ಷಿ. ಒಂದೇ ದಿನ 1 ಕೋಟಿ, 9 ಲಕ್ಷ ರೂ.ಗಳ ದೇಣಿಗೆಯನ್ನು ಭಕ್ತರು ನೀಡಿದ್ದು, ಎರಡನೇ ದಿನ 85 ಲಕ್ಷ ರೂ. ಗಳನ್ನು ಉದಾರವಾಗಿ ನೀಡಿ ದ್ದಾರೆ. ದೊಡ್ಡ ಮನಸ್ಸುಳ್ಳ ಭಕ್ತರಿರುವುದರಿಂದ ಲೇ ಇವೆಲ್ಲಾ ಸಾಧ್ಯ. ಕೊಟ್ಟ ಹಣವನ್ನು ಸುರಕ್ಷಿತವಾಗಿ ಕಾಯ್ದಿಡುತ್ತಾರೆ ಎಂಬ ನಂಬಿಕೆಯನ್ನಿಟ್ಟುಕೊಂಡಿದ್ದಾರೆಂದು ಹೇಳಿದರು.

ತಂದೆ-ತಾಯಿ ಮತ್ತು ಕುಟುಂಬ ಸದಸ್ಯರನ್ನು ಕಾಪಾಡುವ ಮಹತ್ತರ ಹೊಣೆಗಾರಿಕೆ ಇಂದಿನ ಯುವಜನತೆ ಮೇಲಿದೆ. ಕಾರ್ಯಕ್ರಮಕ್ಕೆ ಬಂದವರು ಯಾವುದೇ ಅವಘಡಗಳಿಗೆ, ಅಪಘಾತಗಳಿಗೆ ಎಡೆಮಾಡಿಕೊಡದೇ ಸುರಕ್ಷಿತವಾಗಿ ಮನೆಗಳಿಗೆ ತಲುಪಬೇಕೆಂಬುದು ನಮ್ಮ ಆಶಯ ಎಂದರು.

ಹರಿಹರ ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿ ಯವರು ತಮ್ಮ ಆಯುಷ್ಯ ಜಗದ್ಗುರುಗಳಿಗಿರಲಿ ಎಂದು ಅಭಿಮಾನ ಪೂರ್ವಕವಾಗಿ ಮಾತನಾಡಿದ್ದು, ನಮ್ಮನ್ನು ಭಾವುಕರನ್ನಾಗಿಸುವಂತೆ ಮಾಡಿದೆ ಎಂದು ತರಳಬಾಳು ಜಗದ್ಗುರುಗಳು ಹೇಳಿದರು.

ಹರಿಹರದ ವೀರಶೈವ-ಲಿಂಗಾಯತ ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿ ಮಾತನಾಡಿ, ಜಗದ್ಗುರುಗಳು ಹೋದಲೆಲ್ಲಾ ಕೆರೆಗಳು ಕಂಡಲ್ಲಿ ಅವುಗಳಿಗೆ ನೀರು ತುಂಬಿಸುವ ಕೆಲಸವನ್ನು ಮಾಡುತ್ತಾ ಬಂದಿದ್ದಾರೆ.

ಹಿಂದೆ ಸೊಲ್ಲಾಪುರದ ಸಿದ್ಧರಾಮೇಶ್ವರರು ಕೆರೆ ಕಟ್ಟೆಗಳನ್ನು ಕಟ್ಟಿಸಿ ನೀರುಣಿಸುವ ಕಾರ್ಯವನ್ನು ಮಾಡುತ್ತಿದ್ದರು. ಅವರ ಪ್ರತಿರೂಪ ಎನ್ನುವಂತೆ ಇಂದಿನ ತರಳಬಾಳು ಜಗದ್ಗುರುಗಳು ನಾಡಿನ ಕೆರೆಗಳಿಗೆ ನೀರು ತುಂಬಿಸಿ, ರೈತರ ಬದುಕಿಗೆ ಆಸರೆಯಾಗಿ ನಿಲ್ಲುತ್ತಿರುವುದು ಶ್ಲಾಘನೀಯ ಕಾರ್ಯ ಎಂದರು.

ಶ್ರೀಗಳ ತರಳಬಾಳು ಹುಣ್ಣಿಮೆ ಮಹೋತ್ಸವ ಕೂಡ ಶೈಕ್ಷಣಿಕ ಮಹಾಕುಂಭ. ತನ್ಮೂಲಕ ಜ್ಞಾನ ದಾಸೋಹ ಮಾಡುತ್ತಿದ್ದಾರೆ.ಕೋಟಿಕೊಬ್ಬ ಜಗದ್ಗುರು ಎಂದು ಬಣ್ಣಿಸಿದರು.

ದಿನದ 23 ಗಂಟೆಗಳು ಚೆನ್ನಾಗಿರಬೇಕಾದರೆ ನಿತ್ಯ ಒಂದು ಗಂಟೆಯನ್ನಾದರೂ ಯೋಗ, ಧ್ಯಾನ, ನಡಿಗೆ, ಪ್ರಾಣಾಯಾಮ ಮುಂತಾದ ವುಗಳನ್ನು ಮಾಡುತ್ತಾ ಬಂದರೆ ಆರೋಗ್ಯವನ್ನು ಚೆನ್ನಾಗಿ ಇಟ್ಟುಕೊಳ್ಳಬಹುದು ಎಂದು ಹಿತ ನುಡಿದರು.


ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಟಿವಿ-9 ನ್ಯೂಸ್ ನಿರ್ಮಾಪಕ ರಂಗನಾಥ್ ಭಾರದ್ವಾಜ್, ಬೆಂಗಳೂರು ನೇತ್ರಾಲಯದ ಡಾ. ಬಿ. ಪೂರ್ಣಚಂದ್ರ ಮಾತನಾಡಿದರು. ಚಿತ್ರದುರ್ಗ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

## ಹೊನ್ನಾಳಿ ಶಿವ ಕೋ ಆಫ್ ಸೊಸೈಟಿ ಫಲಿತಾಂಶ

ಹೊನ್ನಾಳಿ, ಫೆ. 09 - ಹೊನ್ನಾಳಿ ಶಿವ ಕೋ ಆಪ್ ಸೊಸೈಟಿಯ 15 ಕ್ಷೇತ್ರಗಳಲ್ಲಿ 9ರಲ್ಲಿ ಅವಿರೋಧ ಆಯ್ಕೆಯಾಗಿದ್ದು, 6ರಲ್ಲಿ 4ಕ್ಷೇತ್ರಗಳ ಫಲಿತಾಂಶ ಇಂದು ಹೊರಬಂದಿದ್ದು, 2 ಕ್ಷೇತ್ರಗಳ ಫಲಿತಾಂಶ ಕೋರ್ಟ್ ಆದೇಶದ ನಂತರ ಪ್ರಕಟವಾಗಲಿದೆ ಎಂದು ಸೊಸೈಟಿ ಕಾರ್ಯದರ್ಶಿ ರುದ್ರೇಶ್ ತಿಳಿಸಿದರು.

**ಫಲಿತಾಂಶ ಪ್ರಕಟವಾದ ಕ್ಷೇತ್ರಗಳ ವಿವರ:** ಕುಂದೂರು ಗೀತಾಗುರುರಾಜ, ಬೆನಕನಹಳ್ಳಿ ಹೆಚ್.ಜಿ. ರುದ್ರೇಶಪ್ಪ, ಬೆಳಗುತ್ತಿ ಟಿ. ನಾಗರಾಜಪ್ಪ, ಸುರಹೊನ್ನೆ ಸದಾಶಿವ ಇವರು ಆಯ್ಕೆಯಾಗಿದ್ದಾರೆ. ಕೋರ್ಟ್ ಆದೇಶದ ನಂತರ ಸಾಸ್ವೆಹಳ್ಳಿ, ಚೀಲೂರು ಫಲಿತಾಂಶ ಪ್ರಕಟಗೊಳ್ಳುವುದು ಎಂದು ಕಾರ್ಯದರ್ಶಿ ತಿಳಿಸಿದ್ದಾರೆ.

**ಸವಿನೆನಪು**



**ದಿ. ಶ್ರೀ ಎ.ಎಂ. ಆನಂದ ಕುಮಾರ್**

**ಹಿರಿಯ ಕಲಾವಿದರು ಮತ್ತು ಸಂಸ್ಥಾಪಕರು, ಭಾರತಿ ವಾದ್ಯ ವೃಂದ**

ನಿಧನ : 10.02.2015

**ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ ಮತ್ತು ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.**

ಪತ್ನಿ : ✦ **ಶ್ರೀಮತಿ ಮೀನಾ ಆನಂದ ಕುಮಾರ್** ಪುತ್ರ : ✦ **ಎ.ಎಂ. ಸಚಿನ್ ಮತ್ತು ಶ್ರೀಮತಿ ಸೋನಿ**

ಪುತ್ರಿ : ✦ **ಶ್ರೀಮತಿ ರೇಖಾ ಎ.ನಾಗರಾಜ್,** ಮಾಜಿ ಮಹಾಪೌರರು, ಮಹಾನಗರ ಪಾಲಿಕೆ

ಅಳಿಯ : ✦ **ಎ. ನಾಗರಾಜ್,** ಮಾಜಿ ವಿರೋಧ ಪಕ್ಷದ ನಾಯಕರು, ಮಹಾನಗರ ಪಾಲಿಕೆ ಸದಸ್ಯರು, ದಾವಣಗೆರೆ

ಪುತ್ರಿ : ✦ **ಶ್ರೀಮತಿ ವೀಣಾ ನಾದನ್**


ಮೊಮ್ಮಕ್ಕಳು : ✦ **ಶ್ರೀಮತಿ ರೀಮಾ ವೀರೇಶ್** ✦ **ಚಿ. ಸಿ.ಎನ್. ರೂಪಿತ್** ✦ **ಕು. ನೇಹ** ✦ **ಚಿ. ನಿಖಿಲ್** ✦ **ಚಿ. ಸೋಹನ್** ✦ **ಕು. ಸೋನಲ್ ಹಾಗೂ ಸಹೋದರರು ಮತ್ತು ಬಂಧು-ಮಿತ್ರರು.**

## ಶ್ರೀ ಪುರಂದರ ದಾಸರ ದೇವರ ನಾಮ, ಶ್ರೀ ತ್ಯಾಗರಾಜರ ಕೀರ್ತನೆ ಸ್ಪರ್ಧೆ

ದಾವಣಗೆರೆ, ಫೆ.9- ಬ್ರಾಹ್ಮಣ ಸಮಾಜ ಮಹಿಳಾ ವಿಭಾಗದಿಂದ ಶ್ರೀ ಪುರಂದರ ದಾಸರ ಹಾಗೂ ಶ್ರೀ ತ್ಯಾಗರಾಜರ ಆರಾಧನೆ ಪ್ರಯುಕ್ತ ಶ್ರೀ ಪುರಂದರ ದಾಸರ ದೇವರ ನಾಮ ಹಾಗೂ ಶ್ರೀ ತ್ಯಾಗರಾಜರ ಕೀರ್ತನಾ ಸ್ಪರ್ಧೆಯನ್ನು ಇದೇ ದಿನಾಂಕ 16 ರ ಶನಿವಾರ ಬೆಳಿಗ್ಗೆ 10.30 ಗಂಟೆಗೆ ಶ್ರೀ ಶಾರದಾಂಬ ದೇವಸ್ಥಾನದಲ್ಲಿ ಏರ್ಪಡಿಸಲಾಗಿದೆ.

ಸ್ಪರ್ಧೆಯಲ್ಲಿ ಭಾಗವಹಿಸುವವರು ಇದೇ ದಿನಾಂಕ 14 ರೊಳಗೆ ಹೆಸರು ನೋಂದಾಯಿಸಬೇಕು ಎಂದು ಶ್ರೀಮತಿ ಅಡಿಗ (9964027146), ಶ್ರೀಮತಿ ನಳಿನಿ ಅಚ್ಯುತ್ (9886058866) ತಿಳಿಸಿದ್ದಾರೆ.

**ಓ. ಡಿ. ನಾಗೇಂದ್ರಪ್ಪ ನಿಧನ**



ದಾವಣಗೆರೆ ತಾಲ್ಲೂಕು ಓಬಣ್ಣನಹಳ್ಳಿ ಗ್ರಾಮದ ವಾಸಿ

**ಶರಣ ಓ.ಡಿ. ನಾಗೇಂದ್ರಪ್ಪ**

ಅವರು ದಿನಾಂಕ 09.02.2025ರ ಭಾನುವಾರ ಮಧ್ಯಾಹ್ನ 2.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 87 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10.02.2025ರ ಸೋಮವಾರ ಮಧ್ಯಾಹ್ನ 12ಕ್ಕೆ ಮೃತರ ಸ್ವಗ್ರಾಮ ಓಬಣ್ಣನಹಳ್ಳಿಯ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ : **ಪತ್ನಿ : ಬಸಮ್ಮ ಶ್ರೀಮತಿ ಯಶೋಧಮ್ಮ ಶ್ರೀ ಪ್ರಸನ್ನಕುಮಾರ್ ಮತ್ತು ಮಕ್ಕಳು. ಶ್ರೀಮತಿ ರತ್ನಮ್ಮ ಶ್ರೀ ಸುರೇಂದ್ರಕುಮಾರ್ ಮತ್ತು ಮಕ್ಕಳು ಹಾಗೂ ಸಹೋದರರು. ಶ್ರೀಮತಿ ಸುಮಿತ್ರ ಶ್ರೀ ಪ್ರೇಮಕುಮಾರ ಮತ್ತು ಮಕ್ಕಳು, ಶ್ರೀಮತಿ ಶಶಿಕಲಾ ಶ್ರೀ ಕರಿಬಸಪ್ಪ ಮತ್ತು ಮಕ್ಕಳು, ಸಹೋದರರು, ಸಹೋದರಿಯರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**

**ಭಾವಪೂರ್ಣ ಶ್ರದ್ಧಾಂಜಲಿ**



ದಾವಣಗೆರೆ ಜಿಲ್ಲಾ ಗಾಣಿಗ ಮಹಿಳಾ ಸಮಾಜದ ಮಾಜಿ ಅಧ್ಯಕ್ಷರಾದ

**ಶ್ರೀಮತಿ ಉಮಾ ವೀರಭದ್ರಪ್ಪ**

ಇವರು ದಿನಾಂಕ 07.02.2025ರಂದು ನಿಧನರಾಗಿದ್ದು, ಅವರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ.

ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ. ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಕೆ.ಎಸ್. ಮಲ್ಲೇಶಪ್ಪ,** ಅಧ್ಯಕ್ಷರು, ದಾವಣಗೆರೆ ಜಿಲ್ಲಾ ಗಾಣಿಗ ಸಮಾಜ

**ಶ್ರೀಮತಿ ನಾಗರತ್ನಮ್ಮ ಮಲ್ಲೇಶಪ್ಪ,**

ಮಾಜಿ ಅಧ್ಯಕ್ಷರು, ಜಿಲ್ಲಾ ಪಂಚಾಯತಿ ದಾವಣಗೆರೆ.

ಪದಾಧಿಕಾರಿಗಳು, ಮತ್ತು ಸರ್ವ ಸಮಾಜ ಬಾಂಧವರು.

**ದಾವಣಗೆರೆ ಜಿಲ್ಲಾ ಗಾಣಿಗ ಸಮಾಜ**

## ಗಿರಿಜಾ ಕಲ್ಯಾಣೋತ್ಸವಕ್ಕೆ ಶಾಸಕರ ಚಾಲನೆ

ಹರಪನಹಳ್ಳಿ, ಫೆ. 9 - ಪಟ್ಟಣದ ವಾಸವಿ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ್ದ ಗಿರಿಜಾ ಕಲ್ಯಾಣ ಮಹೋತ್ಸವಕ್ಕೆ ಶಾಸಕರಾದ ಶ್ರೀಮತಿ ಎಂ.ಪಿ ಲತಾ ಮಲ್ಲಿಕಾರ್ಜುನ್ ಶ್ರೀ ಈಶ್ವರ ದೇವರ ತೊಟ್ಟಿಲು ತೂಗುವ ಮೂಲಕ ಚಾಲನೆ ನೀಡಿದರು.



ಪಟ್ಟಣದ ಕೊಟ್ಟೂರು ರಸ್ತೆಯಲ್ಲಿರುವ ಶ್ರೀ ನಗರೇಶ್ವರ ವಾಸವಿ ಕಲ್ಯಾಣ ಮಂಟಪದಲ್ಲಿ ಆರ್ಯವೈಶ್ಯ ಸಮಾಜದವರು ಹಮ್ಮಿಕೊಂಡಿದ್ದ ಗಿರಿಜಾ ಕಲ್ಯಾಣ ಮಹೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿದರು.

**ಹರಪನಹಳ್ಳಿ**

ಆರ್ಯ ಸಮಾಜದ ಹಿರಿಯ ಅಧ್ಯಕ್ಷ ಡಾ.ಅನಂತಶೆಟ್ರು, ದಯಾನಂದ ಶೆಟ್ರು, ಬಿ.ಎಸ್.ರವಿಶಂಕರ್, ಮುದುಗಲ್ ನಾಗರಾಜ್ ಶೆಟ್ರು, ಕಡ್ಲಿ ರಾಘವೇಂದ್ರ ಶೆಟ್ರು ಕಾರ್ಯಕ್ರಮದ ಜ್ಯೋತಿ ಬೆಳಗುವುದರ ಮೂಲಕ ಚಾಲನೆ ನೀಡಿದರು.

ಕಾರ್ಯಕ್ರಮವನ್ನು ಕಾರ್ಯದರ್ಶಿ ಎಚ್.ಸಿ.ನಟೇಶಕುಮಾರ್ ನಿರೂಪಿಸಿದರು. ಆರ್ಯ ಸಮಾಜದ ಮಹಿಳಾ ಅಧ್ಯಕ್ಷರಾದ ಸುಜಾತ, ಮಮತ, ನಿರ್ದೇಶಕರುಗಳಾದ ಜಿಲ್ಲಾ ಮಹಿಳಾ ಮಂಡಳಿಯವರು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ತೆಗ್ಗಿನಮಠದ ಪೀಠಾಧಿಪತಿ ಶ್ರೀ ವರಸದ್ಯೋಜಾತ ಮಹಾಸ್ವಾಮೀಜಿ, ಉಪ ವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ, ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎಂ.ವಿ ಅಂಜಿನಪ್ಪ, ಎಂ.ಪಿ.ರವೀಂದ್ರ ಪರಿಷತ್ತಿನ ಅಧ್ಯಕ್ಷ ಹಾಗೂ ಶಾಸಕರ ಪುತ್ರ ಗೌತಮ್ ಪ್ರಭು, ಪುರಸಭಾ ಸ್ಥಾಯಿ ಸಮಿತಿಯ ಅಧ್ಯಕ್ಷ ಟಿ.ವೆಂಕಟೇಶ್, ಮುಖಂಡರಾದ ಇಜಾರಿ ಮಹಾವೀರ್, ಶಶಿಕುಮಾರ್ ನಾಯ್ಕ್, ಗುಡಿ ನಾಗರಾಜ್ ಇತರರು ಉಪಸ್ಥಿತರಿದ್ದರು.

## ಮೈಲಾರ ಕಾರಣಿಕೋತ್ಸವಕ್ಕೆ ನಾಳೆ ಪಾದಯಾತ್ರೆ

ದಾವಣಗೆರೆ, ಫೆ. 9- ಹೂವಿನಹಡಗಲಿ ತಾಲ್ಲೂಕಿನ ಶ್ರೀ ಕ್ಷೇತ್ರ ಮೈಲಾರದಲ್ಲಿ ಇದೇ ದಿನಾಂಕ 14 ರಂದು ನಡೆಯುವ ಕಾರಣಿಕೋತ್ಸವದಲ್ಲಿ ಪಾಲ್ಗೊಳ್ಳಲು ನಾಡಿದ್ದು ದಿನಾಂಕ 11 ರ ಮಂಗಳವಾರ ದಾವಣಗೆರೆಯಿಂದ ಮೈಲಾರಕ್ಕೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಕ್ಷೇತ್ರ ಮೈಲಾರ ಲಿಂಗೇಶ್ವರ ಪಾದಯಾತ್ರೆ ಟ್ರಸ್ಟ್ ಅಧ್ಯಕ್ಷ ಕೆ.ಹೆಚ್. ಮಲ್ಲೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಳೆದ 13 ವರ್ಷಗಳಿಂದ ಮೈಲಾರ ಪಾದಯಾತ್ರೆ ಕಾರ್ಯಕ್ರಮ ಹಮ್ಮಿಕೊಂಡು ಬರುತ್ತಿದ್ದು, ಈ ಬಾರಿ 400 ರಿಂದ 500 ಕ್ಕೂ ಹೆಚ್ಚು ಭಕ್ತರು ಭಾಗವಹಿಸುವ ನಿರೀಕ್ಷೆ ಇದೆ ಎಂದರು.

ದಿನಾಂಕ 11 ರ ಮಂಗಳವಾರ ಮಧ್ಯಾಹ್ನ 2 ಕ್ಕೆ ಪಾದಯಾತ್ರೆ ಪ್ರಾರಂಭವಾಗಲಿದ್ದು, ಹರಿಹರ, ಕೋಡಿಯಾಲ ಹೊಸಪೇಟೆ, ದೇವರಗುಡ್ಡ, ಹೊನ್ನತ್ತಿ ಮೂಲಕ ಮೈಲಾರ ತಲುಪಲಾಗುವುದು. 70 ರಿಂದ 80 ಕಿ.ಮೀ. ಪಾದಯಾತ್ರೆಯಲ್ಲಿ ವಿವಿಧೆಡೆ ತಿಂಡಿ, ಊಟದ ವ್ಯವಸ್ಥೆ ಮಾಡಲಾಗುವುದು. ದಿನಾಂಕ 13 ಮತ್ತು 14 ರಂದು ಮೈಲಾರದ ಡೆಂಕನ ಮರಡಿಗೆ ಬರುವಂತಹ ಪಾದಯಾತ್ರಿಗಳಿಗೆ ದಾವಣಗೆರೆ ಭಕ್ತಾದಿಗಳಿಂದ ಊಟ ಮತ್ತು ವಸತಿ ವ್ಯವಸ್ಥೆಯನ್ನು ಮಾಡಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ಪದಾಧಿಕಾರಿಗಳಾದ ಗೋಪಾಲರಾವ್ ಸಾವಂತ್, ಬಳ್ಳಾರಿ ಜಯಣ್ಣ, ಹೆಚ್. ಜೆ. ವೀರಣ್ಣ, ಬಿ.ಜಿ.ಯಲ್ಲಪ್ಪ, ಮಹಾಂತೇಶ್, ಶಂಕರ್, ಅರ್ಚಕ ಸುರೇಶ್ ಕುಲಕರ್ಣಿ ಉಪಸ್ಥಿತರಿದ್ದರು.

# ಪ್ರಯಾಗ್‌ರಾಜ್‌ನಲ್ಲಿ ಭಾರೀ ಟ್ರಾಫಿಕ್ ಜಾಮ್



**ಮಧ್ಯಪ್ರದೇಶದ ಹಲವು ಜಿಲ್ಲೆಗಳಲ್ಲಿ ವಾಹನಗಳಿಗೆ ತಡೆ, ನೂರಾರು ಕಿ.ಮೀ.ವರೆಗೆ ಸಂಚಾರ ಅಸ್ತವ್ಯಸ್ತ**

ಪ್ರಯಾಗ್‌ರಾಜ್, ಫೆ. 9 - ಮಹಾಕುಂಭ ಮೇಳಕ್ಕೆ ಭಾನುವಾರ ದೊಡ್ಡ ಪ್ರಮಾಣದಲ್ಲಿ ಜನರು ಆಗಮಿಸಿದ ಕಾರಣ ಕಿಲೋಮೀಟರ್ ಗಟ್ಟಲೇ ಸಂಚಾರ ಅಸ್ತವ್ಯಸ್ತವಾಗಿದೆ.

ರೈಲ್ವೆ ನಿಲ್ದಾಣದ ಹೊರಗೆ ಭಾರೀ ಜನಸಂದಣಿ ಇದ್ದ ಕಾರಣ ಪ್ರಯಾಗ್‌ರಾಜ್ ಸಂಗಮ್ ರೈಲ್ವೆ ನಿಲ್ದಾಣವನ್ನು ಬಂದ್ ಮಾಡಲಾಗಿದೆ.

ಗಂಗಾ ನದಿ ಹಾಗೂ ಸಂಗಮದಲ್ಲಿ ಭಾನುವಾರ ಸಂಜೆ 6ರ ವರೆಗೆ 1.42 ಕೋಟಿಗೂ ಹೆಚ್ಚು ಭಕ್ತರು ಪವಿತ್ರ ಸ್ನಾನ ಮಾಡಿದ್ದರು.

ಟ್ರಾಫಿಕ್ ಜಾಮ್ ಬಗ್ಗೆ ಹೇಳಿಕೆ ನೀಡಿರುವ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್, ಕೋಟ್ಯಂತರ ಜನರು ಪ್ರಯಾಗ್ ರಾಜ್ ಮಹಾಕಂಭದಲ್ಲಿ ಅತಂತ್ರರಾಗಿ ಸಿಲುಕಿದ್ದಾರೆ. ಅವರು ಹಸಿವು ಹಾಗೂ ನೀರಡಿಕೆಯಿಂದ ಬಳಲಿದ್ದಾರೆ. ಅವರ ನೆರವಿಗಾಗಿ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಪ್ರಯಾಗ್‌ರಾಜ್‌ಗೆ ತೆರಳುವ ನವಾಬ್ ಗಂಜ್ ಮಾರ್ಗದಲ್ಲಿ 30 ಕಿಲೋಮೀಟರ್‌ವರೆಗೆ ಟ್ರಾಫಿಕ್ ಜಾಮ್ ಆಗಿದೆ. ಗೌಹಾನಿಯಾದಲ್ಲಿ 16 ಕಿಲೋಮೀಟರ್ ಹಾಗೂ ವಾರಣಾಸಿ ಕಡೆ ಹದಿನೈದು ಕಿಲೋಮೀಟರ್‌ವರೆಗೆ ಟ್ರಾಫಿಕ್ ಜಾಮ್ ಆಗಿದೆ ಎಂದವರು ಹೇಳಿದ್ದಾರೆ.

ಈ ಬಗ್ಗೆ ಮಾತನಾಡಿರುವ ಸಂಚಾರ ವಿಭಾಗದ ಎಡಿಸಿಪಿ ಕುಲದೀಪ್ ಸಿಂಗ್, ವಾಹನಗಳ ಸಂಖ್ಯೆ ಹೆಚ್ಚಾಗಿದೆ. ಸಂಗಮದ ಸಾಕಷ್ಟು ಹತ್ತಿರದವರೆಗೆ ವಾಹನ ತರಲು ಜನ ಪ್ರಯತ್ನ ನಡೆಸಿದ್ದಾರೆ. ಇದರಿಂದಾಗಿ ಟ್ರಾಫಿಕ್ ಜಾಮ್ ಉಂಟಾಗಿದೆ ಎಂದಿದ್ದಾರೆ.

ಬಹುತೇಕ ಮೌನಿ ಅಮಾವಾಸ್ಯೆ ದಿನದಂದು ಬಂದಷ್ಟೇ ಜನರು ಈಗಲೂ ಬರುತ್ತಿದ್ದಾರೆ. ಇದರಿಂದಾಗಿ ಸಂಚಾರಕ್ಕೆ ಸಮಸ್ಯೆಯಾಗಿದೆ ಎಂದವರು ಹೇಳಿದ್ದಾರೆ.

2019ರ ಕುಂಭಮೇಳದಲ್ಲಿ ಸಾಮಾನ್ಯ ದಿನಗಳಲ್ಲಿ ಇಷ್ಟೊಂದು ಜನ ಇರುತ್ತಿರಲಿಲ್ಲ. ಈ ಬಾರಿ ಸಾಮಾನ್ಯ ದಿನಗಳಲ್ಲೂ ಹೆಚ್ಚು ಜನ ಬರುತ್ತಿದ್ದಾರೆ. ಮುಂದಿನ ಕೆಲ ದಿನಗಳಲ್ಲಿ ಭಕ್ತರ ಸಂಖ್ಯೆ ಕಡಿಮೆಯಾಗುವ ಸೂಚನೆ ಕಂಡು ಬರುತ್ತಿಲ್ಲ ಎಂದವರು ಹೇಳಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಉತ್ತರ ರೈಲ್ವೆ ಅಧಿಕಾರಿ ಕುಲದೀಪ್ ತಿವಾರಿ, ಪ್ರಯಾಗ್‌ರಾಜ್ ಸಂಗಮ್ ನಿಲ್ದಾಣದ ಹೊರಗೆ ದೊಡ್ಡ ಸಂಖ್ಯೆಯಲ್ಲಿ ಜನರು ಸೇರಿದ್ದಾರೆ. ಇದರಿಂದಾಗಿ ನಿಲ್ದಾಣದಿಂದ ಹೊರಗೆ ಹೋಗಲು ಪ್ರಯಾಣಿಕರಿಗೆ ಸಮಸ್ಯೆಯಾಗುತ್ತಿದೆ. ಹೀಗಾಗಿ ಈ ನಿಲ್ದಾಣವನ್ನು ಮುಚ್ಚಿದ್ದೇವೆ ಎಂದಿದ್ದಾರೆ.

ಈ ನಡುವೆ, ಮಹಾಕುಂಭ ಮೇಳಕ್ಕೆ ತೆರಳುವ ಮಾರ್ಗದಲ್ಲಿ ಸಮಸ್ಯೆ ಉಂಟಾಗಿರುವ ಕಾರಣ ಮಧ್ಯಪ್ರದೇಶದಲ್ಲಿ ಹಲವು ಜಿಲ್ಲೆಗಳಲ್ಲಿ ಪೊಲೀಸರು ವಾಹನ ಸಂಚಾರ ನಿಲ್ಲಿಸಿದ್ದಾರೆ.

ಸುಮಾರು 200 ರಿಂದ 300 ಕಿಲೋಮೀಟರ್‌ಗಳವರೆಗೆ ಸಂಚಾರಕ್ಕೆ ಸಮಸ್ಯೆಯಾಗಿದೆ. ಹೀಗಾಗಿ ಪ್ರಯಾಗ್‌ರಾಜ್‌ಗೆ ತೆರಳುವ ವಾಹನಗಳನ್ನು ಮಧ್ಯಪ್ರದೇಶದ ಹಲವು ಜಿಲ್ಲೆಗಳಲ್ಲಿ ನಿಲ್ಲಿಸಲಾಗಿದೆ. ಇನ್ನಷ್ಟು ಸಂಚಾರ ಸಮಸ್ಯೆ ಉಂಟಾಗುವುದನ್ನು ತಡೆಯಲು ಈ ಕ್ರಮ ತೆಗೆದುಕೊಳ್ಳಲಾಗಿದೆ.

ಹಲವಾರು ಜಿಲ್ಲೆಗಳಲ್ಲಿ ವಾಹನಗಳನ್ನು ತಡೆದಿರುವ ಪೊಲೀಸರು, ಜನರು ಸುರಕ್ಷಿತ ಸ್ಥಳದಲ್ಲಿ ಆಶ್ರಯ ಪಡೆಯುವಂತೆ ತಿಳಿಸಿದ್ದಾರೆ.

ಸೋಮವಾರದವರೆಗೆ ವಾಹನ ಸಂಚಾರ ನಿಲ್ಲಿಸುವುದಾಗಿ ಕಟ್ನಿ ಜಿಲ್ಲಾ ಪೊಲೀಸರು ಹೇಳಿದ್ದಾರೆ. ಸುಮಾರು 200 ರಿಂದ 300 ಕಿಲೋ ಮೀಟರ್ ಗಳವರೆಗೆ ಟ್ರಾಫಿಕ್ ಜಾಮ್ ಉಂಟಾಗಿದೆ. ಹೀಗಾಗಿ ಇಂದು ಪ್ರಯಾಗ್‌ರಾಜ್ ಕಡೆ ತೆರಳುವುದು ಅಸಾಧ್ಯ ಎಂದು ಪೊಲೀಸರು ಹೇಳಿದ್ದಾರೆ.

ಮಧ್ಯಪ್ರದೇಶದ ಕಟ್ನಿ, ಮೈಹಾರ್ ಹಾಗೂ ರೇವಾ ಜಿಲ್ಲೆಗಳಲ್ಲಿ ಸಾವಿರಾರು ಕಾರು ಹಾಗೂ ಲಾರಿಗಳು ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿರುವ ವಿಡಿಯೋಗಳು ಸಾಮಾಜಿಕ ಜಾಲತಾಣದಲ್ಲಿ ಕಂಡು ಬಂದಿವೆ.

# ಕೊಕ್ಕನೂರಿನಲ್ಲಿ ಇಂದು ಪಾನಮುಕ್ತ ಸದಸ್ಯರ ನವ ಜೀವನೋತ್ಸವ

ಕೊಕ್ಕನೂರು ಗ್ರಾಮದ ಪವನದೇವ ಕಲ್ಯಾಣ ಮಂಟಪದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮತ್ತು ಜಿಲ್ಲಾ ಜನಜಾಗೃತಿ ವೇದಿಕೆ ಹಾಗೂ ಪ್ರಗತಿ ಬಂಧು ಸ್ವ-ಸಹಾಯ ಸಂಘಗಳ ಒಕ್ಕೂಟದ ವತಿಯಿಂದ ಪಾನಮುಕ್ತ ಸದಸ್ಯರ ನವ ಜೀವನೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ ತಿಳಿಸಿದ್ದಾರೆ.

ಅಧ್ಯಕ್ಷತೆ : ಎನ್.ಜಿ.ನಾಗನಗೌಡ್ರು, ಉದ್ಘಾಟನೆ : ಅಭಿನಂದನ್ ಪಾಟೀಲ್, ಉಪನ್ಯಾಸ : ಡಿವೈಎಸ್ಪಿ ಪಿ.ಬಿ.ಪ್ರಕಾಶ್, ಸಿರಿಗೆರೆ ಸಿದ್ದೇಶ್, ಮುಖ್ಯ ಅತಿಥಿಗಳು : ಎಂ.ಲಕ್ಷ್ಮಣ್, ಜಿ.ಮಂಜುನಾಥ್ ಪಟೇಲ್, ಜಿಗಳಿ ಪ್ರಕಾಶ್, ವೆಂಟಕರಾಮಾಂಜನೇಯ, ಹನುಮಂತರಾಯ.

# ಐರಣಿ ಹೊಳೆಮಠಕ್ಕೆ ಹೊಸ ಉತ್ತರಾಧಿಕಾರಿ

**ಮನೋಹರ ಮಲ್ಲಾಡದ, ರಾಣೇಬೆನ್ನೂರು**

ಕುಂತಿದೇವಿಯು ಗಜಗೌರಿ ವ್ರತ ಮಾಡಿದ ಸಂದರ್ಭದಲ್ಲಿ ಇಂದ್ರನು ಕಳಿಸಿದ ಐರಾವತ ಇಲ್ಲಿ ಭೂಸ್ಪರ್ಶ ಮಾಡಿದ್ದರಿಂದ ಐರಾವತ ಕ್ಷೇತ್ರವೆಂದು ಪ್ರಸಿದ್ದಿ ಪಡೆದ ಈಗಿನ ಐರಣಿಯಲ್ಲಿ ತ್ರಿಮೂರ್ತಿ ದತ್ತಾತ್ರೇಯ ಸ್ವಾಮಿ ನೆಲೆಸಿದ್ದರಿಂದ 'ದತ್ತಾತ್ರೇಯ ಅವದೂತ ಗುರುಪೀಠವೆಂದು', ಬಸವೇಶ್ವರರ ಅಪರಾವತಾರ ವೆನ್ನುವ ಪ್ರಖ್ಯಾತಿ ಪಡೆದ ಕೊಟ್ಟೂರು ಗುರುಬಸವೇ ಶ್ವರರು ದೀರ್ಘಕಾಲ ಇಲ್ಲಿ ನೆಲೆಸಿ, ತಮ್ಮ ಅನೇಕ ಲೀಲೆಗಳನ್ನು ತೋರಿಸಿ ಕ್ಷೇತ್ರದ ಆದಿದೇವತೆಯಾದದ್ದು, ದಾವಣಗೆರೆಯ ಗುರು ಬಕ್ಕೇಶ್ವರರು ಇಲ್ಲಿ ಲಿಂಗಾಂಗ ಸಾಮರಸ್ಯದ ಗುರಿ ತಲುಪಿದ್ದು. ಇವೆಲ್ಲವುಗಳ ಸಂಗಮದಿಂದ ಈ ಗ್ರಾಮ ಪುಣ್ಯಭೂಮಿ ಯಾಗಿದೆ. ಈ ಕ್ಷೇತ್ರದ ಮಹಿಮೆ ಅರಿತ ಶೃಂಗೇರಿ ಶಾರದಾ ಪೀಠದ ಪರಂಪರೆಯ ಮಠಾಧೀಶರು ಇಲ್ಲಿ ಕಲ್ಲಿನ ಗುಡಿ ಕಟ್ಟಿಸಿ ಕಾಶಿಯಿಂದ ತರಿಸಿದ ಓಂಕಾರೇಶ್ವರ ಲಿಂಗ ಸ್ಥಾಪಿಸಿ ದೀಪಾರಾಧನೆಗೆ ಇಪ್ಪತ್ನಾಲ್ಕು ಎಕರೆ ಜಮೀನು ಜಹಗೀರು ಕೊಟ್ಟಿದ್ದಾರೆ.



**ನಾಡಿನ ಶ್ರೀಗಳಿಂದ ಇಂದು ಸನ್ಯಾಸ ದೀಕ್ಷೆ**

ಈ ಪುಣ್ಯಕ್ಷೇತ್ರದಲ್ಲಿ ಜನ್ಮತಳೆದು ಬಾಲಲೀಲೆಗಳ ಮೂಲಕ ಜನರಿಗೆ ಭಕ್ತಿ ಮಾರ್ಗ ತೋರಿಸುತ್ತಿದ್ದ ಮುಪ್ಪಿನಾರ್ಯರು ತಮ್ಮ ಅಧ್ಯಾತ್ಮದ ಹಸಿವು ಇಂಗಿಸಿಕೊಳ್ಳಲು ಅಲೆದಾಟ ನಡೆಸಿದ್ದಾಗ ಮಾಣಿಕ್ಯದಂತೆ ದೊರೆತ ಅದ್ವೈತ್ ಚಕ್ರವರ್ತಿ ಸಿದ್ದಾರೂಢರನ್ನು ಗುರು ಗಳಾಗಿ ಸ್ವೀಕರಿಸಿ, ಅವರ ಆಣತಿಯಂತೆ ಉತ್ತರವಾಹಿನಿ ತುಂಗಭದ್ರೆಯ ಎಡ ತೀರದಲ್ಲಿ ಮಠ ಸ್ಥಾಪಿಸಿ ಅನ್ನ ಹಾಗೂ ಜ್ಞಾನ ದಾಸೋಹವನ್ನು ಕರುಣಿಸಿ ಸುತ್ತಲಿನ ಭಕ್ತರ ಬವಣೆಯನ್ನು ದೂರೀಕರಿಸಿ ಮಹಾತ್ಮರಾದರು.

ದಶಕಗಳಿಂದ ಮಕ್ಕಳನ್ನು ಪಡೆಯಲು ಹಂಬಲಿಸುತ್ತಿದ್ದ ಹೊನ್ನಾಳಿ ತಾಲ್ಲೂಕಿನ ಕೋಣನತಲೆಯ ಸಿದ್ದಾರೂಢರ ಪರಂಪರೆಯ ಮುಪ್ಪಿನಾರ್ಯರ, ಬಸವರಾಜಪ್ಪಜ್ಜನ ಭಕ್ತರಾದ ಬಿ.ವೀರಣ್ಣ ಹಾಗೂ ಅನಿತಮ್ಮ ದಂಪತಿ, ಘಟಸ್ಥಾಪನೆಗೆ ಅಜ್ಜ ಕೊಡುತ್ತಿದ್ದ ಕಾಯಿಗಳನ್ನು ಸ್ವೀಕರಿಸಿ ಪೂಜಿಸಿದ ಫಲವಾಗಿ ದಂಪತಿ ಪುಣ್ಯಗರ್ಭದಲ್ಲಿ ಗಂಡು ಮಗು ಜನಿಸಿದ್ದು, ಶಿಶುವಿನಿಂದಲೇ ಪುಣ್ಯಾತ್ಮರ ಕೃಪಾಶೀರ್ವಾದದಲ್ಲಿ ಬೆಳೆಯುತ್ತಿರುವ ಆ ಸಿದ್ದಾರೂಢ ಬಾಲಕನೇ ಹೊಳೆಮಠದ ಉತ್ತರಾಧಿಕಾರಿಯಾಗುತ್ತಾರೆ.

ಬದುಕಿದರೆ ಮಠಕ್ಕೆ, ಸತ್ತರೆ ಸ್ಮಶಾನಕ್ಕೆ ಎನ್ನುವಂತಿದ್ದ ಅನಾರೋಗ್ಯ ಪೀಡಿತ ಬಾಲಕನನ್ನು ಪಾಲಕರಿಂದ ಪಡೆದು ಉಳಿಸಿ, ಬೆಳೆಸಿ, ಅವರ ಕೈಗೆ ಮಠದ ಹೊಣೆಗಾರಿಕೆಯನ್ನಿಟ್ಟ ಮುಪ್ಪಿನಾರ್ಯರ ಕರಸಂಜಾತರಾಗಿ ಬೆಳೆದ ಬಸವರಾಜ ಶ್ರೀಗಳು, ಮುಪ್ಪಿನಾರ್ಯರು ಉಳಿಸಿದ ಎಲ್ಲ ಕಾರ್ಯವನ್ನು ಪೂರ್ಣಗೊಳಿಸಿ, ಜೊತೆಗೆ ಎಲ್ಲ ರೀತಿಯಿಂದಲೂ ಸಂಪದ್ಭರಿತ ಮಠವನ್ನಾಗಿಸಿ, ತಮ್ಮ ಕರಸಂಜಾತ ಸಿದ್ಧಾರೂಢ ವಟುವನ್ನು ತಮ್ಮ ಉತ್ತರಾಧಿಕಾರಿ ಮಾಡಿಕೊಂಡಿದ್ದು ದಿನಾಂಕ 10.02.2025 ರ ಸೋಮವಾರ ಅವರಿಗೆ ಹೊಣೆಗಾರಿಕೆ ವಹಿಸಲಿದ್ದಾರೆ.

ಮಠದ ಸಂಚಾಲಕ ಬಾಬು ಶೆಟ್ಟರ ಅವರಾಡುವ ಮಾತುಗಳನ್ನು ಗಮನಿಸಿದಲ್ಲಿ ಮುಪ್ಪಿನಾರ್ಯರಂತೆ ಸಂಪೂರ್ಣ ಸನ್ಯಾಸ ಜೀವನ ಕಳೆದ ಬಸವರಾಜಪ್ಪಜ್ಜ ಸಹ, ಮಠದ ಹಾಗೂ ಭಕ್ತರ ಆಶಯಗಳಿಗೆ ಸ್ಪಂದಿಸುವ ಅತ್ಯದ್ಭುತ ವ್ಯಕ್ತಿತ್ವ ಹೊಂದಿದ ಉತ್ತರಾಧಿಕಾರಿಯನ್ನ ನೇಮಿಸಿದ್ದಾರೆ. ಈ ನೂತನ ಶ್ರೀ ಸಿದ್ದಾರೂಢರಿಂದ ಈ ಕ್ಷೇತ್ರ ಇನ್ನಷ್ಟು ಪಾವನಮಯವಾಗಲಿದೆ ಎನ್ನುವ ನಂಬುಗೆ ವ್ಯಕ್ತಪಡಿಸುತ್ತಾರೆ.

**ತ್ಯಾಗಮಯಿ...**

ಸಂಪ್ರದಾಯದಂತೆ ಸನ್ಯಾಸತ್ವ ನೀಡಲು ತಂದೆ-ತಾಯಿಯರ ಒಪ್ಪಿಗೆ ಪಡೆಯಲು, ಮಠದ ಭಕ್ತರೊಂದಿಗೆ ಬಸವರಾಜ ಶ್ರೀಗಳು ಕೋಣನತಲೆಯ ಸಿದ್ದಾರೂಢರ ನಿವಾಸಕ್ಕೆ ತೆರಳಿ, ವಿಷಯ ಪ್ರಸ್ತಾಪಿಸಿದಾಗ ತಾಯಿ ಅನಿತಮ್ಮ ಮಗನನ್ನು ಕಳೆದುಕೊಳ್ಳುವ ದುಃಖವನ್ನು ತಡೆದುಕೊಳ್ಳಲಾರದೆ ಕಣ್ಣೀರಧಾರೆ ಹರಿಸಿದಳು. ಶ್ರೀಗಳು, ಬಾಲಕ ಸಿದ್ದಾರೂಢರ ತಂದೆ ವೀರಣ್ಣ, ಸಹೋದರಿ ಶಾರುವಾಣಿ ಸೇರಿದಂತೆ ನೆರೆದವರೆಲ್ಲ ತಾಯಿಯ ನೋವಿಗೆ ಧ್ವನಿಯಾದರೆ, ಇದೆಲ್ಲವನ್ನು ಕಂಡ ಬಾಲಕ ಸಿದ್ದಾರೂಢರು ಏನನ್ನೂ ಪ್ರತಿಕ್ರಿಯಿಸದೆ ಸ್ಥಿತಪ್ರಜ್ಞರಂತಾಗಿದ್ದು, ನೆರೆದವರನ್ನು ದಿಗ್ಮೂಢರನ್ನಾಗಿಸಿದ್ದಿತು.

ಅದೆಷ್ಟೋ ಪೀಠಾಧಿಪತಿಗಳು ತಮ್ಮ ಇಳಿವಯಸ್ಸಿನಲ್ಲೂ ಸಹ ಪೂರ್ವಾಶ್ರಮದ ಮೋಹ ಉಳಿಸಿಕೊಂಡವರ ಬಗ್ಗೆ ಕೇಳುತ್ತೇವೆ, ಆದರೆ ಬಾಲಕ ಸಿದ್ದಾರೂಢರು ಪೀಠವೇರುವ ಮೊದಲೇ ಪೂರ್ವಾಶ್ರಮದ ಮೋಹ ತೊರೆದು ತಮ್ಮ ಬದುಕನ್ನು ಭಕ್ತರಿಗರ್ಪಿಸಿದ್ದು ಸಾಬೀತಾದಂತಾಯಿತು ಎಂದು ಈ ಘಟನೆಯನ್ನು ಪ್ರಸ್ತಾಪಿಸುವ ಮಾತುಗಳು ಹರಿದಾಡುತ್ತಿವೆ.

# ರಾಜನಹಳ್ಳಿ ಮಠದಲ್ಲಿ ಸಂಭ್ರಮದ ಮಹಾರಥೋತ್ಸವ



ಮಲೇಬೆನ್ನೂರು, ಫೆ.9- ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ವಾಲ್ಮೀಕಿ ಜಾತ್ರೆ ಅಂಗವಾಗಿ ಭಾನುವಾರ ಬೆಳಿಗ್ಗೆ ಶ್ರೀ ಮಹರ್ಷಿ ವಾಲ್ಮೀಕಿ ಮಹಾರಥೋತ್ಸವವು ಅಪಾರ ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು.

ಶ್ರೀ ಡಾ.ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ನಾಡಿನ ವಿವಿಧ ಮಠಾಧೀಶರು ಪುಷ್ಪಾರ್ಚನೆ ಮಾಡುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು.

ಮಾಜಿ ಸಚಿವ ಆನಂದ್ ಸಿಂಗ್ ಅವರು ಸುಮಾರು 1.28 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿಕೊಟ್ಟಿರುವ ಈ ರಥದಲ್ಲಿ ರಾಮಾಯಣದ ಪಾತ್ರಗಳನ್ನು ಕೆತ್ತನೆ ಮಾಡಲಾಗಿದ್ದು, ಎಲ್ಲರ ಗಮನ ಸೆಳೆಯುವಂತಿದೆ. 'ಜೈ ವಾಲ್ಮೀಕಿ, ಜೈ ಜೈ ವಾಲ್ಮೀಕಿ' ಎಂಬ ಜಯಘೋಷಗಳೊಂದಿಗೆ ಭಕ್ತರು ರಥೋತ್ಸವದಲ್ಲಿ ಹೆಜ್ಜೆ ಹಾಕಿ ಪುನೀತರಾದರು. ಡೊಳ್ಳು, ಕೀಲುಕುಣಿತ, ಗೊಂಬೆ ಕುಣಿತ, ವೀರಗಾಸೆ, ಹಲಗೆ, ಭಜನೆ ಸೇರಿದಂತೆ ನಾಡಿನ ಹೆಸರಾಂತ ಕಲಾಮೇಳಗಳು ರಥೋತ್ಸವಕ್ಕೆ ಮೆರಗು ತಂದವು.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಅವರು ರಥೋತ್ಸವಕ್ಕೂ ಮುನ್ನ ರಥಕ್ಕೆ ಬೃಹತ್ ಹೂವಿನ ಹಾರವನ್ನು ಕ್ರೇನ್ ಮೂಲಕ ಹಾಕಿದರು.

ಮಾಜಿ ಸಚಿವರಾದ ರಮೇಶ್ ಜಾರಕಿಹೊಳಿ, ಕೆ.ಶಿವನಗೌಡ ನಾಯಕ, ಶಾಸಕರಾದ ದೇವೇಂದ್ರಪ್ಪ, ಬಿ.ಪಿ.ಹರೀಶ್, ಜಾತ್ರಾ ಸಮಿತಿ ಸಂಚಾಲಕ ಶ್ರೀನಿವಾಸ್ ದಾಸಕರಿಯಪ್ಪ, ಗುರುಪೀಠದ ಧರ್ಮದರ್ಶಿಗಳಾದ ಶಾಂತಲಾ ರಾಜಣ್ಣ, ಹೊಸಪೇಟೆ ಜಂಬಯ್ಯ ನಾಯಕ, ಬಿ. ವೀರಣ್ಣ, ಡಾ. ಜಿ.ರಂಗಯ್ಯ, ಹರ್ತಿಕೋಟೆ ವೀರೇಂದ್ರ ಸಿಂಹ, ನಲುವಾಗಲು ನಾಗರಾಜಪ್ಪ, ಕೆ.ಬಿ. ಮಂಜುನಾಥ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು. ಸಿಪಿಐ ಸುರೇಶ್ ಸಗರಿ, ಪಿಎಸ್ಐ ಮಂಜುನಾಥ್ ಕುಪೇಲೂರು ನೇತೃತ್ವದಲ್ಲಿ ಸೂಕ್ತ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

## ಉಕ್ಕಡಗಾತ್ರಿಯಲ್ಲಿ ಇಂದು ದೇವಸ್ಥಾನ ಉದ್ಘಾಟನೆ

ಸುಕ್ಷೇತ್ರ ಉಕ್ಕಡಗಾತ್ರಿ ಗ್ರಾಮದ ಶ್ರೀ ಕೋಟಿಹಾಳ್ ಬೀರಲಿಂಗೇಶ್ವರ ಸ್ವಾಮಿ ದೇವಸ್ಥಾನದ ಉದ್ಘಾಟನೆ ಮತ್ತು ಪ್ರಾಣ ಪ್ರತಿಷ್ಠಾಪನೆ, ವಾಸ್ತು ಶಾಂತಿ ಹಾಗೂ ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10.30ಕ್ಕೆ ವಿವಿಧ ಮಠಾಧೀಶರ ದಿವ್ಯ ಸಾನ್ನಿಧ್ಯದಲ್ಲಿ ಹಮ್ಮಿಕೊಳ್ಳಲಾಗಿದೆ.

# ಕುಕ್ಕುವಾಡ ಗ್ರಾಮದ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಚಾಲನೆ



**ಶಿಕ್ಷಣದಿಂದ ಮಾತ್ರ ಮನುಷ್ಯನ ಜೀವನ ಸಾರ್ಥಕತೆ ಕಂಡುಕೊಳ್ಳಲಿದ್ದು, ಪ್ರತಿಯೊಬ್ಬರು ಶಿಕ್ಷಣವಂತರಾಗಲು ಉದ್ಯಮಿ ಎಸ್.ಎಸ್. ಗಣೇಶ್ ಕರೆ**

ದಾವಣಗೆರೆ, ಫೆ. 9 - ಪ್ರತಿಯೊಬ್ಬರ ಜೀವನ ಪರಿಪೂರ್ಣತೆ ಹೊಂದ ಬೇಕಾದರೆ, ಅದು ಶಿಕ್ಷಣದಿಂದ ಮಾತ್ರ ಸಾಧ್ಯವಾಗಲಿದೆ ಎಂಬುದನ್ನು ಅರಿತು ಪ್ರತಿಯೊಬ್ಬರು ಶಿಕ್ಷಣ ಪಡೆಯಲು ಮುಂದಾಗಬೇಕೆಂದು ದಾವಣಗೆರೆ ಷುಗರ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಎಸ್.ಎಸ್. ಗಣೇಶ್ ಕರೆ ನೀಡಿದರು.

ಇಲ್ಲಿಗೆ ಸಮೀಪದ ಕುಕ್ಕುವಾಡ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ ಆವರಣದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ನಿನ್ನೆ ಹಮ್ಮಿಕೊಂಡಿದ್ದ ಕರ್ನಾಟಕ ಪಬ್ಲಿಕ್ ಶಾಲೆಯ ನೂತನ ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಶಿಕ್ಷಣ ನಮ್ಮನ್ನು ವಿನಯವಂತರನ್ನಾಗಿ ಮಾಡುತ್ತದೆ. ಶಿಕ್ಷಣವು ಜಾಗೃತಿ ಮೂಡಿಸುತ್ತದೆ ಮತ್ತು ನಮ್ಮ ಪರಿಧಿಯನ್ನು ವಿಸ್ತರಿಸುತ್ತದೆ. ನಾವು ನಮ್ಮ ಬಗ್ಗೆ, ಸಮಾಜ ಮತ್ತು ನಮ್ಮನ್ನು ಸುತ್ತುವರೆದಿರುವ ಮತ್ತು ನಮ್ಮ ಜೀವನದ ಮೇಲೆ ಪರಿಣಾಮ ಬೀರುವ ಎಲ್ಲದರ ಬಗ್ಗೆ ಹೆಚ್ಚು ಜಾಗೃತರಾಗುತ್ತೇವೆ ಎಂಬುದನ್ನು ನಾವು ಅರಿತು ಶಿಕ್ಷಣವಂತರಾಗಲು ಪ್ರಯತ್ನಿಸಬೇಕು ಎಂದರು.

ಈ ಹಿಂದೆ ಎಲ್ಲರಿಗೂ ಶಿಕ್ಷಣ ದೊರೆಯುತ್ತಿರಲಿಲ್ಲ. ಆದರೆ ಇಂದು ಸರ್ಕಾರವೇ ಕಡ್ಡಾಯ ಶಿಕ್ಷಣ ಜಾರಿಗೆ ತಂದಿದ್ದು, ಇದರಿಂದ ಎಷ್ಟೋ ಬಡವರ ಮಕ್ಕಳು ಶಿಕ್ಷಣ ಪಡೆದು ಉನ್ನತ ಸ್ಥಾನಗಳನ್ನು ಅಲಂಕರಿಸಿದ್ದಾರೆ ಎಂದ ಅವರು ತಾವು ಶಿಕ್ಷಣ ಪಡೆದ ಬಗ್ಗೆ ವಿವರವಾಗಿ ತಿಳಿಸಿದರು.

ತಮ್ಮ ತಂದೆಯವರಾದ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಈ ಕಾರ್ಯಕ್ರಮವನ್ನು ನೆರವೇರಿಸಬೇಕಾಗಿತ್ತು. ಅವರು ಕಾರಣಾಂತರಗಳಿಂದ ಬಾರದ ಕಾರಣ, ನನಗೆ ಈ ಸುದೈವ ಬಂದಿದ್ದು, ಈ ಗ್ರಾಮಕ್ಕೆ ನಮ್ಮ ತಂದೆಯವರ ಕೊಡುಗೆ ಸಾಕಷ್ಟಿದೆ ಎಂದು ತಿಳಿಸಿದ ಅವರು, ಸದಾ ಜನರ ಸಂಕಷ್ಟಕ್ಕೆ ಸ್ಪಂದಿಸಿ, ಅಭಿವೃದ್ಧಿ ಪರ ಕೆಲಸ ಮಾಡುವವರನ್ನು ಬೆಂಬಲಿಸಬೇಕು ಎಂದು ಮಾರ್ಮಿಕವಾಗಿ ನುಡಿದರು.

ಗ್ರಾಮದ ಹಿರಿಯ ಮುಖಂಡ ಡಿ. ಮಲ್ಲೇಶಪ್ಪ ಮಾತನಾಡಿ, ಶಾಮನೂರು ಶಿವಶಂಕರಪ್ಪ ಅವರು ಈ ಭಾಗದ ಶಾಸಕರಾದ ನಂತರ ಗ್ರಾಮದ ಅಭಿವೃದ್ಧಿಗೆ ಸಾಕಷ್ಟು ಅನುದಾನ ನೀಡಿದ್ದಾರೆ. ಅವರು ಅನುದಾನ ನೀಡಲು ನಮಗೆ ಯಾವಾಗಲೂ ಬೆಂಬಲವಾಗಿ ಎಸ್.ಎಸ್. ಗಣೇಶ್ ಅವರು ನಿಂತಿದ್ದಾರೆ ಎಂದು ಉದಾಹರಣೆ ಸಮೇತ ವಿವರಿಸಿದರು.

ದಾವಣಗೆರೆ ತಾಲ್ಲೂಕು ಮಾಜಿ ಸದಸ್ಯ ಜಿ.ಎಂ. ರುದ್ರೇಗೌಡ ಮಾತನಾಡಿ, ಎಸ್ಸೆಸ್ ಸದಾ ಅಭಿವೃದ್ಧಿ ಬಗ್ಗೆ ಚಿಂತನೆ ನಡೆಸುತ್ತಾರೆ ಎಂಬುದಕ್ಕೆ ನಮ್ಮ ಗ್ರಾಮಕ್ಕೆ ಅವರು ನೀಡಿದ ಕೊಡುಗೆಯೇ ಸಾಕ್ಷಿ ಎಂದರು.

ಈ ಸಂದರ್ಭದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರ ಶಿವಮೂರ್ತಿ, ಗ್ರಾಮದ ಮುಖಂಡರುಗಳಾದ ಅರವಿಂದ್, ಪ್ರವೀಣ್, ಜಗದೀಶ್, ರಾಜಶೇಖರಪ್ಪ, ಶಂಕರ್, ಲಿಂಗರಾಜ್, ಗುತ್ತಿಗೆದಾರರು ಹಾಗೂ ಮತ್ತಿತರರಿದ್ದರು.

# ಜಿಐಎಂನಲ್ಲಿ 10 ಲಕ್ಷ ಕೋಟಿ ರೂ. ಹೂಡಿಕೆ ಸಿಗುವ ಅಂದಾಜು

ಬೆಂಗಳೂರು, ಫೆ. 9 - ಮುಂಬರುವ ಹೂಡಿಕೆದಾರರ ಸಭೆಯಲ್ಲಿ ರಾಜ್ಯಕ್ಕೆ 10 ಲಕ್ಷ ಕೋಟಿ ರೂಪಾಯಿಗಳ ಹೂಡಿಕೆ ದೊರೆಯುವ ನಿರೀಕ್ಷೆ ಇದೆ ಎಂದು ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ತಿಳಿಸಿದ್ದಾರೆ.

ದ್ವೈವಾರ್ಷಿಕ ಜಾಗತಿಕ ಹೂಡಿಕೆದಾರರ ಸಭೆಯಾದ ಜಿಐಎಂ ಬರುವ ಫೆಬ್ರವರಿ 11 ರಿಂದ 14ರ ವರೆಗೆ ಬೆಂಗಳೂರಿನಲ್ಲಿ ನಡೆಯಲಿದೆ.

ಈ ವೇಳೆ ರಾಜ್ಯಕ್ಕೆ 10 ಲಕ್ಷ ಕೋಟಿ ರೂ.ಗಳ ಹೂಡಿಕೆ ಸಿಗುವ ನಿರೀಕ್ಷೆ ಇದೆ. ಇದರಲ್ಲಿ ಶೇ.70ಕ್ಕೂ ಹೆಚ್ಚು ಹೂಡಿಕೆ ವಾಸ್ತವವಾಗಿ ಜಾರಿಗೆ ಬರಲಿದೆ. ಕೇವಲ ಕಾಗದದಲ್ಲಿ ಉಳಿಯುವುದಿಲ್ಲ ಎಂದು ಸಚಿವ ಪಾಟೀಲ್ ತಿಳಿಸಿದ್ದಾರೆ.

ಈ ಬಾರಿ 'ಬೆಳವಣಿಗೆಯ ಮರುಕಲ್ಪನೆ' ಎಂಬ ಘೋಷವಾಕ್ಯದಲ್ಲಿ ಹೂಡಿಕೆದಾರರ ಸಭೆ ನಡೆಸಲಾಗುತ್ತಿದೆ. ಈಗ ಪ್ರಪಂಚ ಟೆಕ್ ಆಧರಿತವಾಗುತ್ತಿದೆ. ಸುಸ್ಥಿರ ಬೆಳವಣಿಗೆ ಈಗಿನ ಅಗತ್ಯವಾಗಿದೆ ಎಂದು ಸಚಿವರು ಹೇಳಿದ್ದಾರೆ.

ಉಕ್ರೇನ್ ಹಾಗೂ ಇಸ್ರೇಲ್ ಸಮರ, ಅಮೆರಿಕದ ಟ್ರಂಪ್ ಸರ್ಕಾರದ ನೀತಿಗಳು, ಕೊರೊನಾ ನಂತರದ ಎರಡು ವರ್ಷಗಳ ಚೇತರಿಕೆ, ಚೀನಾ ಪ್ಲಸ್ ಒನ್ ಹಾಗೂ ಕೃತಕ ಬುದ್ಧಿವಂತಿಕೆ ಇತ್ಯಾದಿ ವಿಷಯಗಳು ಪ್ರಾಮುಖ್ಯತೆ ಪಡೆದುಕೊಂಡಿವೆ ಎಂದು ಪಾಟೀಲ್ ಹೇಳಿದ್ದಾರೆ.

ಎಲೆಕ್ಟ್ರಿಕ್ ವಾಹನ ಹಾಗೂ ಹಸಿರು ಹೈಡ್ರೋಜನ್ ವಿಷಯಗಳು ಈಗ ಕೇಂದ್ರ ಸ್ಥಾನ ಪಡೆದುಕೊಂಡಿವೆ. ಡೀಸೆಲ್, ಪೆಟ್ರೋಲ್ ಸೇರಿದಂತೆ ಎಲ್ಲಾ ಪಳೆಯುಳಿಕೆ ಇಂಧನಗಳು ನಿಧಾನವಾಗಿ ಮರೆಯಾಗಲಿವೆ. ಹೀಗಾಗಿ ಇದು ಸವಾಲಿನ ಸಮಯವಾಗಿದೆ. ಈ ಸಂದರ್ಭದಲ್ಲಿ ನಮಗೆ ಬಲಿಷ್ಠ ವ್ಯವಸ್ಥೆಯ ಅಗತ್ಯವಿದೆ. ಎಲ್ಲಾ ಬದಲಾವಣೆಗಳನ್ನು ಎದುರಿಸಬಲ್ಲ ಸುಸ್ಥಿರ ವ್ಯವಸ್ಥೆ ಬೇಕಿದೆ ಎಂದು ಸಚಿವರು ತಿಳಿಸಿದ್ದಾರೆ.

ಹೂಡಿಕೆದಾರರ ಸಭೆಯಲ್ಲಿ 19 ದೇಶಗಳು ಭಾಗಿಯಾಗಲಿವೆ. ಈ ಸಂದರ್ಭದಲ್ಲಿ ಆಯೋಜಿಸಲಾಗುವ ಗೋಷ್ಠಿಗಳಲ್ಲಿ 60ಕ್ಕೂ ಹೆಚ್ಚು ಜನರು ಮಾತನಾಡಲಿದ್ದಾರೆ.

## ಸಿಂಗಾಪುರ ಕೃಷಿ ಪತ್ತಿನ ಸಂಘಕ್ಕೆ ಆಯ್ಕೆ

ಚಿತ್ರದುರ್ಗ, ಫೆ. 9- ತಾಲ್ಲೂಕಿನ ಸಿಂಗಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಜಿ.ವಿ. ಗಂಗಾಧರ್ ಸಿಂಗಾಪುರ, ಉಪಾಧ್ಯಕ್ಷರಾಗಿ ಷಣ್ಮುಖಪ್ಪ ದೇವಪುರದ ಹಟ್ಟಿ ಇವರು ಆಯ್ಕೆಯಾಗಿದ್ದಾರೆ. ಅಧ್ಯಕ್ಷ-ಉಪಾಧ್ಯಕ್ಷರ ಚುನಾವಣೆಯಲ್ಲಿ ಸಂಘದ ನಿರ್ದೇಶಕರಾದ ಕೆ.ಆರ್. ರವಿ, ಜಿ.ಎಂ. ಮಲ್ಲೇಶ್, ಕೆ.ಎಂ.ನಾಗರಾಜ್, ಕೆ. ಯು. ವನಿತಾ, ಪುಟ್ಟಮ್ಮ, ಅಂಜನಮೂರ್ತಿ, ತಿಪ್ಪೇಸ್ವಾಮಿ, ಹೆಚ್.ಪಿ. ಹನುಮಂತಪ್ಪ, ಹೆಚ್. ರವಿ ಮತ್ತಿತರರು ಹಾಜರಿದ್ದರು.

# ಮುಜರಾಯಿ ದೇಗುಲ ಮರು ಸ್ವೀಕಾರಕ್ಕೆ ಟ್ರಸ್ಟ್‌ಗಳು ಮುಂದಾಗಬೇಕು

## ದೇವಸ್ಥಾನ ಮಹಾಸಂಘದ 'ಜಿಲ್ಲಾ ಮಟ್ಟದ ಮಂದಿರ ಅಧಿವೇಶನ'ದಲ್ಲಿ ಗುರುಪ್ರಸಾದ್ ಗೌಡ್ರು ಅಭಿಮತ

ದಾವಣಗೆರೆ, ಫೆ.9- ಮುಜರಾಯಿ ಇಲಾಖೆಗೆ ಒಳಪಟ್ಟ ಹಿಂದೂ ದೇವಸ್ಥಾನಗಳನ್ನು ಮರಳಿ ಸ್ವೀಕರಿಸಲು ಆಯಾ ದೇವಸ್ಥಾನ ಟ್ರಸ್ಟಿಗಳು ಜವಾಬ್ದಾರಿ ತೆಗೆದುಕೊಳ್ಳಬೇಕಿದೆ ಎಂದು ಹಿಂದೂ ಜನಜಾಗೃತಿ ಸಮಿತಿಯ ಗುರುಪ್ರಸಾದ್ ಗೌಡ ತಿಳಿಸಿದರು.

ಹಿಂದೂ ಜನಜಾಗೃತಿ ಸಮಿತಿ ಹಾಗೂ ದೇವಸ್ಥಾನ ಮಹಾಸಂಘದ ವತಿಯಿಂದ ನಗರದ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಸಮುದಾಯ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಜಿಲ್ಲಾ ಮಟ್ಟದ ಮಂದಿರ ಅಧಿವೇಶನ' ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ 34,500ಕ್ಕೂ ಅಧಿಕ ದೇವಸ್ಥಾನಗಳು ಸರ್ಕಾರದ ಸುಪರ್ದಿಯಲ್ಲಿದ್ದು, ಸರ್ಕಾರ ದೇವಸ್ಥಾನವನ್ನು ಅಭಿವೃದ್ಧಿಗೊಳಿಸುವ ಚಿಂತನೆ ಮಾಡದೇ, ಅಲ್ಲಿ ಕ್ರೋಢೀಕರಣಗೊಳ್ಳುವ ಭಕ್ತರ ಹಣವನ್ನು ಸರ್ಕಾರ ಕಬಳಿಸುವ ಹುನ್ನಾರ ಮಾಡುತ್ತಿದೆ ಎಂದು ಆರೋಪಿಸಿದರು.

ಸರ್ಕಾರದ ಅಧೀನದಲ್ಲಿರುವ ಹಿಂದೂ ದೇವಾಲಯಗಳಿಂದ ಕೋಟಿಗಟ್ಟಲೇ ಹಣ ಸಂಗ್ರಹ ಆಗುತ್ತದೆ. ಈ ಹಣವನ್ನು ಸರ್ಕಾರ ಅನ್ಯಮತೀಯರಿಗೆ ಹಾಗೂ ಸರ್ಕಾರದ ಇತರೆ ಬಳಕೆಗೆ ಬಳಸಿಕೊಳ್ಳುತ್ತಿದೆ. ಹಾಗಾಗಿ ನಮ್ಮ ದೇವಸ್ಥಾನದಲ್ಲಿನ ಹಣ ನಮ್ಮಲ್ಲೇ ಉಳಿಸಿಕೊಳ್ಳಲು ಜಾಗೃತರಾಗಬೇಕಿದೆ ಎಂದು ತಿಳಿಸಿದರು.

ಸರ್ಕಾರಕ್ಕೆ ಸೇರಿದ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದ 15 ವರ್ಷದ ಆಡಿಟ್ ವರದಿ ಕೇಳಿದಾಗ, ಅದರಲ್ಲಿ 21 ಕೋಟಿ ರೂ.ಗಳ ಲೆಕ್ಕಾಚಾರದಲ್ಲಿ ವ್ಯತ್ಯಾಸಗಳು ಕಂಡು ಬರುತ್ತಿವೆ. ಪಂಡರಾಪುರ ವಿಠ್ಠಲ ದೇವಸ್ಥಾನಕ್ಕೆ ಭಕ್ತರು ಕೊಟ್ಟ ಹಸುಗಳನ್ನು 4 ಬಾರಿ ಕಸಾಯಿ ಖಾನೆಗೆ ಕಳಿಸಿ ಹಣ ಸಂಗ್ರಹಿಸಿದ್ದಾರೆ ಎಂದು ದೂರಿದರು.

ಹೀಗೆ ಮುಜರಾಯಿ ಇಲಾಖೆಗೆ ಸೇರಿದ ಅನೇಕ ಹಿಂದೂ ದೇವಸ್ಥಾನಗಳ ಜಮೀನು, ಹಣ, ಆಭರಣ ಸೇರಿದಂತೆ ಇತರೆ ಸಂಪತ್ತಿನಲ್ಲಿ ಅಕ್ರಮ ನಡೆದಿದೆ. ಇದರಿಂದ ಹಿಂದೂಗಳಿಗೆ ಅನ್ಯಾಯ ಆಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಎಲ್ಲ ಹಿಂದೂಗಳು ಜಾಗೃತರಾಗಿ ನಮ್ಮ ದೇವಸ್ಥಾನಗಳನ್ನು ಉಳಿಸಿಕೊಳ್ಳಲು ಸಂಕಲ್ಪ ಮಾಡಬೇಕು. ಟ್ರಸ್ಟಿಗಳು ಒಗ್ಗಟ್ಟಾಗಬೇಕು.



ಆಂತರಿಕ ಸಮಸ್ಯೆಗಳನ್ನು ಬದಿಗಿಡಬೇಕು. ದೇವಸ್ಥಾನ ಕಾಪಾಡಿಕೊಳ್ಳುವ ಹಿತ ದೃಷ್ಟಿಯಿಂದ ನಾವೆಲ್ಲರು ಒಂದಾಗಬೇಕು ಎಂದರು.

ಹೆಬ್ಬಾಳ್ ವಿರಕ್ತ ಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಮಾತನಾಡಿ, ದೇವಸ್ಥಾನಗಳ ಟ್ರಸ್ಟಿಗಳು ಒಗ್ಗಟ್ಟಿನಿಂದ ಇರದಿದ್ದರೇ, ಸರ್ಕಾರಗಳು ದೇವಸ್ಥಾನವನ್ನು ಮುಜರಾಯಿಗೆ ತೆಗೆದುಕೊಳ್ಳುತ್ತದೆ. ಆಗ ಭಕ್ತರ ಹಣ ಸರ್ಕಾರದ ಮಡಿಲಿಗೆ ಸೇರುತ್ತದೆ ಎಂದು ಎಚ್ಚರಿಸಿದರು.

ದೇವಸ್ಥಾನಕ್ಕೆ ಬರುವ ಎಲ್ಲರಿಗೂ ಮುಕ್ತ ಅವಕಾಶ ಕಲ್ಪಿಸಬೇಕು. ಜಾತಿ-ಭೇದ ಮಾಡಬಾರದು. ಮಕ್ಕಳಿಗೆ ಉತ್ತಮ ಸಂಸ್ಕಾರ ಕಲಿಸಬೇಕು. ಧರ್ಮ ಜಾಗೃತಿ ಮಾಡಲು ಎಲ್ಲರೂ ಮುಂದಾಗಬೇಕು ಎಂದು ತಿಳಿಸಬೇಕು.

ಉದ್ಯಮಿ ಬಿ.ಸಿ. ಉಮಾಪತಿ ಮಾತನಾಡಿ, ಯುವಕರು ಧರ್ಮ ರಕ್ಷಣೆ ಮಾಡಲು ಮುಂದಾಗಬೇಕು. ಶಿಕ್ಷಣಕ್ಕೆ ಒಲವು ತೋರಿಸಿದಷ್ಟೇ, ಸಂಸ್ಕೃತಿ-ಸಂಸ್ಕಾರಕ್ಕೂ ಆದ್ಯತೆ ನೀಡಬೇಕು ಎಂದು ಹೇಳಿದರು.

> **ಹಿಂದೂಗಳು ಆಸೆ, ಆಮಿಷಕ್ಕೆ ಒಳಗಾಗಿ ಮತಾಂತರ ಆಗುತ್ತಿದ್ದಾರೆ. ನಮ್ಮ ಸನಾತನ ಸಂಸ್ಕೃತಿಯನ್ನು ಮರೆಯಿತ್ತಿದ್ದಾರೆ. ಹಾಗಾಗಿ ಪ್ರತಿ ಹಳ್ಳಿ-ಹಳ್ಳಿಯಲ್ಲೂ ಧರ್ಮ ಜಾಗೃತಿ ಆಗಬೇಕಿದೆ.**
> **- ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ, ಹೆಬ್ಬಾಳು.**

ದೇಗುಲಗಳ ಟ್ರಸ್ಟಿನ ಪದಾಧಿಕಾರಿಗಳಲ್ಲಿ ಒಡಕುಗಳು ಬರುತ್ತಿರುವುದರಿಂದಲೇ ಅನೇಕ ದೇವಸ್ಥಾನಗಳು ಮುಜರಾಯಿ ಇಲಾಖೆ ಪಾಲಾಗಿವೆ. ಹಾಗಾಗಿ ಟ್ರಸ್ಟಿನ ಪದಾಧಿಕಾರಿಗಳು ಒಗ್ಗಟ್ಟಿನಿಂದ ಇದ್ದು, ನಮ್ಮ ಪುರಾತನ ಗುಡಿಗಳು ಸರ್ಕಾರದ ಪಾಲಾಗದಂತೆ ನೋಡಿಕೊಳ್ಳಬೇಕು ಎಂದು ಹೇಳಿದರು.

ಈ ವೇಳೆ ಮಲೇಬೆನ್ನೂರಿನ ಚಿದಾನಂದಪ್ಪ, ಆರ್.ಎಲ್. ಪ್ರಭಾಕರ್, ಜಿಲ್ಲೆಯ ವಿವಿಧ ದೇವಸ್ಥಾನಗಳ ಟ್ರಸ್ಟಿನ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಭರಮಸಾಗರ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿಂದು

ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಇಂದು ಸಂಜೆ 6.30ಕ್ಕೆ ಬಿಚ್ಚುಗತ್ತಿ ಭರಮಣ್ಣ ನಾಯಕ ಮಹಾಮಂಟಪದಲ್ಲಿ 'ಸಮೂಹ ಮಾಧ್ಯಮ ಮತ್ತು ಸಮಾಜ' ಕುರಿತು ಏಳನೇ ದಿನದ ವೇದಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಹರಿಹರ ತಾಲ್ಲೂಕು ರಾಜನಹಳ್ಳಿ ವಾಲ್ಮೀಕಿ ಗುರು ಪೀಠದ ಶ್ರೀ ಪ್ರಸನ್ನಾನಂದ ಪುರಿ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ವಿಜಯ ಕರ್ನಾಟಕ ಸಂಪಾದಕ ಸುದರ್ಶನ್ ಚನ್ನಂಗಿಹಳ್ಳಿ, ದಾವಣಗೆರೆ ಪೂರ್ವ ವಲಯ ಐಜಿಪಿ ಡಾ. ಟಿ.ಆರ್. ರವಿಕಾಂತೇಗೌಡ, ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಆಗಮಿಸಲಿದ್ದಾರೆ.

ಕೇರಳದ ಕನ್ನೂರು ಪೊಲೀಸ್ ಉಪ ಮಹಾನಿರೀಕ್ಷಕ ಯತೀಶ್ಚಂದ್ರ, ಮೀಡಿಯಾ ಮಾಸ್ಟರ್ ವಿಮರ್ಶಕ ಎಂ.ಎಸ್. ರಾಘವೇಂದ್ರ, ವಿಸ್ತಾರ ನ್ಯೂಸ್ ಎಂ.ಎಸ್. ಶರತ್ 'ಸಮೂಹ ಮಾಧ್ಯಮ ಮತ್ತು ಸಮಾಜ' ಕುರಿತು ಉಪನ್ಯಾಸ ನೀಡಲಿದ್ದಾರೆ.

ಶಾಸಕ ಬಿ.ಪಿ. ಹರೀಶ್, ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್, ಕಡೂರು ಮಾಜಿ ಶಾಸಕ ಬೆಳ್ಳಿ ಪ್ರಕಾಶ್, ಜಗಳೂರು ಮಾಜಿ ಶಾಸಕ ಹೆಚ್.ಪಿ. ರಾಜೇಶ್ ಗೌರವ ಉಪಸ್ಥಿತಿ ವಹಿಸಿಕೊಳ್ಳಲಿದ್ದಾರೆ.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ದಾವಣಗೆರೆ ಡಿವೈಎಸ್ಪಿ ರುದ್ರಪ್ಪ ಎಸ್. ಉಜ್ಜನಕೊಪ್ಪ ಮತ್ತು ತಂಡದವರಿಂದ ವಚನಗೀತೆ, ಸಿರಿಗೆರೆ ತರಳಬಾಳು ಜಗದ್ಗುರು ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಂದ ಜನಪದ ನೃತ್ಯ, ಸಿರಿಗೆರೆ ತರಳಬಾಳು ಕಲಾ ಸಂಘದ ಕಲಾವಿದರಿಂದ ಭರತನಾಟ್ಯ, ಕುಂದಾಪುರ ಅಂತರರಾಷ್ಟ್ರೀಯ ಖ್ಯಾತಿಯ ಕಲಾವಿದರಾದ ಪ್ರಕಾಶ್ ಹೆಮ್ಮಾಡಿ ಮತ್ತು ನೇತ್ರಾವತಿ ಹೆಮ್ಮಾಡಿ ಅವರಿಂದ ಜಾದು ಪ್ರದರ್ಶನ ಏರ್ಪಡಿಸಲಾಗಿದೆ.

## ಭಾಷೆಯಲ್ಲಿ ಶಂಕಾಸ್ಪದ ಸಂಕೇತ

**(1ನೇ ಪುಟದಿಂದ)** ಸಿಗ್ನಲ್‌ಗಳು ಮೌನವಾಗುತ್ತಿವೆ. ಎಲ್ಲಾ ಪ್ರಕರಣಗಳಲ್ಲೂ ಇದೇ ರೀತಿ ಕಂಡು ಬಂದಿದೆ. ಹೀಗಾಗಿ ಅನುಮಾನ ಉಂಟಾಗಿದೆ ಎಂದವರು ಹೇಳಿದ್ದಾರೆ.

ಕೇಂದ್ರ ಸಂಪರ್ಕ ಸಚಿವಾಲಯವು ಹ್ಯಾಮ್ ಹವ್ಯಾಸಿ ರೇಡಿಯೋ ಆಪರೇಟರ್‌ಗಳಿಗೆ ಲೈಸೆನ್ಸ್ ನೀಡುತ್ತದೆ. ಇವರು ನಿರ್ದಿಷ್ಟ ರೇಡಿಯೋ ತರಂಗಗಳಲ್ಲಿ ಸಂವಾದ ನಡೆಸುತ್ತಾರೆ. ವಾಣಿಜ್ಯೇತರ, ಖಾಸಗಿ ಮನರಂಜನೆ, ತುರ್ತು ಸಂಪರ್ಕ ಮುಂತಾದ ಉದ್ದೇಶಗಳಿಗೆ ಹವ್ಯಾಸಿ ಹ್ಯಾಮ್ ರೇಡಿಯೋಗಳ ಬಳಕೆ ಮಾಡಲಾಗುತ್ತದೆ.

ಜನವರಿ ತಿಂಗಳಲ್ಲಿ ಕೇಂದ್ರ ಸಂಪರ್ಕ ಸಚಿವಾಲಯಕ್ಕೆ ಶಂಕಾಸ್ಪದ ಸಂಕೇತಗಳ ಬಗ್ಗೆ ಮಾಹಿತಿ ನೀಡಿದ್ದೆವು. ರಕ್ಷಣಾ ಸಂಸ್ಥೆಗಳು ತಮ್ಮನ್ನು ಸಂಪರ್ಕಿಸಿ ಸಂಕೇತಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆದಿದ್ದಾರೆ ಎಂದು ಬಿಸ್ವಾಸ್ ಹೇಳಿದ್ದಾರೆ.

ಸಂಪರ್ಕ ಸಚಿವಾಲಯದ ಉನ್ನತ ಅಧಿಕಾರಿಗಳು ಈ ಬೆಳವಣಿಗೆಯನ್ನು ಖಚಿತಪಡಿಸಿದ್ದಾರೆ.

ಗಡಿಯಲ್ಲಿ ಈ ರೀತಿಯ ಚಟುವಟಿಕೆಗಳು ನಡೆಯುತ್ತಿರುವುದು ಗಂಭೀರ ವಿಷಯವಾಗಿದೆ. ನಮ್ಮಲ್ಲಿರುವ ಸಂಪನ್ಮೂಲ ಬಳಸಿ ಈ ರೀತಿಯ ಸಂಕೇತ ಬರುತ್ತಿರುವ ಮೂಲದ ಪತ್ತೆಗೆ ಪ್ರಯತ್ನ ನಡೆಸುತಿದ್ದೇವೆ ಎಂದು ಗಡಿ ಭದ್ರತಾ ಪಡೆಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕಳ್ಳ ಸಾಗಣೆದಾರರು ಹಾಗೂ ತೀವ್ರವಾದಿ ಗುಂಪುಗಳು ಹ್ಯಾಮ್ ರೇಡಿಯೋ ತರಂಗಗಳನ್ನು ಸಂಪರ್ಕಕ್ಕೆ ಬಳಸುವುದು ಅಪರೂಪವೇನೂ ಅಲ್ಲ. ಮೊಬೈಲ್ ನೆಟ್‌ವರ್ಕ್ ಇಲ್ಲವೇ ಇ- ಮೇಲ್‌ಗಿಂತ ಹ್ಯಾಮ್ ರೇಡಿಯೋ ಮೂಲ ಪತ್ತೆ ಮಾಡುವುದು ಕಠಿಣವಾಗಿದೆ ಎಂದವರು ಹೇಳಿದ್ದಾರೆಮ

ಈ ಹಿಂದೆ 2002-03ರ ವೇಳೆಯೂ ಇದೆ ರೀತಿಯ ಸಂಪರ್ಕಗಳು ಕಂಡುಬಂದಿದ್ದವು. ಪೊಲೀಸರು ಈ ರೀತಿಯ ಸಂಕೇತಗಳನ್ನು ಗುರುತಿಸಿ ಆರು ತೀವ್ರವಾದಿಗಳನ್ನು ಗಂಗಾಸಾಗರದಲ್ಲಿ ಬಂಧಿಸಿದ್ದರು ಎಂದು ಬಿಸ್ವಾಸ್ ಹೇಳಿದ್ದಾರೆ.

2016ರಲ್ಲೂ ಸಹ ಭಾರತ ಮತ್ತು ಬಾಂಗ್ಲಾದೇಶದ ಗಡಿಯಲ್ಲಿ ಇದೇ ರೀತಿಯ ಸಂಕೇತಗಳು ಕಂಡುಬಂದಿದ್ದವು. 2017ರಲ್ಲಿ ಬಸಿರ್‌ಹಾತ್‌ನಲ್ಲಿ ಕೋಮುಗಲಭೆ ನಡೆಯುವ ಸಂದರ್ಭದಲ್ಲಿ ಶಂಕಾಸ್ಪದ ಸಂಕೇತಗಳು ಕಂಡುಬಂದಿದ್ದವು ಎಂದು ವಿಶ್ವಾಸ್ ಹೇಳಿದ್ದಾರೆ.

## ಚಿನ್ನದ ಕಳ್ಳ ಸಾಗಣೆಯಲ್ಲಿ ಇಳಿಕೆ

**(1ನೇ ಪುಟದಿಂದ)** ನಿರಂತರವಾಗಿ ಅಂತರರಾಷ್ಟ್ರೀಯ ಪ್ರಯಾಣಿಕರ ಮೇಲೆ ನಿಗಾ ವಹಿಸಿದ್ದಾರೆ. ಗಡಿಗಳು ಹಾಗೂ ದೇಶದ ಒಳಗೆ ಬರುವ ವಾಣಿಜ್ಯ ಸರಕುಗಳ ಮೇಲೆ ನಿಗಾ ವಹಿಸುವ ಮೂಲಕ ಕಳ್ಳ ಸಾಗಣೆ ನಿಯಂತ್ರಿಸಲಾಗುತ್ತಿದೆ ಎಂದವರು ಹೇಳಿದ್ದಾರೆ.

2023 - 24ರ ಸಾಲಿನಲ್ಲಿ ಕಂದಾಯ ಗುಪ್ತಚರ ನಿರ್ದೇಶನಾಲಯವು 1919 ಕೆಜಿ ತೂಕದ ಬಂಗಾರವನ್ನು ವಶಪಡಿಸಿಕೊಂಡಿತ್ತು. ಬಾಂಗ್ಲಾದೇಶ ಹಾಗೂ ಮ್ಯಾನ್ಮಾರ್ ಮೂಲಕ ಬಂಗಾರ ಕಳ್ಳ ಸಾಗಣೆಯ ಹೆಚ್ಚಿನ ಪ್ರಯತ್ನಗಳು ನಡೆದಿದ್ದವು.

# ತೋಟದ ಮಣ್ಣು ಪುನರುಜ್ಜೀವನಗೊಂಡರೆ ಉತ್ಪಾದಕತಾ ಶಕ್ತಿಯಿಂದ, ಬೇಸಿಗೆಯಲ್ಲಿ ತೋಟದ ಅಸ್ತಿತ್ವ ಉಳಿಯಲು ಸಾಧ್ಯ

ಈ ನಮ್ಮ ನಾಡಿನ ಮಣ್ಣಿಗೆ ಶತ-ಶತಮಾನಗಳ ಇತಿಹಾಸವಿದೆ. ಒಂದು ಮಿಲಿ ಮೀಟರ್ ಮಣ್ಣು ತಯಾರಾಗಲು ನೂರಾರು ವರ್ಷಗಳೇ ಬೇಕಾಗುತ್ತದೆ, ಹತ್ತಾರು ನಾಗರಿಕತೆಗಳು ಇತಿಹಾಸ ಸೇರಿ ಹೋದವು. ರಾಜ-ಮಹಾರಾಜರು ಮಣ್ಣಲ್ಲಿ ಮಣ್ಣಾಗಿ ಮಣ್ಣು ಪಾಲಾದರು. ಈ ನಾಗರಿಕ ಪ್ರಪಂಚದಲ್ಲಿ ಇನ್ನೂ ನಾವುಗಳು ನಾಗರಿಕರಾಗಿ ಬದುಕುವುದನ್ನು ಕಲಿಯುವಲ್ಲಿ ಹಿಂದೆ ಬಿದ್ದಿದ್ದೇವೆ. ಸಂಬಂಧಗಳನ್ನು ಗೌರವಿಸುವಲ್ಲಿ ಹಿಂದೆ ಉಳಿದಿದ್ದೇವೆ. ಸಂಬಂಧಗಳು ಡಾಂಭಿಕತೆಗೆ ಮೀಸಲಾಗಿವೆ, ತೋರ್ಪಡಿಕೆಗಷ್ಟೇ ಬದುಕನ್ನು ಮೀಸಲಾಗಿರಿಸಿದ್ದೇವೆ. ನಮ್ಮ ಪೂರ್ವಿಕರ ಭಾವನೆಗಳು ಮತ್ತು ಆಲೋಚನೆಗಳು ಇಂದು ಕಣ್ಮರೆಯಾಗಿವೆ. ಇವುಗಳೆಲ್ಲವುಗಳ ಮಧ್ಯೆಯೂ ನಾವುಗಳು ನೋಡುತ್ತಿರುವುದು ಹರ ಮುನಿದರೂ ಗುರು ಕಾಯುವನು ಎನ್ನುವ ಸರ್ವಕಾಲಿಕ ವಿಚಾರಧಾರೆ.

ಪರಮಪೂಜ್ಯರ ದಿವ್ಯದೃಷ್ಟಿ ಹಾಗು ಸತತ ಪರಿಶ್ರಮದ ಫಲವಾಗಿ ಇಂದು ಈ ಭಾಗದ ಎಲ್ಲಾ ಕೆರೆಗಳು ತುಂಬಿ ತುಳುಕುತ್ತಿವೆ. ಇದರ ಸದ್ಬಳಕೆಯನ್ನು ನಾವುಗಳು ಮಾಡಿಕೊಂಡರಷ್ಟೇ ನಮ್ಮ ಮುಂದಿನ ಪೀಳಿಗೆಗೆ ಈ ಕೆರೆಗಳನ್ನು ಉಳಿಸಬಹುದು. ಇಂದು ನಾವುಗಳು ಅತಿಯಾದ ಅಂತರ್ಜಲ ಬಳಕೆಯನ್ನು ಅನಿಯಮಿತವಾಗಿ ಮಾಡುತ್ತಿ ದ್ದೇವೆ. ಇಂದು ನಮ್ಮಿಂದ ಜೀವಜಲವನ್ನು ನಿರ್ಮಾಣ ಮಾಡಲು ಸಾಧ್ಯವೇ ? ಸಾಧ್ಯವಿಲ್ಲವೆನ್ನುವುದಾದರೆ, ಈ ಜೀವಜಲವನ್ನು ಬಳಸಲು ನಾವು ಯೋಗ್ಯರಲ್ಲ ಎನ್ನುವುದನ್ನು ಮನಗಾಣಬೇಕಾಗಿದೆ.



ಮಠದ ಪರಮ ಭಕ್ತರಾದ ನಾವುಗಳು ಪರಮಪೂಜ್ಯರ ಆಶಯವನ್ನು ಪೂರ್ಣಗೊಳಿಸಬೇಕಾದರೆ ಮೊದಲು ನಾವುಗಳು ಅತಿಯಾಗಿ ಭೂಮಿಗೆ ಕನ್ನ ಹಾಕುವುದನ್ನು ನಿಲ್ಲಿಸಿ. ನಿರಂತರವಾಗಿ ಮಣ್ಣಿಗೆ ಮರುಜೀವ ನೀಡುತ್ತಾ ಹೋದರೆ, ಮಳೆಗಾಲದಲ್ಲಿ ಪ್ರತೀ ತೋಟದಲ್ಲೂ ಜಲಧಾರೆ ಭೂಮಿ ತಾಯಿಯ ಒಡಲನ್ನು ತಲುಪುವುದರಲ್ಲಿ ಲವಲೇಶವೂ ಅನುಮಾನವಿಲ್ಲ. ರೈತ ಬಂಧುಗಳೇ, ನಾವುಗಳು ಸಮಾಜಕ್ಕೆ ಅನ್ನ ನೀಡುವ ಅನ್ನದಾತರು ಎಂಬ ಅರಿವಿರಲಿ, ಇಂದು ಬೆರಳೆಣಿಕೆಯಷ್ಟೇ ರೈತರು ಮಾತ್ರ ಮಣ್ಣಿನ ಸುಸ್ಥಿರತೆಯನ್ನು ಕಾಪಾಡಿ ಮಣ್ಣಿಗೆ ವಿಷ ನೀಡದೇ, ಒಂದಿಷ್ಟು ಸುಸ್ತಿರತೆ ಕಾಪಾಡಿ ವಿಷಮುಕ್ತ ಆಹಾರ ಉತ್ಪಾದಿಸಿ, ತಾವು ಉಪಯೋಗಿಸಿ, ಸಮಾಜಕ್ಕೂ ನೀಡುತ್ತಿದ್ದಾರೆ. ನಾವುಗಳು ಹಣ ಸಂಪಾದನೆಯ ಕಡೆ ಗಮನಹರಿಸಿ, ಅನಿಯಮಿತವಾಗಿ ರಸಗೊಬ್ಬರಗಳನ್ನು ಬಳಸಿ ಮಣ್ಣನ್ನು ಅಸ್ಥಿರಗೊಳಿಸುವುದನ್ನು ನಿಲ್ಲಿಸಿದರೆ ನಾವು ಸಮಾಜಮುಖಿಯಾಗಿದ್ದೇವೆ ಎನ್ನುವ ಹೆಮ್ಮೆಯಲ್ಲವೇ? ರೈತ ಬಂಧುಗಳೇ, ನಮ್ಮ ಕಳಕಳಿಯ ಮನವಿಯೇನೆಂದರೆ ನಿಮ್ಮ ತೋಟಗಳು ನಿರಂತರವಾಗಿ ಉತ್ತಮ ಇಳುವರಿ ಬರಬೇಕೆಂದರೆ ಮಣ್ಣಿನ ಜೀವಿಗಳನ್ನು ಸಂರಕ್ಷಿಸಿ, ರೈತನ ಮಿತ್ರನಂತಿರುವ ಎರೆಹುಳುಗಳನ್ನು ಅಭಿವೃದ್ದಿಪಡಿಸಿ. ಮಹಡಿ ಪದ್ದತಿಯ ಬೆಳೆಗಳನ್ನು ಅಭಿವೃದ್ದಿಪಡಿಸಿ. ಮಿಶ್ರಬೆಳೆಗಳು ಅಥವಾ ಉಪಬೆಳೆಗಳು ನಮಗೆ ನಿರಂತರ ಆದಾಯವನ್ನು ತಂದುಕೊಡುತ್ತವೆ. ಮಣ್ಣಿನ ಜೀವಿಗಳಿಗೆ ಅದರ ಪಳಿಯುಳಿಕೆಗಳು ಆಹಾರವಾಗುತ್ತವೆ. ಮಣ್ಣು ಸಮೃದ್ಧತೆ ಪಡೆದುಕೊಳ್ಳುತ್ತದೆ. ಮೊದಲು ನಾವುಗಳು ರೈತ ಉದ್ಯಮಿದಾರರು ಎನ್ನುವ ಸಮೃದ್ಧವಾದ ಭಾವನೆಗಳನ್ನು ಬೆಳೆಸಿಕೊಂಡರೆ ನಮ್ಮ ಬದುಕು ಸಮೃದ್ದವಾಗುವುದು.

ಒಂದು ಕಂಪನಿ ನಡೆಸುವ ಮಾಲೀಕನನ್ನು ನಾವುಗಳು ನೋಡಿ ಕಲಿಯುವುದಿಲ್ಲ ಎನ್ನುವುದಾದರೆ, ನಾವುಗಳು ಬದುಕಿದ್ದರೂ ಸತ್ತಂತೆ ಎನ್ನುವುದು ಅಕ್ಷರಶಃ ಸತ್ಯವೆನಿಸುತ್ತಿದೆ. ನಿರಂತರವಾಗಿ ನಾವುಗಳು ಐದು ದಶಕಗಳ ಕಾಲ ಸಮೃದ್ಧವಾಗಿದ್ದ ಭೂಮಿ ತಾಯಿಗೆ ಅನಿವಾರ್ಯವಾಗಿ ವಿಷವುಣಿಸಿ ನಾವುಗಳೂ ವಿಷವುಂಡು ನಮ್ಮ ಮಕ್ಕಳಿಗೂ ಉಣಿಸಿ ಇದರಲ್ಲಿಯೇ ವಿಕೃತಿ ಕಾಣುತ್ತಿದ್ದೇವೆ. ಇದೆಲ್ಲವನ್ನೂ ಪ್ರೋತ್ಸಾಹಿಸುವ ಸರ್ಕಾರಗಳು ಒಂದೆಡೆಯಾದರೆ, ನಮ್ಮ ಕೃಷಿ ಸಂಶೋಧನಾ ವಿಜ್ಞಾನ ಕೇಂದ್ರಗಳ ಆವಿಸ್ಕಾರಗಳು ನೂರಾರು ಕೋಟಿ ವ್ಯಯಿಸಿದರೂ ನೂರಕ್ಕೆ ನೂರರಷ್ಟು ಭೂಮಿ ತಾಯಿಯನ್ನು ಸುಸ್ಥಿರಗೊಳಿಸಲು ಸಾಧ್ಯವಾಗುತ್ತಿಲ್ಲ.

ಇದು ಹೀಗೆಯೇ ಮುಂದುವರೆದರೆ ಸಮಾಜದಲ್ಲಿ ರೋಗಿಗಳ ಸಂಖ್ಯೆ ಮತ್ತು ರೋಗಗಳು ವಿಜೃಂಭಿಸುತ್ತಲೇ ಹೋಗುತ್ತವೆ. ಆಸ್ಪತ್ರೆಗಳು ಹಾಗು ವೈದ್ಯರು ಪ್ರಕೃತಿಗೆ ವಿರುದ್ಧವಾಗಿ ತಮ್ಮ ಕಾಯಕವನ್ನು ಮಾಡುತ್ತಾ ಬರುತ್ತಿದ್ದಾರೆ. ಇಂದು ಈ ರೋಗಕ್ಕೆ ಔಷಧಿ ಕಂಡುಹಿಡಿದರೆ ಫುಟ್‌ಬಾಲ್‌ನಂತೆ ಮತ್ತೊಂದು ಕಾಯಿಲೆ ವಿಜೃಂಭಿಸುತ್ತದೆ. ಮನುಷ್ಯ ಪ್ರಕೃತಿಯ ಮುಂದೆ ಮಂಡಿಯೂ ರಲೇ ಬೇಕು, ಇಲ್ಲವಾದರೆ ವಿನಾಶವಾಗ ಬೇಕು, ಇದುವೇ ಪ್ರಕೃತಿ ನಿಯಮ.

ನಾವುಗಳು ನಿರಂತರವಾಗಿ ನಮ್ಮ ಸಂಸ್ಥೆಗಳಾದ ಮೈಕ್ರೋಬಿ ಫೌಂಡೇಶನ್, ಅಗ್ರಿ ಅಂಡ್ ಹಾರ್ಟಿಕ್ಲಿನಿಕ್, ದಾವಣಗೆರೆ ಜಿಲ್ಲಾ ಸಾವಯವ ಕೃಷಿಕರ ಕಲಿಕಾ ಕೇಂದ್ರ ಹಾಗು ಮೈಕ್ರೋಬಿ ಆಗ್ರೋಟೆಕ್ ಸಂಸ್ಥೆಗಳ ಮುಖಾಂತರ ನಿರಂತರವಾಗಿ ದಿನಾಲು ಯುಟ್ಯೂಬ್, ಫೇಸ್ ಬುಕ್, ಗೂಗಲ್ ಮೀಟ್ ಮೂಲಕ ಕೃಷಿ / ತೋಟಗಾರಿಕೆಯ ಸುಸ್ತಿರ ಜ್ಞಾನವನ್ನು ರೈತರಿಗೆ ತಜ್ಞರ ಹಾಗು ಅನುಭವಿ ಕೃಷಿ ಮತ್ತು ತೋಟಗಾರಿಕಾ ಸಲಹೆಗಾರರ ಮೂಲಕ ಮಣ್ಣಿನ ಪುನರುಜ್ಜೀವನ ಶಿಕ್ಷಣವನ್ನು ಕಳೆದ 13 ವರ್ಷಗಳಿಂದ ಉಣಬಡಿಸುತ್ತಾ ಬರುತ್ತಿದ್ದೇವೆ. ಲಕ್ಷಾಂತರ ಮಂದಿ ಇದರ ಪ್ರಯೋಜನ ಪಡೆದರೂ ಕೃತಜ್ಞತಾಭಾವ ಇನ್ನೂ ಮರೀಚಿಕೆಯಾಗಿದೆ.

ನಮ್ಮ ಸಂಸ್ಥೆಯ ವೈಜ್ಞಾನಿಕ ವಿಚಾರಗಳು ಮಣ್ಣಿನ ರಸಸಾರ ನ್ಯೂಟ್ರಲ್ ಮಾಡುವ ಡಾ. ಸಾಯಿಲ್ ಜೈವಿಕ ಒಳಸುರಿಗಳನ್ನು ಹಾಗು ಜೈವಿಕ ಗೊಬ್ಬರ ಬಳಸಿ, ಮಣ್ಣಿನ ಜೈವಿಕ ಶಕ್ತಿ ಹೆಚ್ಚಿಸಲು ತೋಟಗಾರಿಕೆಯಲ್ಲಿ ತ್ಯಾಜ್ಯಗಳ ಮಹತ್ವ, ಸೂಕ್ಷ್ಮಾಣು ಜೀವಿಗಳ ಅಭಿವೃದ್ಧಿ, ತ್ಯಾಜ್ಯಗಳ ಕಳಿಯುವಿಕೆ, ಸಾವಯವ ಇಂಗಾಲದ ಮಹತ್ವ, ಎರೆಹುಳುವಿನ ಅಭಿವೃದ್ಧಿ ನೈಸರ್ಗಿಕವಾಗಿ ಸಾರಜನಕದ ಒದಗುವಿಕೆ, ಬೆಳೆಗಳಲ್ಲಿ ಕ್ಲೋರೋಫಿಲ್ ಮಹತ್ವವೇನು, ನೀರಿನ ನಿರ್ವಹಣೆ ಹೇಗೆ ಮಾಡಬೇಕು, ಕೊಟ್ಟಿಗೆ ಗೊಬ್ಬರಕ್ಕೆ ಸಂಸ್ಕಾರ ಕೊಡುವುದು ಹೇಗೆ, ಮಣ್ಣು ಫಲವತ್ತಾದರೆ ರೋಗ ಬಾಧೆ ಕೀಟ ಬಾಧೆ ನೈಸರ್ಗಿಕವಾಗಿ ಹೇಗೆ ನಿಯತ್ರಣವಾಗುತ್ತದೆ ಹೀಗೆ ಇನ್ನೂ ಹತ್ತಾರು ವಿಚಾರಗಳು ದಿನಾಲು ಮಂಥನವಾಗುತ್ತಿವೆ. ಸುಸ್ಥಿರ ಕೃಷಿ ಎನ್ನುವುದು ಸಮೃದ್ಧತೆಯ ಸಂಕೇತ, ಸಂಸ್ಕಾರ -ಸಂಸ್ಕೃತಿಗಳ ಸಮ್ಮಿಲನ, ಸೂರ್ಯನ ಶಕ್ತಿಯನ್ನು ನೂರಕ್ಕೆ ನೂರರಷ್ಟು ಬಳಕೆ ಮಾಡಿದರೆ, ಜೇನು ನೊಣಗಳ ಸಂತತಿ ಅಭಿವೃದ್ಧಿಯಾಗುತ್ತದೆ.

ತೋಟಗಾರಿಕಾ ಬೆಳೆಗಳಲ್ಲಿ ಸಮೃದ್ಧ ಬದುಕು ನಮ್ಮದಾಗುತ್ತದೆ, ಜೇನು ಸಂತತಿ ಇಂದೇ ಕೊನೆಯಾದರೆ ನಾವೂ ಸಹ ಪ್ರಳಯದ ಅಂಚಿನಲ್ಲಿ ಇದ್ದೇವೆ ಎನ್ನುವ ಮುನ್ಸೂಚನೆಯನ್ನು ಪ್ರಕೃತಿ ನಮಗೆ ನೀಡುತ್ತಿದೆ. ಇಲ್ಲಿಯವರೆಗೆ ನಾವುಗಳು ನಿಮಗೆ ನೀಡಿರುವ ವಿಚಾರಗಳು ಸರಿ ಎನಿಸಿದರೆ ಒಂದಿಷ್ಟಾದರೂ ಅಳವಡಿಸಿಕೊಂಡು ಸಮೃದ್ಧ ಬದುಕು ರೂಪಿಸಿಕೊಂಡು ಇತಿಹಾಸ ಸೃಷ್ಟಿಸಿ.

-ಮಹಾದೇವಪ್ಪ ದಿದ್ದಿಗೆ,
ಮಣ್ಣು ಪುನರುಜ್ಜೀವನ ಸಲಹೆಗಾರರು,
ದಾವಣಗೆರೆ. 9972699813

# ಅಪಸ್ಮಾರ : ಭಯ ಬೇಡ, ಅರಿವಿರಲಿ

**ಇಂದು ಅಂತರರಾಷ್ಟ್ರೀಯ ಅಪಸ್ಮಾರ ದಿನ**

ಅಪಸ್ಮಾರ ಕಾಯಿಲೆ ಅಂದರೇನು ? ಅಪಸ್ಮಾರ ಅಥವಾ ಫಿಟ್ಸ್ ಕಾಯಿಲೆ ಒಂದು ಅಪರೂಪದ ಮಿದುಳಿಗೆ ಸಂಬಂಧಪಟ್ಟ ಸಮಸ್ಯೆ. ಏಕಾಏಕಿ ಮೆದುಳಿನ ವಿದ್ಯುತ್ ಚಲನೆಯಲ್ಲಿ ವ್ಯತ್ಯಯ ಉಂಟಾದಾಗ ಕಂಡು ಬರುವಂತಹ ಕಾಯಿಲೆ ಇದು.

ಅಪಸ್ಮಾರ ಕಾಯಿಲೆ ಯಾರಲ್ಲಿ ಕಂಡು ಬರುತ್ತದೆ ? ಅಪಸ್ಮಾರ ಕಾಯಿಲೆಗೆ ವಯಸ್ಸಿನ ಮಿತಿ ಇಲ್ಲ. ಈ ಕಾಯಿಲೆಯು ಎಳೆಯ ಮಗುವಿನಿಂದ ಹಿಡಿದು ಹಿರಿಯ ನಾಗರಿಕರಲ್ಲಿ ಕಂಡುಬರುವ ಸಾಧ್ಯತೆಗಳಿರುತ್ತವೆ.

ಅಪಸ್ಮಾರ ಕಾಯಿಲೆಗೆ ಕಾರಣಗಳೇನು? ಅಪಸ್ಮಾರ ಕಾಯಿಲೆಗೆ ಹಲವು ಕಾರಣಗಳಿವೆ. ಇದರಲ್ಲಿ ಮುಖ್ಯವಾಗಿ ಮೆದುಳು ಜ್ವರ, ಮೆದುಳಲ್ಲಿ ರಕ್ತಸ್ರಾವ, ಮೆದುಳಲ್ಲಿ ರಕ್ತ ಹೀನತೆ, ಮೆದುಳಲ್ಲಿ ಗಡ್ಡೆ (ಬ್ರೈನ್ ಟ್ಯೂಮರ್), ಅತಿಹೆಚ್ಚು ರಕ್ತದ ಒತ್ತಡ, ಇನ್ನಿತರೆ ಮೆದುಳಿಗೆ ಸಂಬಂಧಪಟ್ಟ ಕಾಯಿಲೆಗಳಲ್ಲಿ ಕಂಡು ಬರುತ್ತದೆ.

ಕೆಲವು ಮಕ್ಕಳಲ್ಲಿ ಸಾಮಾನ್ಯವಾಗಿ ಆರು ವರ್ಷದವರೆಗೆ ಏಕಾಏಕಿ ಜ್ವರ ಏರಿ, ಅಪಸ್ಮಾರ ಕಂಡು ಬರುತ್ತದೆ. ಇದಕ್ಕೆ ಫೆಬ್ರಾಯಿಲ್ ಸೀಸರ್ಸ್ಯ ಎಂದು ಕರೆಯಲ್ಪಡುತ್ತದೆ. ಮೆದುಳಿನ ಕಾಯಿಲೆ ಗಳನ್ನು ಹೊರತುಪಡಿಸಿ, ಶರೀರದಲ್ಲಿ ಕೆಲವು ಬಾರಿ ಸಮಸ್ಯೆ ಉಂಟಾದಾಗ ಅಪಸ್ಮಾರ ಬರುವಂತಹ ಸಾಧ್ಯತೆಗಳು ಇರುತ್ತವೆ. ಉದಾಹರಣೆಗೆ ರಕ್ತದಲ್ಲಿ ಸೋಡಿಯಂ ಲವಣಾಂಶ ಕಡಿಮೆ ಯಾದಾಗ, ಅತಿ ಹೆಚ್ಚಿನ ಮದ್ಯಪಾನ ಸೇವಿಸಿದಾಗ, ಮಾದಕ ವಸ್ತುವಿನ ಅಂಶ ರಕ್ತದಲ್ಲಿ ಹೆಚ್ಚಾದಾಗ, ದಿನನಿತ್ಯ ಮದ್ಯಪಾನ ಮಾಡುವ ವ್ಯಕ್ತಿಗಳು ಒಮ್ಮೆಲೇ ಮದ್ಯಪಾನ ನಿಲ್ಲಿಸಿದಾಗ ಕೂಡ ಅಪಸ್ಮಾರ ಬರುವ ಸಾಧ್ಯತೆಗಳಿರುತ್ತವೆ.

ಅಪಸ್ಮಾರ ಸಾಮಾನ್ಯವಾಗಿ ಬುದ್ಧಿಮಾಂದ್ಯ ಮಕ್ಕಳಲ್ಲಿ ಕಾಣುವ ಸಾಧ್ಯತೆಗಳಿರುತ್ತವೆ. ಕೆಲವು ಬಾರಿ ಗರ್ಭಿಣಿ ಹೆಂಗಸರಲ್ಲಿ ಅಥವಾ ಬಾಣಂತಿ ಯರಲ್ಲಿ ನಾನಾ ಕಾರಣಗಳಿಂದ ಅಪಸ್ಮಾರ ಉಂಟಾಗುವ ಸಾಧ್ಯತೆಗಳಿರುತ್ತವೆ.

ಅಪಸ್ಮಾರ ಬಂದಂತಹ ವ್ಯಕ್ತಿಗಳಲ್ಲಿ ಏನು ಮಾಡಬೇಕು? ತುರ್ತಾಗಿ ಪಿಟ್ಸ್ ಬರುವಂತಹ ವ್ಯಕ್ತಿಗಳನ್ನು ಕಂಡಲ್ಲಿ ಅವರನ್ನು ಹೊಳು ಮಗ್ಗಲಾಗಿ ತಿರುಗಿಸಿ, ಅವರಿಗೆ ಸಾಕಷ್ಟು ಜಾಗವನ್ನು ಕೊಡಬೇಕು. ಬಾಯಲ್ಲಿ ಯಾವುದೇ ತರಹದ ವಸ್ತುವನ್ನಾಗಲೀ, ಬಟ್ಟೆಯನ್ನಾಗಲೀ ಇಡಬಾರದು. ಅವರನ್ನು ಗಟ್ಟಿಯಾಗಿ ಹಿಡಿಯುವುದು, ಕಟ್ಟುವುದು ಹಾನಿಕರ. ಸಾಮಾನ್ಯವಾಗಿ ಕೆಲವೇ ನಿಮಿಷಗಳಲ್ಲಿ ಅಪಸ್ಮಾರ ನಿಂತು ಹೋಗುತ್ತದೆ, ತದನಂತರ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ತಜ್ಞರ ಹತ್ತಿರ ಕರೆದುಕೊಂಡು ಹೋಗಿ ತಪಾಸಣೆ ಮಾಡಿಸಬೇಕು. ಕೆಲವೊಮ್ಮೆ ಫಿಟ್ಸ್ ನಿಲ್ಲದೆ ಹೋದಲ್ಲಿ ತುರ್ತಾಗಿ ನರ ರೋಗ ಕೇಂದ್ರಕ್ಕೆ ಕರೆದೊಯ್ಯಬೇಕಾಗುತ್ತದೆ ಇದಕ್ಕೆ ನಾವು ಸ್ಟೇಟಸ್ ಎಪಿಲೆಪಿಕಸ್ ಎಂದು ಕರೆಯುತ್ತೇವೆ.

ಅಪಸ್ಮಾರಕ್ಕೆ ವೈದ್ಯರು ಏನು ಮಾಡುತ್ತಾರೆ? ಆಸ್ಪತ್ರೆಯಲ್ಲಿ ವೈದ್ಯರು ಮೊದಲಿಗೆ ಅಪಸ್ಮಾರ ವನ್ನು ನಿಲ್ಲಿಸಲು ಸೂಕ್ತ ಔಷಧಿ ಉಪಚಾರ ಮಾಡುತ್ತಾರೆ. ತದನಂತರ ರಕ್ತಪರಿಕ್ಷೆ, ಮೆದುಳಿನ ಸ್ಕ್ಯಾನ್, ಇಇಜಿ ಮುಂತಾದ ಪರೀಕ್ಷೆಗಳನ್ನು ಮಾಡಿಸುತ್ತಾರೆ. ಮೂಲತಃ ಇವೆಲ್ಲ ಪರೀಕ್ಷೆಗಳನ್ನು ಮಾಡಿಸಿ ಕಾರಣ ಹುಡುಕಲು ಪ್ರಯತ್ನಿಸುತ್ತಾರೆ.

ಅಪಸ್ಮಾರವನ್ನು ಯಾಕೆ ಉಪಚರಿಸಬೇಕು ? ಅಪಸ್ಮಾರ ಕಾಯಿಲೆಯ ಉಪಚಾರ ಆಗದಿದ್ದಲ್ಲಿ ಪುನಃ ಪುನಃ ಬರುವ ಸಾಧ್ಯತೆಗಳು ಇರುತ್ತವೆ. ಎಷ್ಟೋ ಸಾರಿ ರಸ್ತೆ ಅಪಘಾತಗಳು ಉಂಟಾಗಿ ಜೀವಕ್ಕೆ ಕುತ್ತು ಬರುವಂತಹ ಉದಾಹರಣೆಗಳಿವೆ. ಮಕ್ಕಳಲ್ಲಿ ಪದೇ ಪದೇ ಈ ಕಾಯಿಲೆ ಕಂಡುಬಂದಲ್ಲಿ ಬುದ್ಧಿ ಮಾಂದ್ಯತೆ ಉಂಟಾಗುವ ಸಾಧ್ಯತೆಗಳು ಇರುತ್ತವೆ. ಗರ್ಭಿಣಿ ಹೆಂಗಸರಲ್ಲಿ ಅಪಸ್ಮಾರ ಕಾಯಿಲೆಯ ನಿಯಂತ್ರಣ ಇಲ್ಲದಿದ್ದಲ್ಲಿ ಗರ್ಭಪಾತ ಆಗುವ ಸಾಧ್ಯತೆಗಳು ಇರುತ್ತವೆ.

ಅಪಸ್ಮಾರ ಅಂಟುರೋಗವೇ ? ಖಂಡಿತಾ ಇಲ್ಲ ಈ ಕಾಯಿಲೆಯು ಒಬ್ಬರಿಂದ ಇನ್ನೊಬ್ಬರಿಗೆ ಹರಡುವುದಿಲ್ಲ. ಆದರೆ, ಕೆಲವು ಸಂದರ್ಭಗಳಲ್ಲಿ ಅನುವಂಶೀಯವಾಗಿ ಕಂಡುಬರುತ್ತದೆ.

ಅಪಸ್ಮಾರ ಕಾಯಿಲೆಗೆ ಚಿಕಿತ್ಸೆ ಇದೆಯೇ? ಖಂಡಿತಾ ಇದೆ. ಮೊದಲು ಔಷಧೋಪಚಾರ ಮಾಡುತ್ತೇವೆ. ಕಾಯಿಲೆಯ ತೀವ್ರತೆಯ ಅನುಗುಣವಾಗಿ ನಿರ್ದಿಷ್ಟ ಸಮಯದವರೆಗೆ ಔಷಧಿಗಳನ್ನು ಸೇವಿಸಲು ಸಲಹೆ ನೀಡುತ್ತೇವೆ. ಸಾಮಾನ್ಯವಾಗಿ ಒಂದರಿಂದ ಐದು ವರ್ಷಗಳವರೆಗೆ ಔಷಧಿಗಳನ್ನು ತೆಗೆದುಕೊಳ್ಳುವಂತಹ ಸಲಹೆಯನ್ನು ಮಾಡುತ್ತೇವೆ. ಕೆಲವು ಸಂದರ್ಭಗಳಲ್ಲಿ ಜೀವನ ಪೂರ್ತಿ ಔಷಧೋಪಚಾರ ಮಾಡಬೇಕಾಗುತ್ತದೆ. ಔಷಧಿಗಳಿಂದ ನಿಯಂತ್ರಿಸಲು ಸಾಧ್ಯವಾಗದಿದ್ದಲ್ಲಿ ಹೆಚ್ಚಿನ ಪರೀಕ್ಷೆಗಳನ್ನು ಮಾಡಿಸಿ ಶಸ್ತ್ರಚಿಕಿತ್ಸೆ ಮಾಡಿಸುವ ಸಂದರ್ಭಗಳೂ ಉಂಟಾಗಬಹುದು.

ಅಪಸ್ಮಾರ ವ್ಯಕ್ತಿಯನ್ನು ಮದುವೆಯಾಗಬಹುದೇ? ನಿಸಂಶಯವಾಗಿ ಮದುವೆಯಾಗಬಹುದು. ಮೊದಲೇ ಹೇಳಿದ ಹಾಗೇ ಸರಿಯಾಗಿ ಔಷಧೋಪಚಾರ ಮಾಡಿಸಿದಾಗ ಕಾಯಿಲೆಯು ನಿಯಂತ್ರಣಕ್ಕೆ ಬರುತ್ತದೆ. ಸರಿಯಾದ ಸಲಹೆ ಪಡೆದಲ್ಲಿ ತೃಪ್ತವಾದ ದಾಂಪತ್ಯ ಜೀವನವನ್ನು ಸಾಗಿಸಬಹುದು.

ಅಪಸ್ಮಾರ ಕಾಯಿಲೆಗೆ ಎಸ್‌ಎಸ್ ನಾರಾಯಣ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಇದೆಯೇ? ಎಸ್‌ಎಸ್ ನಾರಾಯಣ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಅಪಸ್ಮಾರ ಕಾಯಿಲೆಯ ಪರೀಕ್ಷೆಗಳನ್ನು ಮಾಡುವಂತಹ ಅತ್ಯಾಧುನಿಕ ತಂತ್ರ ಜ್ಞಾನ ಹೊಂದಿರುವ ವೈದ್ಯರು ಹಾಗೂ ಉಪಕರಣ ಗಳು ಇವೆ. ನಾವು ಸಾವಿರಾರು ರೋಗಿಗಳಿಗೆ ಸಫಲಕರ ಚಿಕಿತ್ಸೆಯನ್ನು ಮಾಡಿರುತ್ತೇವೆ.



- ಡಾ. ವೀರಣ್ಣ ಗಡಾದ,
ಹಿರಿಯ ಪ್ರಾಧ್ಯಾಪಕರು
ಹಾಗೂ ನರರೋಗ ತಜ್ಞರು,
ಎಸ್ ಎಸ್ ನಾರಾಯಣ
ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ,
ದಾವಣಗೆರೆ.

## ಸಂವಿಧಾನದ ಹಕ್ಕು ಪಡೆಯಲು ಸಂಘಟನೆಯಾಗಬೇಕು

**(1ನೇ ಪುಟದಿಂದ)** ನಿಮ್ಮ ಜೊತೆಯಲ್ಲಿದ್ದೇವೆ ವಾಲ್ಮೀಕಿ ಮಠದಲ್ಲಿ ವೈದ್ಯಕೀಯ ಹಾಗೂ ಇಂಜನಿಯರಿಗ್ ಕಾಲೇಜು ತೆರೆಯಿರಿ, ನಮ್ಮ ಸಹಕಾರವಿದೆ ಎಂದರು. ಶ್ರೀರಾಮನ ಹೆಸರನ್ನು ಹೇಳಿ ಜನರನ್ನು ವಂಚಿಸಲು ಬರುವವರು ಇದ್ದಾರೆ ಎಚ್ಚರವಾಗಿರಿ ಎಂದರು.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮಾತನಾಡಿ, ಬಾಬಾ ಸಾಹೇಬ್ ಅಂಬೇಡ್ಕರ್ ಸಂದೇಶಗಳು ಜಾರಿಯಾಗಲು ನಾವು ಶ್ರಮಪಡಬೇಕಿದೆ ಎಂದರು.

ಸಮಾಜ ಕಲ್ಯಾಣ ಸಚಿವ ಹೆಚ್.ಸಿ. ಮಹದೇವಪ್ಪ ಮಾತನಾಡಿ, ಜಾತಿ ವಿನಾಶವಾಗಬೇಕು ಎಂದು ಅಂಬೇಡ್ಕರ್, ಬಸವಣ್ಣನವರು ಹೇಳಿದರೂ ಸಹ ಇತ್ತೀಚಿಗೆ ಜಾತಿಗಟ್ಟಿಯಾ ಗುತ್ತದೆ. ರಾಮಾಯಣ ಬರೆದ ಗುಂಪಿಗೆ ಸೇರಿದವರು ನಾವುಗಳೆಲ್ಲಾ ಉತ್ತೇಜಿತರಾಗಬೇಕು. ರಾಮ ಪೂಜಾ ವಸ್ತುವಲ್ಲ. ನಾವು ಶಿಕ್ಷಣ ಪಡೆಯಬೇಕು. ಕೇಸರಿಕರಣವಾಗದೇ ನೀಲಿಕರಣವಾಗಬೇಕು ಎಂದರು.

ಮದಕರಿ ನಾಯಕ ಪ್ರಶಸ್ತಿ ವಿಜೇತ ಚಲನಚಿತ್ರ ನಟ ಶಶಿಕುಮಾರ್ ಮಾತನಾಡಿ, ಎಸ್ಸಿ-ಎಸ್ಟಿಯವರು ಒಂದಾದರೆ ರಾಜ್ಯದಲ್ಲಿ ಪ್ರಮುಖ ಹುದ್ದೆಯ ಚುಕ್ಕಾಣಿ ಹಿಡಿಯಬಹುದು. ವಿದ್ಯೆ ಯಾರೂ ಕದಿಯದ ವಸ್ತು. ಹಾಗಾಗಿ ಪ್ರತಿಯೊಬ್ಬರು ಶಿಕ್ಷಣವಂತರಾಗಿ, ಒಳ ಜಗಳ ಬಿಟ್ಟು ಎಲ್ಲರೂ ಒಂದಾಗಿ ಮಠದಲ್ಲಿ ಶಿಕ್ಷಣ ಸಂಸ್ಥೆಗಳು ಆಗಲಿ ಎಂದರು.

ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಭಾರತದ ಇತಿಹಾಸದಲ್ಲಿ ಮಹಾಕಾವ್ಯ ರಚಿಸಿದ ವಾಲ್ಮೀಕಿ ನಾಯಕರು, ರಾಜರು, ಪಾಳೇಗಾರರು, ಬೇಟೆಯಾಡುವವರು ಶ್ರೇಣೀಕೃತ ಸಮಾಜದ ವ್ಯವಸ್ಥೆಯಲ್ಲಿ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯವಾಗಿ ಹಿಂದುಳಿದಿದ್ದು, ಸುಶಿಕ್ಷಿತರಾಗಿ ನಮ್ಮ ಹಕ್ಕುಗಳನ್ನು ಪಡೆಯಲು ಜಾಗೃತರಾಗಬೇಕು ಎಂದು ಹೇಳಿದರು.

ಸಂಸದ ಇ.ತುಕಾರಾಂ ಮಾತನಾಡಿದರು. ಮಹರ್ಷಿ ವಾಲ್ಮೀಕಿ ಜಾತ್ರೆಯ ಅಧ್ಯಕ್ಷ ಜಗಳೂರಿನ ಶಾಸಕ ಬಿ.ದೇವೇಂದ್ರಪ್ಪ ಚಿಕ್ಕಮ್ಮನಹಟ್ಟಿ ಅಧ್ಯಕ್ಷತೆ ವಹಿಸಿದ್ದರು.

ಹರಪನಹಳ್ಳಿ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್, ಚಳ್ಳಕೆರೆ ಶಾಸಕ ರಘುಮೂರ್ತಿ, ಹಾನಗಲ್ ಶಾಸಕ ಶ್ರೀನಿವಾಸ ಮಾನೆ, ಶಿಗ್ಗಾಂವಿ ಶಾಸಕ ಪಠಾಣ್ ಯಾಸೀರ್ ಅಹ್ಮದ್, ಹೆಗ್ಗಡದೇವನಕೋಟೆ ಶಾಸಕ ಅನಿಲ್ ಚಿಕ್ಕಮಾಧು, ಹಿರೇಕೆರೂರು ಶಾಸಕ ಯು.ಬಿ. ಬಣಕಾರ, ಸುರಪುರ ಶಾಸಕ ರಾಜಾ ವೇಣು ಗೋಪಾಲ ನಾಯಕ, ಮಾಯಕೊಂಡ ಶಾಸಕ ಕೆ.ಎಸ್ ಬಸವಂತಪ್ಪ, ಕಂಪ್ಲಿ ಶಾಸಕ ಗಣೇಶ್, ಶಿರಹಟ್ಟಿ ಶಾಸಕ ಚಂದ್ರು ಲಮಾಣಿ, ಮಾಜಿ ಶಾಸಕ ವೈ.ರಾಮಪ್ಪ, ಮಠದ ಧರ್ಮದರ್ಶಿ ದಾವಣಗೆರೆ ಬಡಗಿ ವೀರಣ್ಣ, ದಾವಣಗೆರೆ ಮಾಜಿ ಮಹಾಪೌರ ವಿನಾಯಕ ಪೈಲ್ವಾನ್, ನಂದಿಗಾವಿ ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಚನ್ನಗಿರಿ ವಾಲ್ಮೀಕಿ ಸಮಾಜದ ಅಧ್ಯಕ್ಷ ಹೊದಿಗೆರೆ ರಮೇಶ್ ಸೇರಿದಂತೆ ಇತರರು ಇದ್ದರು.

## ಛತ್ತೀಸ್‌ಘಡ : 31 ನಕ್ಸಲರು ಹತ


**(1ನೇ ಪುಟದಿಂದ)** ಕಾರ್ಯಚರಣೆ ನಡೆಸಿತ್ತು ಎಂದು ಬಸ್ತಾರ್ ವಲಯದ ಐಜಿಪಿ ಸುಂದರರಾಜ್ ತಿಳಿಸಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ಜಿಲ್ಲಾ ಮೀಸಲು ಪಡೆ, ವಿಶೇಷ ಕಾರ್ಯಪಡೆ, ಬಸ್ತಾರ್ ಫೈಟರ್ಸ್ ಹಾಗೂ ರಾಜ್ಯ ಪೊಲೀಸರ ತಂಡಗಳು ಪಾಲ್ಗೊಂಡಿದ್ದವು ಎಂದವರು ಹೇಳಿದ್ದಾರೆ. ಇದುವರೆಗೂ ಕಾರ್ಯಾಚರಣೆ ಸ್ಥಳದಲ್ಲಿ ಸಮವಸ್ತ್ರ ದಲ್ಲಿದ್ದ 31 ನಕ್ಸಲರ ಶವಗಳು ಪತ್ತೆಯಾಗಿವೆ. ಭಾರೀ ಪ್ರಮಾಣದ ಶಸ್ತ್ರಾಸ್ತ್ರ ಹಾಗೂ ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದವರು ಹೇಳಿದ್ದಾರೆ.

ಕಾರ್ಯಚರಣೆ ವೇಳೆ ಜಿಲ್ಲಾ ಮೀಸಲು ಪಡೆ ಹಾಗೂ ವಿಶೇಷ ಕಾರ್ಯಪಡೆಗೆ ಸೇರಿದ ಇಬ್ಬರು ಭದ್ರತಾ ಸಿಬ್ಬಂದಿ ಸಾವನ್ನಪ್ಪಿದ್ದಾರೆ ಹಾಗೂ ಇನ್ನಿಬ್ಬರಿಗೆ ಗಾಯಗಳಾಗಿವೆ. ಗಾಯಗೊಂಡವರು ಅಪಾಯದಿಂದ ಪಾರಾಗಿದ್ದಾರೆ. ಸ್ಥಳಕ್ಕೆ ಹೆಚ್ಚಿನ ಪಡೆಗಳನ್ನು ರವಾನಿಸಲಾಗಿದ್ದು ಶೋಧ ಕಾರ್ಯಾಚರಣೆ ಮುಂದುವರೆದಿದೆ ಎಂದು ಐಜಿಪಿ ಸುಂದರರಾಜ್ ತಿಳಿಸಿದ್ದಾರೆ. ಈ ವರ್ಷ ಇದುವರೆಗೂ 81 ನಕ್ಸಲರು ಹತರಾಗಿದ್ದಾರೆ. ಇವರ ಪೈಕಿ 65 ನಕ್ಸಲರು ಬಸ್ತಾರ್ ವಿಭಾಗದಲ್ಲಿ ಹತರಾಗಿದ್ದಾರೆ. ಕಳೆದ ವರ್ಷ 219 ನಕ್ಸಲರನ್ನು ಕಾರ್ಯಾಚರಣೆಯಲ್ಲಿ ನಿಷ್ಕ್ರಿಯಗೊಳಿಸಲಾಗಿತ್ತು.

## ಹರಿಹರದಲ್ಲಿಂದು ಶ್ರೀ ಮೌನೇಶ್ವರ ಸ್ವಾಮಿ ಜಯಂತ್ಯೋತ್ಸವ

ಶ್ರೀ ಕಾಳಿಕಾಂಬಾ, ಗುರು ಮೌನೇಶ್ವರ ಸೇವಾ ಸಮಿತಿ ಹಾಗೂ ವಿಶ್ವಕರ್ಮ ಸಮಾಜದದಿಂದ ಇಂದು ಶ್ರೀ ಜಗದ್ಗುರು ಮೌನೇಶ್ವರ ಸ್ವಾಮಿ ಜಯಂತ್ಯೋತ್ಸವ ಸಮಾರಂಭವನ್ನು ಹಳೆ ಭರಂ ಪುರ ಬಡಾವಣೆಯ ಶ್ರೀ ಮೌನೇಶ್ವರ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಅಧ್ಯಕ್ಷ ಡಿ.ಪಿ. ರಾಜಾಚಾರ್ಯ ತಿಳಿಸಿದ್ದಾರೆ.



ಇಂದು ಬೆಳಿಗ್ಗೆ ಜಿ.ಬಿ. ವೀರೇಶ್ ಆಚಾರ್ಯರವರ ನೇತೃತ್ವದಲ್ಲಿ ಉಪನಯನ, ವಿವಾಹ, ಜವಳ ಹಾಗೂ ಅಕ್ಷತಾರೋಹಣ. ಶ್ರೀ ಗುರು ಮೌನೇಶ್ವರ ಸ್ವಾಮಿಯ ಪಾಲಕಿ ಉತ್ಸವ ನಡೆಯಲಿದೆ. 11-30ಕ್ಕೆ ನಡೆಯಲಿರುವ ಧಾರ್ಮಿಕ ಸಮಾರಂಭದ ಸಾನ್ನಿಧ್ಯವನ್ನು ಅಂತರವಳ್ಳಿ ಶ್ರೀ ಗುರು ನಿರಂಜನ ಮಹಾಸ್ವಾಮಿಗಳು, ಹುಲಗೂರು ಶ್ರೀ ಮೌನೇಶ್ವರ ಮಹಾಸ್ವಾಮಿಗಳು ವಹಿಸಲಿದ್ದಾರೆ. ಸೇವಾ ಸಮಿತಿ ಅಧ್ಯಕ್ಷ ಡಿ.ಪಿ. ರಾಜಾಚಾರ್ಯ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಡಾ. ಪ್ರಭಾ ಮಲ್ಲಿಕಾರ್ಜುನ್, ಬಿ.ಪಿ. ಹರೀಶ್, ಹೆಚ್.ಎಸ್. ಶಿವಶಂಕರ್ ಮತ್ತಿತರರು ಆಗಮಿಸುವರು.

## ಹಣಕಾಸು ವ್ಯವಸ್ಥೆ ಶೀಘ್ರ ಸಿದ್ಧ

**(1ನೇ ಪುಟದಿಂದ)** ಹಣಕಾಸು ವ್ಯವಸ್ಥೆ ಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಇದು ದೇಶವನ್ನು ಹಸಿರೀಕರಣವಾಗಿ ಪರಿವರ್ತಿಸುವ ಹಾಗೂ ಪರಿಸರ ಕುರಿತು ಹೊಂದಿರುವ ಬದ್ಧತೆಯ ಗುರಿಗಳನ್ನು ಈಡೇರಿಸಲು ನೆರವಾಗಲಿದೆ ಎಂದು ಸಚಿವೆ ಸೀತಾರಾಮನ್ ಹೇಳಿದ್ದರು.

**KHB ಬಂಗ್ಲೆ ಸೈಟ್ ಮಾರಾಟಕ್ಕೆ**
ಕಮರ್ಷಿಯಲ್ ಆಗುವಂತಹ, 100 ಅಡಿ ರಸ್ತೆಗೆ 80X60 ಸೌತ್, 40x60 ಉತ್ತರ, 40x60 ಉತ್ತರ, 50x80 ಉತ್ತರ, 40x60 ಉತ್ತರ, 50x80 ಸರ್ಕಲ್ ಪಕ್ಕ, (GOOD LOCATION)
ಕಿರಣ್ ಬೂಸ್ನೂರ್ (ಏಜೆಂಟ್)
ಮೊ: 94824 63409
98440 63409, 97315 63409

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
40x60 South, 40x60 ಅಕ್ಕ-ಪಕ್ಕ 80 ಅಡಿ ರೋಡ್‌ಗಿದೆ. 50x80 East, 40x60 East,
Rate : 2800/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ನೂತನ ಕಾಲೇಜು ಹಿಂಭಾಗ LIC ಕಾಲೋನಿಯಲ್ಲಿ 30x46 ಪೂರ್ವ, ವಿನಾಯಕ ಬಡಾವಣೆಯಲ್ಲಿ 30x50 ದಕ್ಷಿಣ ಅಕ್ಕ-ಪಕ್ಕ. ಆಂಜನೇಯ ಬಡಾವಣೆಯಲ್ಲಿ 30x50 ಉತ್ತರ, 30x47 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಸೋಫಾ, ಕುಷನ್, ಕಿಟಕಿಗೆ ಫೈಬರ್ ವೆಲ್ಕ್ರೊ ಮೆಶ್ ಮತ್ತು ಅಲ್ಯುಮೀನಿಯಂ ಫ್ರೇಮ್ stainless steel ಸೊಳ್ಳೆ ಮೆಶ್ ಹಾಕಲಾಗುವುದು.
Swapna cushion work
Maharaj pet DVG
98445- 81966

**ಮನೆ ಬಾಡಿಗೆಗೆ**
ಪಿ.ಜೆ. ಬಡಾವಣೆ, 8ನೇ ಮೇನ್ ರೋಡ್, 8ನೇ ಕ್ರಾಸ್, #397ರ ಮೊದಲನೇ ಮಹಡಿಯಲ್ಲಿರುವ 20x40 ಅಳತೆಯ 2 ಬೆಡ್ ರೂಮ್, ಹಾಲ್, ಕಿಚನ್ ಹಾಗೂ ನೀರಿನ ಸಂಪೂರ್ಣ ಸೌಕರ್ಯವುಳ್ಳ ಮನೆ ಬಾಡಿಗೆಗೆ ಇದೆ. ವಿಚಾರಿಸಿ : ಸಸ್ಯಹಾರಿಗಳಿಗೆ ಮಾತ್ರ
94482 48242, 78927 53714

**ಬೇಕಾಗಿದ್ದಾರೆ**
ಕ್ಲಿನಿಕ್ ನಲ್ಲಿ ರಿಸೆಪ್ಷನಿಸ್ಟ್ (ಬೇಸಿಕ್ ಕಂಪ್ಯೂಟರ್ ಜ್ಞಾನ ಇರಲಿ) ಕೆಲಸ ಮಾಡಲು ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ. ಬೆಳಿಗ್ಗೆ 11ರಿಂದ ಸಂಜೆ 8ರ ಒಳಗೆ ಫೋನ್ ಮಾಡಿ ಸಂಪರ್ಕಿಸಿ:
91640 54547

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x 73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**ಸೈಟುಗಳು ಮಾರಾಟಕ್ಕಿವೆ**
ನೂತನ ಕಾಲೇಜು ಹತ್ತಿರ 24x45 West, ವಿದ್ಯಾನಗರದಲ್ಲಿ 30x33 South, ಕೃಷಿ ಕೇಂದ್ರ ಹಿಂಭಾಗ 30x54 North
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಬಾಡಿಗೆಗೆ / ಲೀಜ್‌ಗೆ ಇವೆ**
ಆಂಜನೇಯ ಬಡಾವಣೆಯಲ್ಲಿ ಮೊದಲನೇ ಮಹಡಿ ದಕ್ಷಿಣಕ್ಕೆ 2 ಬೆಡ್ ರೂಂ (ಸಸ್ಯಹಾರಿಗಳಿಗೆ ಮಾತ್ರ) ವಿನಾಯಕ ಬಡಾವಣೆಯಲ್ಲಿ, ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ 3 ಬೆಡ್ ರೂಂ ಮನೆಗಳು.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಶಾಮನೂರು ರಸ್ತೆಯಲ್ಲಿ MRP ಪಕ್ಕದಲ್ಲಿ ನಾನ್‌ವೆಜ್ ಹೋಟೆಲ್ ನಡೆಸಿಕೊಂಡು ಹೋಗಲು ಬೇಕಾಗಿದ್ದಾರೆ. ಎಲ್ಲಾ ಸೌಲಭ್ಯವುಳ್ಳದ್ದಾಗಿರುತ್ತದೆ. 40 ಸಾವಿರ ಅಡ್ವಾನ್ಸ್, ತಿಂಗಳಿಗೆ 12 ಸಾವಿರ ಬಾಡಿಗೆ.
ಆಸಕ್ತರು ಸಂಪರ್ಕಿಸಿ.
98441 27137

**JOB OPPORTUNITY**
Female Office Assistant
Good In Office Work-Computer Skills
Good In Customer Dealing Freshers can also apply B.Com., M.Com., & MBA
Cor Contact :
97312 18567
Send C.V-hardsoftdvg@gmail.com

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಪಾರ್ಸಲ್ ಕಟ್ಟಲು ಮತ್ತು ಇಡ್ಲಿ ವಡಾ ಹಾಕುವ ಅನುಭವವುಳ್ಳವರು ಬೇಕಾಗಿದ್ದಾರೆ. ದಯವಿಟ್ಟು ಅನುಭವವುಳ್ಳವರು ಮಾತ್ರ ಕರೆ ಮಾಡಿ.
70194 69302

**ಬೇಕಾಗಿದ್ದಾರೆ**
ಹೋಟೆಲ್ ಅಡುಗೆ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಸಮಯ: 7:00AM - 12:30PM
95388 96927

**ಬೇಕಾಗಿದ್ದಾರೆ**
ಜೆಪಿ ಎಂಟರ್‌ಪ್ರೈಸಸ್
ಫೆವಿಲಿಯನ್ ರೋಡ್, ದಾವಣಗೆರೆ ಟ್ಯಾಲಿಯಲ್ಲಿ ಅನುಭವವುಳ್ಳ MALE ಕ್ಯಾಂಡಿಡೇಟ್ ಬೇಕಾಗಿದ್ದಾರೆ. ಸಂಪರ್ಕಿಸಿ.
99640 35554

**TO - LET**
Single bed room House Near Uday shivakumar house behind Shiva Residency, Banashankari badavane, Davanagere-5
82175 75049, 94834 81278

**ಸೈಟುಗಳು ಮಾರಾಟಕ್ಕಿವೆ**
ಜೈನ್ ಕಾಲೇಜ್ ಹತ್ತಿರ ಬಾಡಾ ಕ್ರಾಸ್ 40 ಅಡಿ ರಸ್ತೆಯಲ್ಲಿ ಉತ್ತರ ದಿಕ್ಕಿನ ಮುಖವುಳ್ಳ 30x57 ಅಳತೆಯ ಸೈಟ್ ಜೆ.ಹೆಚ್. ಪಟೇಲ್ ನಗರ 40x60 ದಕ್ಷಿಣ 20x30 ಮನೆ ಮಾರಾಟಕ್ಕಿದೆ.
94482 33389

**SECURITY GUARD DUTY**
ಕೆಲಸಕ್ಕೆ ಬೇಕಾಗಿದ್ದಾರೆ
ದಾವಣಗೆರೆ, ಚಿತ್ರದುರ್ಗ ಹಾಗೂ ಶಿರಮಗೊಂಡನಹಳ್ಳಿ (Dvg) ESI ,PF,ಊಟ, ರೂಮ್ ಸೌಲಭ್ಯ ಇರುತ್ತದೆ. ಸಂಪರ್ಕಿಸಿ :
70012 87756

**ಬೇಕಾಗಿದ್ದಾರೆ**
ಮಹಿಳಾ ಟೆಲಿಕಾಲರ್ಸ್
30ವರ್ಷದ ಒಳಗಿನ ವಯೋಮಿತಿ, SSLC/PUC/DEGREE, ತಿಂಗಳಿಗೆ ಸಂಬಳ : 15,000ರೂ.ವರೆಗೆ ಸಂಪರ್ಕಿಸಿ :
80504 42755

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಸೆಕ್ಯೂರಿಟಿ/ಕ್ಲೀನಿಂಗ್ ಕೆಲಸ. ವಯಸ್ಸು 20 ರಿಂದ 30 ವರ್ಷ, ಸಂಬಳ : ರೂ. 12,000/-, ವಸತಿ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಿ :
97400 98047

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಮಳಿಗೆ ಬಾಡಿಗೆಗೆ ಇದೆ**
ಇಂಡಸ್ಟ್ರೀಯಲ್ ಏರಿಯಾ (SAR ನಗರ), ಲೋಕಿಕೆರೆ ರಸ್ತೆ, ಸರ್ಕಲ್‌ನಲ್ಲಿ ವಾಣಿಜ್ಯ ಮಳಿಗೆಗಳು, 1ನೇ ಮಹಡಿಯಲ್ಲಿ 1000, 600 600 sqft 3 ಮಳಿಗೆಗಳು ಬಾಡಿಗೆಗೆ ಇವೆ.
9900939161, 7676477320

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್ ಫ್ಯಾನ್ಸಿ ಸ್ಟೋರ್, ಬೇಕರಿ ಟೀಸ್ಟಾಲ್ ಫಾಸ್ಟ್ ಫುಡ್ ಹೋಟೆಲ್, ಗ್ಯಾರೇಜ್ ಮೊಬೈಲ್ ಶಾಪ್, ಎಲೆಕ್ಟ್ರಿಕಲ್ ಶಾಪ್ ಚಿಪ್ಸ್ ಶಾಪ್ ಇತ್ಯಾದಿ ಶಾಪ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
96860 22969

**AdBlue / DEF**
available with Best Quality & Price for All BS6 Diesel
Commercial & Passanger Vehicles
Visit: Best Lubricants
Opp. to New Pvt Bus Stand PB Road, Davangere.
73380 33337

**WANTED**
* CRE (For Tele calling Services)
* Sales Excutives (DL Mandatory)
(Basic Computer Skills & Tally)
Nayana motors Drive
63663 88061
87225 09137

**ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ**
ಸಾಯಿ ಶ್ರೀ ಇಂಡಸ್ಟ್ರೀಸ್
ಸಬ್‌ರಿಜಿಸ್ಟರ್ ಆಫೀಸ್ ಹತ್ತಿರ, MRF ಟೈರ್ ಶೋ ರೂಂ ಹಿಂಭಾಗ, ದಾವಣಗೆರೆ.
90368 31855

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ ದಾವಣಗೆರೆ.

**ಉದ್ಯೋಗಾವಕಾಶ**
ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್‌ನಲ್ಲಿ (ಹೋಂ ನರ್ಸಿಂಗ್) ವಯೋವೃದ್ದರನ್ನು ನೋಡಿಕೊಳ್ಳಲು ಯುವತಿಯರು, ಯುವಕರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. ಉಚಿತ ಊಟ, ವಸತಿ.ಸಂಬಳ 18,000 ರಿಂದ 25,000 ರೂ.ವರೆಗೆ ವಿದ್ಯಾರ್ಹತೆ : 7th, 10th, PUC, ANM, GNM
76193 54274

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



**ನೃತ್ಯರೂಪಕ**

ನಮನ ಅಕಾಡೆಮಿಯಿಂದ ಭಾನುವಾರದಂದು ಬಾಪೂಜಿ ಸಭಾಂಗಣದಲ್ಲಿ ನಡೆದ ಪೂರ್ವ ರಂಗನಮನ ಕಾರ್ಯಕ್ರಮದಲ್ಲಿ ನಡೆದ ನಾನಾ ಶಾಸ್ತ್ರೀಯ ನೃತ್ಯ, ಶ್ರೀಕೃಷ್ಣ ವಿಲಾಸಂ ನೃತ್ಯರೂಪಕ, ಶಾಸ್ತ್ರೀಯ ನೃತ್ಯ ಪ್ರದರ್ಶನ.

# ಲೇಖನದಲ್ಲಿ ಅಕ್ಷರ ಸಂಸ್ಕೃತಿ ಕಾಪಾಡಿಬೇಕಿದೆ

## 'ರಾಷ್ಟ್ರೀಯ ಅಕ್ಷರ ಹಬ್ಬದ ಸಮಾರೋಪ ಸಮಾರಂಭದಲ್ಲಿ ಬರಗೂರು ರಾಮಚಂದ್ರಪ್ಪ



ದಾವಣಗೆರೆ, ಫೆ.9- ಅಕ್ಷರ ಸಂಸ್ಕೃತಿಗೆ ಅದರದ್ದೇ ಆದ ಮೌಲ್ಯವಿದೆ. ಮೌಖಿಕವಾಗಿ ನಾಗರ ನಾಲಿಗೆ ಮತ್ತು ಲಿಖಿತವಾಗಿ ಲಜ್ಜೆಗೆಟ್ಟ ಬರವಣಿಗೆ ಇರಬಾರದು. ಲೇಖಕರಾದವರು ಸಹನೆ-ಗೌರ ವದಿಂದ ವರ್ತಿಸಬೇಕು. ಜತೆಗೆ ಲೇಖನದಲ್ಲಿ ಅಕ್ಷರ ಸಂಸ್ಕೃತಿ ಕಾಪಾಡಿಕೊಳ್ಳಬೇಕು ಎಂದು ನಾಡಿನ ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ದಾವಣಗೆರೆ ಲಿಟರರಿ ಫೋರಂ ಮತ್ತು ಅರಸೀಕೆರೆಯ ಅರಸೀ ಸಾಂಸ್ಕೃತಿಕ ವೇದಿಕೆ ಯಿಂದ ಇಲ್ಲಿನ ಎಂಬಿಎ ಕಾಲೇಜು ಸಭಾಂಗಣ ದಲ್ಲಿ ಭಾನುವಾರ ಆಯೋಜಿಸಿದ್ದ 'ರಾಷ್ಟ್ರೀಯ ಅಕ್ಷರ ಹಬ್ಬ-2025'ರ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಅಕ್ಷರ ಸಂಸ್ಕೃತಿ ಆಳುವವರ ಆಳಾಗಬಾರದು, ನಾಗರ ನಾಲಿಗೆ ಆಗಬಾರದು, ಲಜ್ಜೆಗೆಟ್ಟ ಅಕ್ಷರ ಹೊಂದಿರಬಾರದು. ಮಾತು, ಕೃತಿಯಲ್ಲಿ ಭ್ರಷ್ಟಾಚಾರ ಇರಬಾರದು. ಬುದ್ಧ ಮಮತೆ-ಸಮತೆ, ಕಾಠಿಣ್ಯ-ಕಾರುಣ್ಯಗಳ ವೈರುಧ್ಯವನ್ನು ಮೀರಿ ಹುಸಿತನ-ಹಸಿತನವಿಲ್ಲದೇ ಜನರನ್ನು ತಲುಪಿದಂತೆ ಅಕ್ಷರ ಸಂಸ್ಕೃತಿ ತಲುಪಬೇಕು. ಬುದ್ಧಾಕ್ಷರ ಸಂಸ್ಕೃತಿ ನಮ್ಮದಾದರೆ ಅಕ್ಷರ ಸಂಸ್ಕೃತಿ ಕಾಪಾಡಿಕೊಳ್ಳಬಹುದು ಎಂದು ತಿಳಿಸಿದರು.

ಲೇಖಕರು ಗೌರವ, ಬಿರುದುಗಳನ್ನು ಬಯಸಿದಂತೆ, ಜನರು ನಮ್ಮಿಂದ ಸಾಮಾಜಿಕ ಜವಾಬ್ದಾರಿಯನ್ನು ಬಯಸುತ್ತಾರೆ. ಹಾಗಾಗಿ ಜನರ ಅಪೇಕ್ಷೆಯಂತೆ ಬರಹಗಾರರು ಹೊಣೆ ಹೊರಬೇಕು. ಈ ನಿಟ್ಟಿನಲ್ಲಿ ಅಕ್ಷರ ಸಂಸ್ಕೃತಿಯನ್ನು ಉಳಿಸುವ ನಿಜವಾದ ಸಾಮಾಜಿಕ ಜವಾಬ್ದಾರಿ ಲೇಖಕರ ಮೇಲಿದೆ ಎಂದರು.

ಅಕ್ಷರ ಸಂಸ್ಕೃತಿ ಅನೇಕ ಬಿಕ್ಕಟ್ಟು, ವೈರುಧ್ಯಗಳನ್ನು ಎದುರಿಸುತ್ತಿದೆ. ರಕ್ತಸಿಕ್ತ ಅಕ್ಷರಗಳು, ಉದ್ರೇಕಗೊಳಿಸುವ ಅಕ್ಷರಗಳು ಮತ್ತು ಹಿಂಸಾತ್ಮಕ ಪದಗಳ ಈ ಒಂದು ಕಾಲಾಂತರದ ಬಗ್ಗೆ ಯೋಚಿಸಬೇಕಿದೆ. ಹೊಡಿ, ಬಡಿ, ಕಡಿ ಎನ್ನುವ ಸಂಸ್ಕೃತಿ ಇರುವವರು ಇಂದು ಯಾವುದೇ ಅಳುಕಿಲ್ಲದೇ ಓಡಾಡುವ ವಾತಾವರಣ ನಿರ್ಮಾಣವಾಗಿದೆ. ಇಂಥ ಭಾಷಿಕ ಭ್ರಷ್ಟಾಚಾರ ಮತ್ತು ರಕ್ತಸಿಕ್ತ ಸಂಸ್ಕೃತಿ ನಡುವೆ ನಾವಿಂದು ಬದುಕುತ್ತಿದ್ದೇವೆ ಎಂದು ಕಳವಳ ವ್ಯಕ್ತಪಡಿಸಿದರು.

ಪ್ರಜಾವಾಣಿ ಸಂಪಾದಕ ರವೀಂದ್ರ ಭಟ್ ಮಾತನಾಡಿ, ಈಗಿನ ಮಕ್ಕಳು ನೋಡದ ಹೊರತು ಏನನ್ನೂ ಊಹಿಸದ ಮಟ್ಟಕ್ಕೆ ಬಂದು ತಲುಪಿವೆ. ಆದ್ದರಿಂದ ಮಕ್ಕಳಿಗೆ ಪುಸ್ತಕದ ಅಭಿರುಚಿ ಬೆಳೆಸಿ ಎಂದರು.

ಮಕ್ಕಳು ಪುಸ್ತಕಗಳ ಗೀಳನ್ನು ಬೆಳೆಸಿಕೊಳ್ಳಲು ಪೋಷಕರು ನೆರವಾಗಬೇಕು. ಪುಸ್ತಕ ಕಲಿಸಿದಷ್ಟು ಯಾವುದು ಕಲಿಸಲಾರದು. ಅಗತ್ಯ ಪಟ್ಟಿಯಲ್ಲಿ ಪುಸ್ತಕ, ಸಾಹಿತ್ಯವೂ ಇರುವಂತಾಗಬೇಕು ಎಂದರು.

ಕುಂಭಮೇಳದಲ್ಲಿ ಮುಳುಗಿದರೆ ಪಾಪ ಪರಿಹಾರ ಆಗುತ್ತದೋ ಇಲ್ಲವೋ ಆದರೆ, ಪುಸ್ತಕದಲ್ಲಿ ಮುಳುಗಿದರೆ ನಿಶ್ಚಯವಾಗಿ ಪಾಪ ಪರಿಹಾರವಾಗುತ್ತದೆ ಎಂದು ಹೇಳಿದರು.

ಈ ವೇಳೆ ಕಾರ್ಯ ನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯೆ ದಾಕ್ಷಾಯಿಣಿ ಹುಡೇದ, ಹಿರಿಯ ಪತ್ರಕರ್ತ ಸದಾನಂದ ಹೆಗಡೆ, ಸಾಹಿತಿ ಎ.ಬಿ ರಾಮಚಂದ್ರಪ್ಪ, ರೈತ ಮುಖಂಡ ತೇಜಸ್ವಿ ಪಟೇಲ್ ಹಾಗೂ ಇತರರು ಇದ್ದರು.

# ಸಮಾಜದ ಪರಿವರ್ತನೆಯ ನಾಟಕಗಳು ರಚನೆಯಾಗಬೇಕಿದೆ

## ವೃತ್ತಿ ರಂಗನಾಟಕ ರಚನಾ ಶಿಬಿರದಲ್ಲಿ ನಾಟಕಕಾರ ಡಾ. ಕೆ.ವೈ. ನಾರಾಯಣ ಸ್ವಾಮಿ



ದಾವಣಗೆರೆ, ಫೆ. 9 - ನಾಟಕ ರಚನೆಗೆ ಸಾಮಾಜಿಕ ಪ್ರಬುದ್ಧತೆ ಹಾಗೂ ಪಾರದರ್ಶಕ ವಿಚಾರಗಳನ್ನು ಹೊತ್ತು, ಒಬ್ಬರಿಂದ ಇನ್ನೊಬ್ಬರಿಗೆ ದಾಟಿಸುವಂತಿರಬೇಕು. ಆಗ ಮಾತ್ರ ಉತ್ತಮ ನಾಟಕಗಳು ರಚನೆಯಾಗುತ್ತವೆ. ಇದರ ಜೊತೆಗೆ ನಾಟಕಗಳನ್ನು ರಚಿಸುವಾಗ ಸರಿಯಾದ ವಿಷಯ ವಸ್ತುಗಳು ಮೊದಲು ಬರಹಗಾರನಿಗೆ ಅರ್ಥವಾಗ ಬೇಕು. ಆ ನಂತರ ನೋಡುಗರಿಗೆ ಅರ್ಥೈಸಬೇಕು. ಇದು ನಿರಂತರ ಓದು, ಬರಹ ಹಾಗೂ ಉತ್ತಮ ನಾಟಕಗಳನ್ನು ನೋಡುವುದರಿಂದ ಸಾಧ್ಯವಾಗುತ್ತದೆ ಎಂದು ನಾಟಕಕಾರರು ಮತ್ತು ವಿಮರ್ಶಕ ಡಾ. ಕೆ.ವೈ. ನಾರಾಯಣ ಸ್ವಾಮಿ ಹೇಳಿದರು.

ಕೊಂಡಜ್ಜಿಯ ಸ್ಕೌಟ್ ಕ್ಯಾಂಪ್‌ನಲ್ಲಿ ವೃತ್ತಿ ರಂಗಭೂಮಿ ರಂಗಾ ಯಣ (ದಾವಣಗೆರೆ), ಕರ್ನಾಟಕ ನಾಟಕ ಅಕಾಡೆಮಿ, (ಬೆಂಗಳೂರು) ಇವರ ಸಹಯೋಗದೊಂದಿಗೆ ಏರ್ಪಡಿಸಿದ ವೃತ್ತಿ ರಂಗನಾಟಕ ರಚನಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಬಿರದ ನಿರ್ದೇಶಕ ಬಸವರಾಜ ಪಂಚಗಲ್ ಮಾತನಾಡಿ, ಒಂದು ನಾಟಕವು ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವುದರ ಜೊತೆಗೆ ಸಮಾಜಕ್ಕೆ ಪರಿವರ್ತನೆಯ ಸಂದೇಶವನ್ನು ರವಾನಿಸುವಂತಿರ ಬೇಕು. ಹಾಗೆ ಹಿಂದಿನ ತಲೆಮಾರಿನವರು ತಮಗಾಗುತ್ತಿದ್ದ ಅಪಮಾನ, ನೋವು, ನಲಿವು ಹಾಗೂ ನ್ಯೂನತೆಗಳನ್ನು ನಾಟಕದ ರೂಪದಲ್ಲಿ ಅಭಿವ್ಯಕ್ತಪಡಿಸುತ್ತಿದ್ದರು. ಆದರೆ ಇಂದಿನ ಯುವ ಜನತೆಗೆ ನಾಟಕಗಳ ರಚನೆ ಹಾಗೂ ಅಭಿರುಚಿ ಯನ್ನು ಅಗತ್ಯವಾಗಿ ಬೆಳೆಸಬೇಕಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದಾವಣಗೆರೆ ವೃತ್ತಿ ರಂಗಾಯಣ ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ ಮಾತನಾಡಿ, ಒಟ್ಟಾರೆ ರಂಗಭೂಮಿಯ ಚಿಂತನೆಗಳನ್ನು ಮರುರೂಪಿಸ ಬೇಕಾಗಿದೆ. ಇದಕ್ಕೆ ಪೂರಕವಾಗಿ ರಂಗಭೂಮಿ ವಿದ್ವಾಂಸರು ಕೈಗೂಡಿಸಿ, ವೃತ್ತಿ ರಂಗಭೂಮಿಯನ್ನು ಹೊಸ ದಿಕ್ಕಿನತ್ತ ನಡೆಸಬೇಕಿದೆ. ಅದಕ್ಕೆ ದಾವಣಗೆರೆಯ ವೃತ್ತಿ ರಂಗಾಯಣ ಪೂರಕ ವಾತಾವರಣವನ್ನು ಸೃಷ್ಟಿಸುತ್ತಿದೆ. ಆ ದಿಕ್ಕಿನಲ್ಲಿ ಇಂದಿನ ವೃತ್ತಿ ರಂಗ ನಾಟಕ ರಚನಾ ಶಿಬಿರ ವಿನೂತನ ಪ್ರಯತ್ನ ಮಾಡುತ್ತಿದೆ.

ಕಾರ್ಯಕ್ರಮದಲ್ಲಿ ಹಿರಿಯ ನಾಟಕಾರ ಡಾ. ಕೆ. ಶಿವನಗೌಡ ಉಪಸ್ಥಿತರಿದ್ದರು.

## ಬಿ.ಇ.ಎ ಶಿಕ್ಷಣ ಮಹಾ ವಿದ್ಯಾಲಯಕ್ಕೆ 2 ರ್‍ಯಾಂಕ್

ದಾವಣಗೆರೆ, ಫೆ. 9 - ದಾವಣಗೆರೆ ವಿವಿಯ 2023 -24 ನೇ ಸಾಲಿನ ಪರೀಕ್ಷೆ ಯಲ್ಲಿ ಬಿ.ಇ.ಎ ಶಿಕ್ಷಣ ಮಹಾವಿದ್ಯಾಲಯಕ್ಕೆ ಬಿ.ಇಡಿ ಕೋರ್ಸ್‌ನಲ್ಲಿ ಸುಧಾ ಆರ್. 6ನೇ ರ್‍ಯಾಂಕ್, (ಸಿಜಿಪಿಎ-8.80) ಮತ್ತು ರೇವತಿ ಜಿ.ಎನ್. 8ನೇ ರ್‍ಯಾಂಕ್ (8.78) ಪಡೆದಿದ್ದಾರೆ.

## ಬಾಲ ಶನೇಶ್ವರ ಸ್ವಾಮಿ ದೇವಸ್ಥಾನದ ವಾರ್ಷಿಕೋತ್ಸವ



ದಾವಣಗೆರೆ, ಫೆ.9- ಸಮೀಪದ ಆವರಗೆರೆಯ ಎತ್ತಿನ ಸಂತೆ ಹಿಂಭಾಗದ ಗುರು ಬಾಲ ಶನೇಶ್ವರ ಸ್ವಾಮಿ ದೇವಸ್ಥಾನದ 3ನೇ ವರ್ಷದ ವಾರ್ಷಿಕೋತ್ಸವವು ಕೋಣಂದೂರು ಬೃಹನ್ಮಠದ ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ಶನಿವಾರ ನಡೆಯಿತು. ಈ ವೇಳೆ ಸಮಿತಿಯ ಅಧ್ಯಕ್ಷ ಟಿ.ಎನ್. ನಟರಾಜ್, ಪ್ರಧಾನ ಕಾರ್ಯದರ್ಶಿ ಡಿ. ಶಾಂತ ಕುಮಾರ್, ಖಜಾಂಚಿ ಹೆಚ್.ಕೆ. ಹಾಲಯ್ಯ, ಬಿ. ಕೊಟ್ರೇಶ್, ಶ್ರೀಶೈಲ, ಕೊಲಂಬಿ ಮಲ್ಲಿಕಾರ್ಜುನ್, ಅರುಣ್ ಕುಮಾರ್, ಡಾ. ರವಿ ಕುಮಾರ್ ಪಟೇಲ್, ಎಂ. ಕೊಟ್ರಯ್ಯ, ಜಿ.ಕೆ ತಿಪ್ಪೇಸ್ವಾಮಿ, ಬಾಬು ರಾಯ್ಕರ್ ಮತ್ತಿತರರಿದ್ದರು.

## ಸಿರಿಗೆರೆ : ಸದ್ಧರ್ಮ ನ್ಯಾಯಪೀಠದ ಕಲಾಪ ಇಲ್ಲ



ಭರಮಸಾಗರ ದಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ಪ್ರಯುಕ್ತ ಇಂದು ಮತ್ತು ಇದೇ ದಿನಾಂಕ 17 ರಂದು ಸದ್ಧರ್ಮ ನ್ಯಾಯಪೀಠದ ಕಾರ್ಯಕಲಾಪಗಳು ನಡೆಯುವುದಿಲ್ಲ ಎಂದು ಪೀಠದ ಕಾರ್ಯದರ್ಶಿ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 08194-268829, 268848.

## ಯುವನಿಧಿ ಯೋಜನೆಗೆ ಅರ್ಜಿ

ದಾವಣಗೆರೆ, ಫೆ. 9 - ಗ್ಯಾರಂಟಿ ಯೋಜನೆಯಾದ ಯುವನಿಧಿ ಯೋಜನೆಯಡಿಯಲ್ಲಿ ತೇರ್ಗಡೆಯಾದ ಪದವಿ, ಸ್ನಾತಕೋತ್ತರ ಹಾಗೂ ಡಿಪ್ಲೊಮಾ ಅರ್ಹತೆ ಹೊಂದಿದವರು ಯುವನಿಧಿ ಯೋಜನೆಯ ನಿರುದ್ಯೋಗಿ ಭತ್ಯೆ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಇದೇ ದಿನಾಂಕ 15 ಕೊನೆಯ ದಿನವಾಗಿರುತ್ತದೆ. ದಾವಣಗೆರೆ ವಿಶ್ವವಿದ್ಯಾನಿಲಯ ಹಾಗೂ ಜಿಲ್ಲೆಯಾದ್ಯಂತ ಇರುವ ಪದವಿ ಕಾಲೇಜುಗಳು ಹಾಗೂ ಡಿಪ್ಲಮೋ ಕಾಲೇಜುಗಳು ಮತ್ತು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ವಿಶೇಷ ನೋಂದಣಿ ಕೌಂಟರ್ ತೆರೆಯಲಾಗಿದ್ದು, ವಿಶೇಷ ನೋಂದಣಿ ಅಭಿಯಾನವನ್ನು ಆಯೋಜಿಸಲಾಗಿದೆ.

ಅಲ್ಲದೇ, ಗ್ರಾಮಒನ್, ಕರ್ನಾಟಕ ಒನ್, ದಾವಣಗೆರೆ ಒನ್ ಮತ್ತು ಬಾಪೂಜಿ ಸೇವಾ ಕೇಂದ್ರಗಳಲ್ಲೂ ನಿರಂತರವಾಗಿ ಯುವನಿಧಿ ನೋಂದಣಿ ಮಾಡಿಕೊಳ್ಳಬಹುದು. ನಿರುದ್ಯೋಗಿ ಯುವಕ-ಯುವತಿಯರು ಈ ವಿಶೇಷ ನೋಂದಣಿ ಅಭಿಯಾನದ ಸದುಪಯೋಗವನ್ನು ಪಡೆಯಬಹುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರವನ್ನು ಸಂಪರ್ಕಿಸಲು ಜಿಲ್ಲಾ ಉದ್ಯೋಗಾ ಧಿಕಾರಿ ರವೀಂದ್ರ ತಿಳಿಸಿದ್ದಾರೆ.

## ಕೃಷಿ ಉತ್ಸವ ಮುಂದೂಡಿಕೆ

ದಾವಣಗೆರೆ, ಫೆ.9- ಹಸಿರೋತ್ಸವ ಫೋರಮ್‌ನಿಂದ ಇದೇ ದಿನಾಂಕ 19ರಿಂದ 23ರವರೆಗೆ ನಿಗದಿಯಾಗಿದ್ದ ಕೃಷಿ ಉತ್ಸವವನ್ನು ಮುಂದೂಡಲಾಗಿದೆ.

# ಸ್ತ್ರೀ ಸಮಾನತೆಯಿಂದ ಸಮಾಜದ ಉದ್ಧಾರ ಸಾಧ್ಯ

**(6ನೇ ಪುಟದಿಂದ)** ಹೇಳುತ್ತಾರೆ. ಒಂದೆಡೆ ಶಂಕರಾಚಾರ್ಯರು, ಕೆಟ್ಟ ಮಗು ಹುಟ್ಟಬಹುದು, ಕೆಟ್ಟ ತಾಯಿಯಲ್ಲ ಎಂದು ಹೆಣ್ಣಿನ ಬಗ್ಗೆ ಹೇಳಿದ್ದಾರೆ ಎಂದು ತಿಳಿಸಿದರು.

'ಸಮಾಜದ ಉದ್ಧಾರಕ್ಕೆ ಎಲ್ಲ ಹೆಣ್ಣು ಮಕ್ಕಳಿಗೆ ಶಿಕ್ಷಣ ಸಿಗಲೇ ಬೇಕು ಎಂದು ಅಹಲ್ಯಾ ಬಾಯಿ ಹೊಳ್ಕರ್ ಕಟ್ಟಜ್ಞೆ ಹೊರಡಿಸಿದ್ದರು. ಇವರು ಒಂದು ದೇವಸ್ಥಾನ ನಿರ್ಮಾಣವಾದರೆ 2 ಶಾಲೆಗಳು ನಿರ್ಮಾಣವಾಗಬೇಕು ಎಂದು ಪ್ರತಿಪಾದಿಸಿದ್ದರು ಎಂದರು.

ಸೃಷ್ಠಿ ಮಾತೆಯ ಸ್ವರೂಪ, ಇವಳಿಂದಲೇ ಶಿಷ್ಠ ಸಮಾಜದ ನಿರ್ಮಾಣ ಸಾಧ್ಯ. ಸ್ತ್ರೀ ಇಲ್ಲದೇ, ಪುರುಷ ಅಪೂರ್ಣ. ಹೆಣ್ಣು ಶಿಕ್ಷಣವಂತಳಾದರೇ, ಕುಟುಂಬವೇ ಶಿಕ್ಷಣ ಪಡೆಯಲಿದೆ ಎಂದು ಹೇಳಿದರು.

ಈ ವೇಳೆ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ, ಮಹಾವೀರ ಎಂ. ಕರೆಣ್ಣನವರ್, ಅಧಿವಕ್ತಾ ಪರಿಷತ್ ಜಿಲ್ಲಾಧ್ಯಕ್ಷ ಎಲ್. ದಯಾನಂದ, ವಿನಾಯಕ ಎಜುಕೇಷನ್ ಟ್ರಸ್ಟಿನ ವ್ಯವಸ್ಥಾಪಕ ಡಾ. ಅಥಣಿ ವೀರಣ್ಣ, ಕಾರ್ಯದರ್ಶಿ ಮುರುಗೇಶ್, ಉದ್ಯಮಿ ಬಿ.ಸಿ. ಉಮಾಪತಿ, ಎಲ್.ಹೆಚ್. ಅರುಣ ಕುಮಾರ್, ಶಶಿಕಾಂತ್, ಎಂ.ಎಸ್. ಮನೋಜ್ ಇತರರು ಇದ್ದರು.

# ಪುಸ್ತಕ ಪ್ರಪಂಚದ ಮೇಲೆ ಕೇಂದ್ರ ಸರ್ಕಾರದ ಪರೋಕ್ಷ ಪ್ರಹಾರ

## ರಾಷ್ಟ್ರೀಯ ಅಕ್ಷರ ಹಬ್ಬ : ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಪತ್ರಕರ್ತ ಜಿ.ಎನ್.ಮೋಹನ್ ಕಳವಳ

ದಾವಣಗೆರೆ, ಫೆ.9- ಪುಸ್ತಕ ಪ್ರಪಂಚದ ಮೇಲೆ ಕೇಂದ್ರ ಸರ್ಕಾರ ಪರೋಕ್ಷ ಪ್ರಹಾರ ನಡೆಸಿದೆ. ಪುಸ್ತಕ ರವಾನೆಯ ಅಂಚೆ ವೆಚ್ಚವನ್ನು 45ಕ್ಕೆ ಏರಿಕೆ ಮಾಡಿದೆ. ಅಕ್ಷರಕ್ಕೆ ಮಾತನಾಡುವ, ಪ್ರಶ್ನೆ ಮಾಡುವ ಹಾಗೂ ಬೀದಿಯಲ್ಲಿ ನಿಂತು ಪ್ರತಿಭಟನೆ ಮಾಡುವ ಶಕ್ತಿ ಕೊಡದೇ ಹೋದರೆ, ದೊಡ್ಡ ಅಪಾಯ ಎದುರಾಗಲಿದೆ ಎಂದು ಹಿರಿಯ ಪತ್ರಕರ್ತ ಜಿ. ಎನ್.ಮೋಹನ್ ಕಳವಳ ವ್ಯಕ್ತಪಡಿಸಿದರು.

ಇಲ್ಲಿನ ಬಾಪೂಜಿ ಎಂಬಿಎ ಕಾಲೇಜು ಸಭಾಂಗಣದಲ್ಲಿ ದಾವಣಗೆರೆ ಸಾಹಿತ್ಯ ವೇದಿಕೆ ಹಾಗೂ ಅರಸೀ ಸಾಂಸ್ಕೃತಿಕ ವೇದಿಕೆ ಆಯೋಜಿಸಿದ್ದ 'ರಾಷ್ಟ್ರೀಯ ಅಕ್ಷರ ಹಬ್ಬ'ದ ಮೂರನೇ ದಿನವಾದ ಭಾನುವಾರದ ಸಮಾರಂಭದಲ್ಲಿ ಪುಸ್ತಕಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಆಲೋಚನೆಗೆ ಹಚ್ಚುವ, ಪ್ರಶ್ನೆ ಮಾಡುವ ಮನೋಭಾವ ಬೆಳೆಸುವ ಪುಸ್ತಕಗಳ ಬಗ್ಗೆ ಸರ್ಕಾರಕ್ಕೆ ಅಂಜಿಕೆ ಇದೆ. ಉಸಿರು ಕಟ್ಟಿಸುವ ವಾತಾವರಣ ಸೃಷ್ಟಿಸಿ ಪುಸ್ತಕ ಹಾಗೂ ಬರಹ ಲೋಕ ನಾಶ ಪಡಿಸುವ ಪ್ರಯತ್ನವನ್ನು ಸರ್ಕಾರ ಪ್ರಜ್ಞಾಪೂರ್ವಕವಾಗಿ ಮಾಡುತ್ತಿದೆ ಎಂದು ಆರೋಪಿಸಿದರು.

ಸಾವಿರ ಪ್ರತಿಗಳನ್ನು ಮುದ್ರಿಸುತ್ತಿದ್ದ ಕನ್ನಡ ಸಾಹಿತ್ಯ ಲೋಕ ಈಗ ಕುಗ್ಗಿದೆ. 200 ಪ್ರತಿಗಳನ್ನು ಮುದ್ರಿಸುವ ಸಂಕಷ್ಟಕ್ಕೆ ಸಿಲುಕಿದೆ. ಪುಸ್ತಕ ಮುದ್ರಣವಾದ ಬಳಿಕವೂ ಕೃತಿಕಾರರಿಗೆ ಜವಾಬ್ದಾರಿ ಇದೆ. ಬದಲಾದ ಕಾಲದಲ್ಲಿ ಸಾಹಿತಿಗಳು ಸಂಕೋಚ ತೊರೆಯಬೇಕಿದೆ. ಪ್ರಕಟವಾದ ಪುಸ್ತಕದ ಪ್ರಚಾರ, ಮಾರಾಟಕ್ಕೆ ಸಹಕಾರ ನೀಡಬೇಕಿದೆ. ಸಾಹಿತ್ಯದ ಕೃತಿಗಳು ಪಿಕ್ ಪಾಕೆಟ್ ಆಗಬೇಕಿದೆ. ಇಲ್ಲವಾದರೆ ಪುಸ್ತಕ ಸಂಸ್ಕೃತಿಯನ್ನು ಮುಂದೆ ದಾಟಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಮ್ಯಾಂಚೆಸ್ಟರ್ ಆಫ್ ಕರ್ನಾಟಕ ಆಗಿದ್ದ ದಾವಣಗೆರೆಯಲ್ಲಿ ಕೆಂಬಾವುಟದ ಪರಂಪರೆ ಕನ್ನಡ ಸಾಹಿತ್ಯವನ್ನೂ ಕಸಿ ಮಾಡಿದೆ. ಹೋರಾಟಗಳು ಅಕ್ಷರ ಲೋಕದ ನೋಟವನ್ನು ಬದಲಿಸಿ, ಸಾಹಿತ್ಯದ ಒಳಗೂ ಹರಿದು ಬಂದಿವೆ. ನಮ್ಮೊಳಗೆ ಸಂವಾದ ಏರ್ಪಡದೇ ಹೋದರೆ ಸಾಹಿತ್ಯದಲ್ಲಿ ಅದನ್ನು ಕಾಣಲು ಸಾಧ್ಯವಿಲ್ಲ ಎಂದರು.

ಕಥೆಗಾರ ಹನುಮಂತ ಹಾಲಗೇರಿ ಮಾತನಾಡಿ, ಪ್ರಸ್ತುತ ಕಾಲದ ತಲ್ಲಣಗಳನ್ನು ಒಳಗೊಂಡ ಕಥೆಗಳು ಸಾಹಿತ್ಯ ಲೋಕಕ್ಕೆ ಬರಬೇಕಿದೆ. ಮೊಬೈಲ್ ಬಂದ ಬಳಿಕ ಹಲವು ಪಲ್ಲಟಗಳು ಆಗಿವೆ. ಜೀವನ ಪರ್ಯಂತ ಪಡೆದ ಜ್ಞಾನಕ್ಕೆ ಮಾನ್ಯತೆ ಇಲ್ಲವಾಗಿದೆ. ಅಕ್ಷರ ಪಡೆದ ಬಳಿಕ ಜಾತಿ ನಿರ್ಮೂಲನೆ ಆಗುತ್ತದೆ ಎಂಬ ಪರಿಕಲ್ಪನೆ ತಪ್ಪು ಎಂಬುದು ಅರ್ಥವಾಗಿದೆ. ಸಾಮಾಜಿಕ ಜಾಲತಾಣಗಳು ವಿಘಟನೆ ಹೆಚ್ಚು ಮಾಡಿವೆ ಎಂದು ಬೇಸರ ವ್ಯಕ್ತಪಡಿಸಿದರು.

> **ವಿಶ್ವದಲ್ಲಿ ಮಹಿಳೆಯರ ಅನುಭವಗಳು ಹೆಚ್ಚು ಬೆಳಕಿಗೆ ಬಂದಿಲ್ಲ. ಜನಸಂಖ್ಯೆಯಲ್ಲಿ ಅರ್ಧದಷ್ಟು ಇರುವ ಮಹಿಳೆಯರ ಅನುಭವದ ಕಥನಗಳು ಕೂಡ ಹೊರ ಬಂದಿರುವುದು ಕಡಿಮೆ.**
>
> **- ಶಾಂತಲಾ ದಾಮ್ಲೆ,**
> ಅವಳ ಹೆಜ್ಜೆ ಸಂಸ್ಥೆಯ ಮುಖ್ಯಸ್ಥರು

ದಸ್ತಗೀರ್ ಸಾಬ್ ದಿನ್ನಿ ಅವರ 'ಮಧು ಬಟ್ಟಲಿನ ಗುಟುಕು', ಶ್ರೀಹರ್ಷ ಸಾಲಿಮಠ ಅವರ 'ಹಲ್ಲೀರಾ ಮತ್ತು ರಂಗನಾಯಕಿ' ಹಾಗೂ ಮಮತಾ ಅರಸೀಕೆರೆ ಅವರ 'ಗಾಯಗಳಿಗೆ ವಿದಾಯ ಹೇಳಬೇಕು' ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ದಾವಣಗೆರೆ ಸಾಹಿತ್ಯ ವೇದಿಕೆ ನಡೆಸಿದ ಕಥಾ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಪಲ್ಲವಿ ಯಡಿಯೂರು, ನಟರಾಜ್ ಎಸ್, ತಿರುಪತಿ ಭಂಗಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಥೆಗಾರರಾದ ಕಂನಾಡಿಗಾ ನಾರಾಯಣ, ಮಲ್ಲಿಕಾರ್ಜುನ ಶೆಲ್ಲಿಕೇರಿ ಹಾಜರಿದ್ದರು.



# ಜಾತಿ ಮಾನವನ ಹುಟ್ಟಿನಿಂದ ಬಂದದ್ದಲ್ಲ

## ಹರಿಹರ : ಹರಿಹರ ತಾಲ್ಲೂಕು ಆಡಳಿತದ ಸವಿತಾ ಮಹರ್ಷಿ ಜಯಂತ್ಯೋತ್ಸವದಲ್ಲಿ ತಹಶೀಲ್ದಾರ್ ಗುರುಬಸವರಾಜ್

ಹರಿಹರ, ಫೆ. 9 - ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿರುವ ಸವಿತಾ ಸಮಾಜ ತನ್ನದೇ ಆದ ಪರಂಪರೆಯನ್ನು ಹೊಂದಿದ್ದು. ಸವಿತಾ ಮಹರ್ಷಿ ಈ ಸಮಾಜದ ಮೂಲ ಪುರುಷರಾಗಿದ್ದು. ಅವರು ಹಾಕಿಕೊಟ್ಟಿರುವ ಧರ್ಮ ಸಂದೇಶದಂತೆ ಇಂದಿಗೂ ತಮ್ಮ ಕಾಯಕ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿದ್ದಾರೆ ಎಂದು ತಹಶೀಲ್ದಾರ್ ಕೆ.ಎಂ. ಗುರುಬಸವರಾಜ.

ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ, ನಗರಸಭೆ, ರಾಷ್ಟ್ರೀಯ ಹಾಗೂ ನಾಡ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲ್ಲೂಕು ಸವಿತಾ ಸಮಾಜ ಸಂಯುಕ್ತಾಶ್ರಯದಲ್ಲಿ, ನಗರದ ತಾಲ್ಲೂಕು ಕಛೇರಿ ಸಭಾ ಭವನದಲ್ಲಿ ಏರ್ಪಡಿಸಿದ್ದ ಸವಿತಾ ಮಹರ್ಷಿ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿದ ಅವರು ಮಾತನಾಡಿದರು.

ಜಾತಿ ಮಾನವ ಹುಟ್ಟಿನಿಂದ ಬಂದದ್ದಲ್ಲ. ಅವರು ಮಾಡುತ್ತಿರುವ ಕಾಯಕದಿಂದ ಜಾತಿ ಸೃಷ್ಠಿಯಾಗಿದೆ. ಆಂಧ್ರದಿಂದ ದೇಶದ ಎಲ್ಲಾ ರಾಜ್ಯಗಳಲ್ಲಿ ಇವರು ಗುರುತಿಸಿಕೊಂಡಿದ್ದಾರೆ. ಈ ಸಮಾಜದಲ್ಲಿ 27 ಉಪ ಜಾತಿಗಳಿವೆ. ಅದರಲ್ಲಿ ಹಡಪದ ಸಮಾಜದವರು 12ನೇ ಶತಮಾನದಲ್ಲಿ ಕಲ್ಯಾಣ ಕ್ರಾಂತಿ ಪುರುಷ ಬಸವಣ್ಣನವರಿಂದ ಲಿಂಗ ದೀಕ್ಷೆ ಪಡೆದಿದ್ದಾರೆ ಎಂದು ಅವರು ಹೇಳಿದರು.

ರಾಜ್ಯದ ಗಡಿ ನಾಡಿನ ವಿವಿದೆಡೆ ಇವರುಗಳು ವಿವಿಧ ಹೆಸರುಗಳಿಂದ ಕರೆಯಲ್ಪಡುತ್ತಾರೆ. ದಕ್ಷಿಣ ಕರ್ನಾಟಕದಲ್ಲಿ ಸವಿತಾ ಸಮಾಜ, ಉತ್ತರ ಕರ್ನಾಟಕದಲ್ಲಿ ಹಡಪದ, ದಕ್ಷಿಣ ಕನ್ನಡದಲ್ಲಿ ಭಂಡಾರಿ, ಹಾಗೂ ಇನ್ನಿತರೆ ಭಾಗದಲ್ಲಿ ನಾವಿ, ನಯನ ಕ್ಷೇತ್ರಿಯ ಎಂಬ ನಾಮಾಂಕಿತದಿಂದ ಕರೆಯಲ್ಪಡುವ ಇವರುಗಳೆಲ್ಲಾ ಮೂಲತಃ ಆಂಧ್ರದವರೆಂದು ಇತಿಹಾಸ ಮೂಲಗಳಿಂದ ತಿಳಿದು ಬಂದಿದೆ, ಇತ್ತಿಚಿನ ದಿನಗಳಲ್ಲಿ ದಕ್ಷಿಣ ಭಾರತದಿಂದ ಬಂದಿರುವ ಬ್ಯೂಟಿ ಪಾರ್ಲರ್, ಸ್ಪಾ, ಇನ್ನಿತರೆ ಉದ್ಯಮಗಳಿಂದ ಇವರ ಮೂಲ ಕಸುಬಿಗೆ ಹಾನಿಯಾಗುತ್ತಿದೆ ಎಂದು ತಿಳಿದು ಬಂದಿದೆ. ಕುಲ ಕಸುಬು ಅಭಿವೃದ್ಧಿಗಾಗಿ ಇರುವ ಸರ್ಕಾರದ ಯೋಜನೆಗಳ ಲಾಬ ಪಡೆಯಲು ಮುಂದಾಗಬೇಕೆಂದು ತಹಶೀಲ್ದಾರ್ ಹೇಳಿದರು.

ತಾಲ್ಲೂಕು ಆರೋಗ್ಯ ಇಲಾಖೆಯ ಭೂಮೇಶ್, ಪಶುಪಾಲನಾ ಮತ್ತು ಪಶುವೈದ್ಯ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಸಿದ್ದಪ್ಪ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ವಿಜಯ ಮಹಾಂತೇಶ್, ರಾಜಸ್ವ ನಿರೀಕ್ಷಕ ಸಮೀರ್ ಅಹ್ಮದ್, ಗ್ರಾಮ ಲೆಕ್ಕಾಧಿಕಾರಿ ಹೆಚ್.ಜಿ. ಹೇಮಂತಕುಮಾರ್, ಸಂತೋಷ, ತಾಲ್ಲೂಕು ಸವಿತಾ ಸಮಾಜದ ಅಧ್ಯಕ್ಷ ರಾಜು, ಮಾಜಿ ಅಧ್ಯಕ್ಷ ಹನುಮಂತಪ್ಪ, ಕಾರ್ಯದರ್ಶಿ ಮಂಜುನಾಥ, ಸಮಿತಿ ಸದಸ್ಯರುಗಳಾದ ಸಿ.ಎನ್. ಗೋಪಾಲಸ್ವಾಮಿ, ಹೆಚ್.ಡಿ. ದಿವಾಕರ್, ಸಂತೋಷ, ಆನಂದ, ಆರ್. ಕಿರಣಕುಮಾರ್, ಮಂಜುನಾಥ ಶ್ರೀಧರ ಇದ್ದರು.

## ನಾಡಿದ್ದು ಸಾಮೂಹಿಕ ಗಾಯತ್ರಿ ಪೂಜೆ

ದಾವಣಗೆರೆ, ಫೆ.9- ಶ್ರೀ ಗಾಯತ್ರಿ ಪರಿವಾರದಿಂದ ಪ್ರತೀ ತಿಂಗಳ ಹುಣ್ಣಿಮೆಯೆಂದು ನಡೆಸುವ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ, ಭಾರತ ಹುಣ್ಣಿಮೆ ಅಂಗವಾಗಿ ಇದೇ ದಿನಾಂಕ 12ರ ಬುಧವಾರ ಬೆಳಿಗ್ಗೆ 7ಗಂಟೆಗೆ ನಡೆಯಲಿದೆ. ನಗರದ ಜಯದೇವ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ನಡೆಯಲಿರುವ ಪೂಜಾ ಕಾರ್ಯಕ್ರಮದಲ್ಲಿ ಬಿ.ಸತ್ಯನಾರಾಯಣ ಮೂರ್ತಿ ಸೇವಾಕರ್ತರಾಗಿದ್ದಾರೆ.

## ಮಾಯಕೊಂಡ : ಭದ್ರಾ ನಾಲೆಯ ಅಕ್ರಮ ಮೋಟಾರ್ ತೆರವು ಕಾರ್ಯ

ಮಾಯಕೊಂಡ, ಫೆ. 9 - ಸಮೀಪದ ಭದ್ರಾ ನಾಲೆಯಲ್ಲಿ ಅಕ್ರಮವಾಗಿ ಅಳವಡಿಸಿದ ಮೋಟಾರ್ ತೆರವು ಕಾರ್ಯಾಚರಣೆ ನಡೆಯಿತು. ಭದ್ರಾ ಅಚ್ಚುಕಟ್ಟು ಭಾಗದಲ್ಲಿ ಇದೀಗ ನಾಟಿ ಭರದಿಂದ ಸಾಗಿದ್ದು, ಅಚ್ಚುಕಟ್ಟು ಪ್ರದೇಶದ ಕೊನೆ ಭಾಗಕ್ಕೆ ನೀರು ತಲುಪುತ್ತಿಲ್ಲ ಎಂದು ರೈತರು ಆರೋಪಿಸಿದ್ದರು.

ಜಿಲ್ಲಾಡಳಿತದ ಆದೇಶದ ಮೇರೆಗೆ ಉಪ ವಿಭಾಗಾಧಿಕಾರಿ ಸಂತೋಷ ಕುಮಾರ್ ನೇತೃತ್ವದಲ್ಲಿ ಶನಿವಾರ ಕಾರ್ಯಾಚರಣೆ ನಡೆಸಲಾಯಿತು. ಕುರ್ಕಿ, ಅಣಬೇರು, ಬಾಡ, ನಲ್ಕುಂದ ಮತ್ತಿತರೆ ಕಡೆ ನಾಲೆಯಲ್ಲಿ ಅಳವಡಿಸಲಾದ ಅಕ್ರಮ ಮೋಟಾರ್ ತೆರವುಗೊಳಿಸಲಾಯಿತು. ಸುಮಾರು ನೂರಕ್ಕೂ ಹೆಚ್ಚು ಮೋಟಾರ್ ತೆರವುಗೊಳಿಸಲಾಯಿತು. ಬೆಸ್ಕಾಂ ಅಧಿಕಾರಿಗಳು ಅಕ್ರಮ ಮೋಟಾರುಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸಿದರು.

ಕರ್ನಾಟಕ ನೀರಾವರಿ ನಿಗಮ ನಿಯಮಿತದ ಕಾರ್ಯಪಾಲಕ ಇಂಜಿನಿಯರ್ ಮನೋಜ್ ಕುಮಾರ್ ಮತ್ತು ಸಿಬ್ಬಂದಿ, ಕಂದಾಯ ಇಲಾಖೆಯ ನಿರೀಕ್ಷಕ ಹಿರೇಗೌಡರು ಮತ್ತು ಸಿಬ್ಬಂದಿ, ಮಾಯಕೊಂಡ ಮತ್ತು ಹದಡಿ ಪೊಲೀಸ್ ಠಾಣೆಯ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.



## ನಗರದಲ್ಲಿ ಇಂದಿನಿಂದ ಶ್ರೀ ಕೊಟ್ಟೂರೇಶ್ವರ ಸ್ವಾಮಿ ಪ್ರವಚನ



ದಾವಣಗೆರೆಯ ಕೊಟ್ಟೂರು ಶ್ರೀ ಗುರು ಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ವತಿಯಿಂದ ಭಕ್ತರು ಪಾದಯಾತ್ರೆ ಕೈಗೊಳ್ಳುವ ಮುನ್ನ ವಿರಕ್ತಮಠದ ಆವರಣದಲ್ಲಿ ಇಂದಿನಿಂದ ಇದೇ ದಿನಾಂಕ 17 ರವರೆಗೆ ಪ್ರತಿ ದಿನ ಸಂಜೆ 6 ರಿಂದ 8.30 ರವರೆಗೆ ಶ್ರೀ ಕೊಟ್ಟೂರು ಗುರು ಬಸವೇಶ್ವರರ ಪುರಾಣ-ಪ್ರವಚನ ಮರೋಳ ಹಿರೇಮಠದ ಮುದುಕಯ್ಯ ಶಾಸ್ತ್ರಿಗಳು ಪ್ರವಚನ ನಡೆಸಿಕೊಡಲಿದ್ದಾರೆ.

**ವಿದೇಶ ಪ್ರವಾಸ - ಶುಭ ಹಾರೈಕೆ**





ದಿನಾಂಕ 10.02.2025ನೇ ಸೋಮವಾರ ಬೆಂಗಳೂರಿನಿಂದ ದುಬೈ ದೇಶಕ್ಕೆ ಪ್ರವಾಸ ಕೈಗೊಂಡಿರುವ **ರಮೇಶ್ ಹಿತ್ತಲಮನಿ** ಮತ್ತು **ಹನುಮಂತಪ್ಪ ಎಸ್.ಕೆ.** ಅವರ ಪ್ರಯಾಣ ಸುಖಕರವಾಗಿರಲೆಂದು ಶುಭ ಹಾರೈಸುವ..

**ಹೋಲ್‌ಸೇಲ್ ಎಲೆಕ್ಟ್ರಿಕಲ್ ವಿತರಕರು**
**ಆದಿ ಡಿಸ್ಟ್ರಿಬ್ಯೂಟರ್ಸ್** ದಾವಣಗೆರೆ
**ಕಿಶೋರ್ ಎಲೆಕ್ಟ್ರಿಕಲ್ಸ್,** ದಾವಣಗೆರೆ
**ಆರ್.ಜೆ. ಎಂಟರ್ ಪ್ರೈಸಸ್** ದಾವಣಗೆರೆ
**ಮಾಲೀಕರು ಮತ್ತು ಸಿಬ್ಬಂದಿ ವರ್ಗ**

# ಸ್ತ್ರೀ ಸಮಾನತೆಯಿಂದ ಸಮಾಜದ ಉದ್ಧಾರ ಸಾಧ್ಯ

## ಎಸ್.ಬಿ.ಸಿ. ಕಾಲೇಜಿನ ಕಾರ್ಯಕ್ರಮದಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್



ದಾವಣಗೆರೆ, ಫೆ.9- ಸಮುದಾಯದಲ್ಲಿ ಮಹಿಳೆಯರನ್ನು ಸಮಾನತೆಯಿಂದ ಕಾಣದಿದ್ದರೇ, ಸಮಾಜದ ಉದ್ಧಾರ ಅಸಾಧ್ಯ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಹೇಳಿದರು.

ಅಧಿವಕ್ತಾ ಪರಿಷತ್, ಎಸ್.ಬಿ.ಸಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರಗಳ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು 'ಸ್ವಾಸ್ಥ್ಯ ಸಮಾಜದ ನಿರ್ಮಾಣಕ್ಕೆ ಮಹಿಳೆಯರ ಪಾತ್ರ' ಎಂಬ ವಿಷಯದಡಿ ಅವರು ಮಾತನಾಡಿದರು.

12ನೇ ಶತಮಾನದ ಅನುಭಾವ ಮಂಟಪದಲ್ಲಿ ಸ್ತ್ರೀ ಚಿಂತನೆ, ಸ್ವಾತಂತ್ರ್ಯ ಹಾಗೂ ಅವರ ಸಮಾನತೆಗೆ ಪ್ರಾಶಸ್ತ್ಯ ನೀಡಲಾಗಿತ್ತು. ಹಾಗಾಗಿ ಬಸವಣ್ಣ ಸ್ತ್ರೀ ಸಮಾನತೆಯ ಹರಿಕಾರರು ಆಗಿದ್ದಾರೆ ಎಂದು ತಿಳಿಸಿದರು.

> **ಅಂಬೇಡ್ಕರ್ ಜೀ ಅವರೂ ಹೇಳುತ್ತಿದ್ದರು. 'ಸ್ತ್ರೀಯರಿಗೆ ಸಮಾನತೆ ಸಿಗದಿದ್ದರೇ ರಾಷ್ಟ್ರ ಉದ್ಧಾರ ಆಗಲ್ಲ. ಹಾಗಾಗಿ ಅನುಚ್ಛೇದ 15(3)ನ್ನು ಮಾಡಿದರು.**
>
> **- ಕೃಷ್ಣ ಎಸ್. ದೀಕ್ಷಿತ್**
> ಹೈಕೋರ್ಟ್ ನ್ಯಾಯಮೂರ್ತಿ

ಮರತೂರಿನ ವಿಜ್ಞಾನೇಶ್ವರನ ಮಿತಾಕ್ಷರದಲ್ಲಿ 'ಯಾವುದೇ ಮನೆಯಲ್ಲಿ ನಡೆಯುವ ಹೋಮ-ಹವನಗಳು, ಷೋಡಶ ಸಂಸ್ಕಾರಗಳಲ್ಲಿ ಹೆಣ್ಣು ಕೂರುವ ದಿಕ್ಕು ಬದಲಾಗಬಹುದು. ಆದರೆ ಅವಳ ಉಪಸ್ಥಿತಿ ಬೇಕೇ-ಬೇಕು' ಎಂದು ಹೇಳುತ್ತದೆ ಎಂದು ವಿವರಿಸಿದರು.

ವೇದಕಾಲದಲ್ಲಿ ಮಹಿಳೆ, ಗಂಡನೊಂದಿಗೆ ವಾಗ್ವಾದ ಮಾಡುತ್ತಿದ್ದಳು ಎನ್ನುವ ಶ್ಲೋಕಗಳಿವೆ. 'ಎಲ್ಲೆಲ್ಲಿ ತಾಯಿ ಇರುತ್ತಾಳೊ, ಅಲ್ಲಲ್ಲಿ ಭಗವಂತ ಇರುತ್ತಾನೆ ಎಂದು ಮನುಸ್ಮೃತಿ ಹೇಳುತ್ತದೆ ಎಂದರು.

7ನೇ ಶತಮಾನದಲ್ಲಿ ಮಂಡನ ಮಿಶ್ರ ಮತ್ತು ಆದಿ ಶಂಕರರ ನಡುವೆ ಶ್ರೇಷ್ಠ ಚರ್ಚೆ ನಡೆದಿತ್ತು. ಇದರಲ್ಲಿ ಮಂಡನ ಮಿಶ್ರನ ಹೆಂಡತಿ ಉಭಯ ಭಾರತಿಯೇ ನ್ಯಾಯಮೂರ್ತಿ ಆಗಿದ್ದಳು. ಹಾಗಾಗಿ ಮಹಿಳೆಯನ್ನು ನ್ಯಾಯ ದೇವತೆ ಎಂದು ಕರೆಯುತ್ತೇವೆ ಎಂದು ಹೇಳಿದರು.

ಇಬ್ಬರ ಚರ್ಚೆಯಲ್ಲಿ ಉಭಯ ಭಾರತಿ ಹೇಳುತ್ತಾರೆ, 'ಆದಿಶಂಕರರೇ ನೀವು, ನನ್ನ ಗಂಡನೊಂದಿಗೆ ಚರ್ಚೆಯಲ್ಲಿ ಗೆದ್ದಿದ್ದೀರಿ' ಎಂದು ಗಂಡನ ವಿರುದ್ಧವೇ ನಿಷ್ಪಕ್ಷವಾಗಿ ತೀರ್ಪು ನೀಡಿರುತ್ತಾಳೆ ಎಂಬ ಸನ್ನಿವೇಶವನ್ನು ವಿವರಿಸಿದರು.

ಭಾರತೀಯ ಸೌಂದರ್ಯ ಮೀಮಾಂಸೆಯಲ್ಲಿ ಸ್ತ್ರೀ ಅಡಗಿ ಕೂಳಿತಿದ್ದಾಳೆ ಎಂದು ಓಶೋ ಭಗವಾನ್ ರಜನೀಶ್ **(5ನೇ ಪುಟಕ್ಕೆ)**

# ರಾಜ್ಯ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷರಾಗಿ ವೀರೇಶ್ ಒಡೇನಪುರ



ದಾವಣಗೆರೆ, ಫೆ. 9- ದಾವಣಗೆರೆ ಜಿಲ್ಲಾ ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಎಸ್. ಒಡೇನಪುರ ಅವರು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಕೇಂದ್ರ ಸಂಘಕ್ಕೆ ನೂತನ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದು, ಈಚೆಗೆ ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಅಧಿಕಾರ ಸ್ವೀಕರಿಸಿದ್ದಾರೆ ಎಂದು ದಾವಣಗೆರೆ ಜಿಲ್ಲಾ ರಾಜ್ಯ ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ಬಿ. ಪಾಲಾಕ್ಷಿ ಅವರು ತಿಳಿಸಿದ್ದಾರೆ.


# ಭಾವಸಾರ ಕ್ಷತ್ರೀಯ ವಿದ್ಯಾವರ್ಧಕ ಸಂಘಕ್ಕೆ ಅಧ್ಯಕ್ಷರಾಗಿ ಜಯಪ್ರಕಾಶ್ ಅಂಬರ್‌ಕರ್



ದಾವಣಗೆರೆ, ಫೆ. 9 - ನಗರದ ಭಾವಸಾರ ಕ್ಷತ್ರೀಯ ವಿದ್ಯಾವರ್ಧಕ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಹಾಲಿ ಅಧ್ಯಕ್ಷರೂ ಆಗಿರುವ ಹಿರಿಯ ಕೈಗಾರಿಕೋದ್ಯಮಿ ಜಯಪ್ರಕಾಶ್ ಅಂಬರ್‌ಕರ್ ಅವರು ಸಂಘದ ಅಧ್ಯಕ್ಷರಾಗಿ ಮತ್ತೊಂದು ಅವಧಿಗೆ ಪುನರಾಯ್ಕೆಯಾಗಿದ್ದಾರೆ.

ಎ.ವಿ. ರಮೇಶ್ ಉಪಾಧ್ಯಕ್ಷರಾಗಿ, ಪ್ರಶಾಂತ್ ಅಂಬರ್‌ಕರ್ ಪ್ರಧಾನ ಕಾರ್ಯದರ್ಶಿಯಾಗಿ, ಎ.ಎನ್. ಮದನ್ ಕುಮಾರ್ ಕೋಶಾಧ್ಯಕ್ಷರಾಗಿ ಹಾಗೂ ಅತೀತ್ ಅಂಬರ್‌ಕರ್ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಸತ್ಯನಾರಾಯಣರಾವ್ ಸಾಕ್ರೆ ಹಾಗೂ ಗುರುನಾಥ ಮಿರಜಕರ್ ಆಡಳಿತಾಧಿಕಾರಿಗಳಾಗಿದ್ದಾರೆ. ರಾಜಶೇಖರ್ ಬೋಂದಾಡೆ, ಡಾ. ಎಂ.ಆರ್. ಜಯಪ್ರಕಾಶ್, ರಘು ಮುಸಳೆ, ಶಿವಪ್ರಕಾಶ್ ಅಂಬರ್‌ಕರ್, ಮದನ ಯು. ಅಂಬರ್‌ಕರ್, ಸಾವನ್ ಅಂಬರ್‌ಕರ್, ಸುನೀಲ್ ಬೆಳಂಕರ್, ಸಂಜಯ ಪಟಕೆ ನಿರ್ದೇಶಕರಾಗಿದ್ದಾರೆ.


# ಶ್ರೀ ಕಾಡಸಿದ್ದೇಶ್ವರ ಮಠದ ಶ್ರೀಗಳಿದ ಅಮೃತ ಸ್ನಾನ



ದಾವಣಗೆರೆ, ಫೆ.9- ಪ್ರಯಾಗ ರಾಜ್‌ನ ತ್ರಿವೇಣಿ ಸಂಗಮದಲ್ಲಿ ತುಮಕೂರು ಜಿಲ್ಲೆಯ ನೊಣವಿನ ಕೆರೆಯ ಶ್ರೀ ಕಾಡ ಸಿದ್ದೇಶ್ವರ ಮಠದ ಶ್ರೀ ಡಾ. ಕರಿವೃಷಭ ದೇಶಿಕೇಂದ್ರ ಶಿವಯೋಗಿಶ್ವರ ಮಹಾಸ್ವಾಮೀಜಿ ಪವಿತ್ರ ಅಮೃತ ಸ್ನಾನ ಮಾಡಿದರು.


> **ಶ್ರೀಗಳ ಜೊತೆ ಡಿಸಿಎಂ ಡಿಕೆಶಿ ಅಮೃತ ಸ್ನಾನ**

ಶ್ರೀಗಳ ಜೊತೆ ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಕುಟುಂಬದವರು ಪವಿತ್ರ ಅಮೃತ ಸ್ನಾನ ಮಾಡಿ ಶ್ರೀಗಳ ಆಶೀರ್ವಾದ ಪಡೆದರು. ನಂಬಿಕೆ, ಭಕ್ತಿ ಮತ್ತು ಆಧ್ಯಾತ್ಮಿಕತೆಯ ಸಂಗಮವಾದ ಪ್ರಯಾಗ್‌ರಾಜ್‌ನ ಮಹಾಕುಂಭದಲ್ಲಿ ತ್ರಿವೇಣಿ ಸಂಗಮಕ್ಕೆ ಡಿ.ಕೆ. ಶಿವಕುಮಾರ್ ಪೂಜೆ ಸಲ್ಲಿಸಿದರು.










KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas